

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 13 ಬುಧವಾರ 2022

ಸಂಪುಟ: 43 | ಸಂಚಿಕೆ: 353 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಪ್ರಧಾನಿ ಮೋದಿಗೆ ಸಚಿವ ಈಶ್ವರಪ್ಪ ವಿರುದ್ಧ ಶೇ.40 ಕಮಿಷನ್ ದೂರು ನೀಡಿದ್ದ

ಗುತ್ತಿಗೆದಾರ ಆತ್ಮಹತ್ಯೆ

- ನನ್ನ ಸಾವಿಗೆ ಪಂಚಾಯತ್‌ರಾಜ್ ಸಚಿವ ಈಶ್ವರಪ್ಪ ನೇರ ಹೊಣೆ: ಮಾಧ್ಯಮಕ್ಕೆ ಸಂದೇಶ ರವಾನೆ
- ಉಡುಪಿಯ ಶಾಂಭವಿ ಹೋಟೆಲ್ ರೂಂನಲ್ಲಿ ಸಾವಿಗೆ ಶರಣು
- ಮುಖ್ಯಮಂತ್ರಿ ಬೊಮ್ಮಾಯಿ ಅವರ ಉಡುಪಿ ಪ್ರವಾಸದ ವೇಳೆಯೇ ದುರಂತ
- ಇತ್ತೀಚೆಗೆ ರಾಜ್ಯದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಸಹ ರಾಜ್ಯದಲ್ಲಿ ಶೇ.40 ಕಮಿಷನ್ ಸುಲಿಗೆ ನಡೆಯುತ್ತಿದೆ ಎಂದು ಪ್ರಧಾನಿಗೆ ದೂರು ನೀಡಿದ್ದರು

ಬೆಂಗಳೂರು, ಏ.12 (ಕೆಎಂಶಿ)– ಆಡಳಿತ ನಡೆಸುವವರ ಕಮಿಷನ್ ದಾಹಕ್ಕೆ ಗುತ್ತಿಗೆದಾರ ಬಲಿಯಾಗಿದ್ದಾನೆ.

ಪಂಚಾಯತ್‌ರಾಜ್ ಇಲಾಖೆಯಲ್ಲಿ ತಾನು ಮಾಡಿದ ಕಾಮಗಾರಿಗೆ ಶೇ.40ರಷ್ಟು ಕಮಿಷನ್ ನೀಡಲು ಸಾಧ್ಯವಾಗದೇ ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆಗೆ ಶರಣಾಗಿದ್ದಾನೆ.


ಸಂತೋಷ್ ಪಾಟೀಲ್

ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ಮಾಧ್ಯಮಗಳಿಗೆ ಸಂದೇಶ ರವಾನೆ ಮಾಡಿ, ನನ್ನ ಸಾವಿಗೆ ಪಂಚಾಯತ್ ರಾಜ್ ಇಲಾಖೆ ಸಚಿವ ಕೆ.ಎಸ್. ಈಶ್ವರಪ್ಪ ನೇರ ಹೊಣೆ ಎಂದು ದೂರಿದ್ದಾನೆ.



ಸಾವಿಗೂ ಮುನ್ನ ಮಾಧ್ಯಮಕ್ಕೆ ಸಂತೋಷ್ ಸಂದೇಶ

ರಾಜ್ಯದಲ್ಲಿ ಯಾವುದೇ ಕಾಮಗಾರಿ ಕೈಗೊಂಡರೆ ಆಡಳಿತ ನಡೆಸುವವರಿಗೆ ಶೇ.40ರಷ್ಟು ಕಮಿಷನ್ ನೀಡಬೇಕೆಂದು ರಾಜ್ಯ ಗುತ್ತಿಗೆದಾರರ ಸಂಘ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ರಾಜ್ಯದಲ್ಲಿರುವ 'ಬಿಜೆಪಿ ಸರ್ಕಾರ ಕಮಿಷನ್ ಸರ್ಕಾರ' ಎಂದು ಆರೋಪಿಸಿ, ಇಡೀ ರಾಷ್ಟ್ರದಲ್ಲಿ ವಿವಾದಕ್ಕೆ ಎಡೆಮಾಡಿದ್ದರು. ಕಳೆದ 6 ತಿಂಗಳಿನಿಂದ ಕಮಿಷನ್ ವಿಚಾರ ಚರ್ಚೆಯಲ್ಲಿರುವಾಗಲೇ ಗುತ್ತಿಗೆದಾರನೊಬ್ಬ ಇದೇ ವಿಚಾರಕ್ಕೆ ಆತ್ಮಹತ್ಯೆ ಮಾಡಿಕೊಂಡಿರುವುದರ ಆರೋಪ ಕೆ.ಎಸ್.ಈಶ್ವರಪ್ಪ ಅವರ ಕೊರಳಿಗೆ ಸುತ್ತಿಕೊಂಡಿದೆ.

ಆತ್ಮಹತ್ಯೆ ಮಾಡಿಕೊಂಡಿರುವ ಗುತ್ತಿಗೆದಾರ ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಚಿವ ಈಶ್ವರಪ್ಪ ವಿರುದ್ಧ ಶೇ.40 ಕಮಿಷನ್ ಕೇಳಿದ ಬಗ್ಗೆ ದೂರು ನೀಡಿದ್ದರು. ಸಚಿವರಾಗಿರುವುದರಿಂದ ಅವರ ವಿರುದ್ಧ ಮೊಕದ್ದಮೆ ದಾಖಲು ಸಂಬಂಧ ಪೊಲೀಸ್ ● 10ನೇ ಪುಟಕ್ಕೆ

ಗುತ್ತಿಗೆದಾರ ಸಂತೋಷ್ ಪಟೇಲ್ ಆತ್ಮಹತ್ಯೆಗೂ ನನಗೂ ಯಾವುದೇ ಸಂಬಂಧವಿಲ್ಲ. ಆತ್ಮಹತ್ಯೆ ಪ್ರಕರಣದಲ್ಲಿ ನನ್ನ ಪಾತ್ರ ಇಲ್ಲ. ಆತ ಯಾರೆಂಬುದೇ ನನಗೆ ಗೊತ್ತಿಲ್ಲ. ತಮ್ಮ ಇಲಾಖೆಯ ಮೇಲೆ ಶೇ.40ರಷ್ಟು ಕಮಿಷನ್ ಆರೋಪ ಮಾಡಿದ ಸಂತೋಷ ಆತ್ಮಹತ್ಯೆ ಪ್ರಕರಣದಲ್ಲಿ ನನ್ನ ಪಾತ್ರ ಏನೂ ಇಲ್ಲ. ಆತ ಯಾರೆಂಬುದೇ ನನಗೆ ಗೊತ್ತೇ ಇಲ್ಲ. ಈತ ನಮ್ಮ ಇಲಾಖೆಯ ಮೇಲೆ ಆರೋಪ ಮಾಡಿರುವ ವಿಚಾರದಲ್ಲಿ ನಾನು ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದೇನೆ. –ಕೆ.ಎಸ್.ಈಶ್ವರಪ್ಪ, ಸಚಿವ.


ಸಚಿವ ಈಶ್ವರಪ್ಪನವರೇ ನನ್ನ ಪತಿ ಸಾವಿಗೆ ಕಾರಣ...

ಸಂತೋಷ್ ಪತ್ನಿ ಜಯಶ್ರೀ ಆರೋಪ



ಬೆಂಗಳೂರು, ಏ. 12– ಗುತ್ತಿಗೆಯಲ್ಲಿ ಶೇ. 40 ಕಮಿಷನ್ ಕೇಳುತಿದ್ದ ಸಚಿವ ಈಶ್ವರಪ್ಪನವರೇ ನನ್ನ ಪತಿಯನ್ನು ಕೊಲೆ ಮಾಡಿಸಿದ್ದಾರೆ ಎಂದು ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿರುವ ಗುತ್ತಿಗೆದಾರ ಸಂತೋಷ್ ಪಾಟೀಲ್ ಅವರ ಪತ್ನಿ ಜಯಶ್ರೀ ಗಂಭೀರ ಆರೋಪ ಮಾಡಿದ್ದಾರೆ. ತಮ್ಮ ಪತಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ತಿಳಿಯುತ್ತಿದ್ದಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಪತಿ ಆತ್ಮಹತ್ಯೆ ಮಾಡಿಕೊಳ್ಳುವವರಲ್ಲ, ಅವರನ್ನು ಕೊಲೆ ಮಾಡಿದ್ದಾರೆ. ನನ್ನ ಪತಿ ಬಿಜೆಪಿ ಬಿಜೆಪಿ ಅಂತ ತಮ್ಮ ಜೀವವನ್ನೇ ● 10ನೇ ಪುಟಕ್ಕೆ

ಸಂತೋಷ್ ಅವರ ದೇಹ ಉಡುಪಿಯ ಹೋಟೆಲೊಂದರಲ್ಲಿ ನೇತಾಡುವ ಸ್ಥಿತಿಯಲ್ಲಿ ಸಿಕ್ಕಿರುವ ಕುರಿತು ಮಾತ್ರ ತಮಗೆ ಮಾಹಿತಿ ಲಭ್ಯವಾಗಿದೆ. ಪೊಲೀಸರು ನಡೆಸುವ ತನಿಖೆಯಲ್ಲಿ ಸರ್ಕಾರ ಯಾವುದೇ ರೀತಿಯ ಹಸ್ತಕ್ಷೇಪ ಮಾಡುವುದಿಲ್ಲ. ಪೊಲೀಸ್ ಇಲಾಖೆ ಸರ್ವ ಸ್ವತಂತ್ರವಾಗಿ ತನಿಖೆ ನಡೆಸುವುದು. ಒಮ್ಮೆ ಪ್ರಾಥಮಿಕ ವರದಿ ಸಿಕ್ಕಿತು ಅಂತಾದರೆ ಅದರ ಆಧಾರದ ಮೇಲೆ ತಪ್ಪಿತಸ್ಥರು ಯಾರೇ ಆಗಿದ್ದರೂ ಸೂಕ್ತ ಕ್ರಮ ಕೈಗೊಳ್ಳಲಾಗುವುದು.



–ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಈಶ್ವರಪ್ಪ ಬಂಧನಕ್ಕೆ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಆಗ್ರಹ

ಬೆಂಗಳೂರು, ಏ.12 (ಕೆಎಂಶಿ)–ಗುತ್ತಿಗೆದಾರನ ಸಾವಿಗೆ ಕಾರಣರಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾಗೊಳಿಸಿ, ಅವರನ್ನು ಬಂಧಿಸಬೇಕೆಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗ್ರಹಿಸಿದ್ದಾರೆ. ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂತೋಷ್ ಪಾಟೀಲ್ ಎಂಬ ಗುತ್ತಿಗೆದಾರ, ಬಿಜೆಪಿ ಕಾರ್ಯಕರ್ತನೊಬ್ಬ ಈಶ್ವರಪ್ಪ ಅವರಿಗೆ ಕಮಿಷನ್ ನೀಡಿ ರಸ್ತೆ ಕಾಮಗಾರಿಯನ್ನು ಗುತ್ತಿಗೆ ಪಡೆದಿದ್ದರು. ಆದರೆ ಅವರು ಹೆಚ್ಚು ಕಮಿಷನ್‌ಗೆ ಬೇಡಿಕೆ ಇಟ್ಟಿದ್ದಾರೆ ಎಂದು ಆರೋಪಿಸಿ ನನ್ನ ಸಾವಿಗೆ ಸಚಿವರು ● 10ನೇ ಪುಟಕ್ಕೆ





ರಾಜ್ಯದಲ್ಲಿ 150 ಸ್ಥಾನ ಗೆದ್ದು ಮತ್ತೆ ಸರ್ಕಾರ ರಚಿಸುತ್ತೇವೆ

- ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ವಿಶ್ವಾಸ
- ಅಮಿತ್ ಶಾ ಅವರ ಟಾರ್ಗೆಟ್ 130; ಆದರೆ 150 ಸ್ಥಾನ ಗೆಲ್ಲುವ ವಾತಾವರಣವಿದೆ
- ರಾಜ್ಯಾದ್ಯಂತ ಮೂರು ತಂಡಗಳ ಪ್ರವಾಸ; ಪಕ್ಷ ಸಂಘಟನೆಗೆ ಕಟಿಬದ್ಧ


ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಸುದ್ದಿಗೋಷ್ಠಿ ನಡೆಸಿದರು. ಸಚಿವ ಗೋಪಾಲಯ್ಯ, ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಚಿವರಾದ ಕೆ.ಎಸ್.ಈಶ್ವರಪ್ಪ, ವಿ.ಸೋಮಣ್ಣ, ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್ ಸಿಂಹ ಚಿತ್ರದಲ್ಲಿದ್ದಾರೆ.

ಮೈಸೂರು, ಏ.12(ಎಸ್‌ಬಿಡಿ)– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ 150 ಸ್ಥಾನ ಗಳಿಸುವುದರೊಂದಿಗೆ ಮತ್ತೆ ಬಿಜೆಪಿ ಸರ್ಕಾರ ರಚನೆಯಾಗಲಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನೊಂದು ವರ್ಷ ವಿದೆ. ಕಳೆದಿರುವ 4 ವರ್ಷಗಳಲ್ಲಿ 3 ವರ್ಷ ಅಧಿಕಾರ ನಡೆಸಿರುವ ಬಿಜೆಪಿ ಸಂಘಟನಾತ್ಮವಾಗಿ ಬೆಳೆದಿದೆ. ಎರಡೂವರೆ ವರ್ಷ ಕೋವಿಡ್ ಕಾಲಘಟ್ಟದಲ್ಲೂ ಸಾಕಷ್ಟು ಸಂಘಟನಾತ್ಮಕ ಚಟುವಟಿಕೆ ನಡೆಸಲಾಗಿದೆ. ಸರ್ವ ವ್ಯಾಪಿ–ಸರ್ವ ಸ್ಪರ್ಶ ಪಕ್ಷವಾಗಿರುವ ಬಿಜೆಪಿ, ಗ್ರಾಮ ಪಂಚಾಯ್ತಿ, ವಿಧಾನಪರಿಷತ್ ಚುನಾವಣೆ ಹಾಗೂ ಉಪಚುನಾವಣೆಗಳಲ್ಲಿ ಅತೀ ಹೆಚ್ಚು ಸ್ಥಾನ ಗಳಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 130 ಸ್ಥಾನ ಗೆಲ್ಲಬೇಕೆಂದಿದ್ದರು. ಆದರೆ ಇಂದಿನ ವಾತಾವರಣ ಗಮನಿಸಿದರೆ 150 ಸ್ಥಾನ ಗೆಲ್ಲುವ ವಿಶ್ವಾಸವಿದ್ದು, ಆ ನಿಟ್ಟಿನಲ್ಲಿ ಎಲ್ಲಾ ರೀತಿಯ ತಯಾರಿ ಮಾಡಿಕೊಳ್ಳಲಾಗುತ್ತಿದೆ ಎಂದರು. ● 9ನೇ ಪುಟಕ್ಕೆ

ಶ್ರೀರಾಮ ಸೇನೆಗೂ ನಮಗೂ ಸಂಬಂಧವಿಲ್ಲ!

ಮೈಸೂರು: ಶ್ರೀರಾಮ ಸೇನೆಗೂ ಬಿಜೆಪಿಗೂ ಯಾವುದೇ ಸಂಬಂಧ ಇಲ್ಲ ಎಂದು ಪಕ್ಷದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿ, ಬಿಜೆಪಿಗೆ ಸಂಘಪರಿವಾರದ ಸಂಘಟನೆಗಳೊಂದಿಗೆ ಸಂಬಂಧವಿದೆ ಹೊರತು ಶ್ರೀರಾಮ ಸೇನೆಯೊಂದಿಗಿಲ್ಲ. ಯಾವ ವಿಚಾರಕ್ಕಾದರೂ ಸಂಘಟನೆಗಳು ಹಾಗೂ ವ್ಯಕ್ತಿಗತವಾಗಿ ನಡೆಸುವ ಚಟುವಟಿಕೆಗಳಿಗೆ ಬಿಜೆಪಿ ಜವಾಬ್ದಾರಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಶಾಲಾ–ಕಾಲೇಜು ಸಮವಸ್ತ್ರ ವಿಚಾರವಾಗಿ ನ್ಯಾಯಾಲಯಕ್ಕೆ ಹೋಗಿದ್ದಾರೆ. ನ್ಯಾಯಾಲಯ ನೀಡಿದ ಆದೇಶವನ್ನು ಸರ್ಕಾರ ಪಾಲನೆ ಮಾಡಿದೆ. ಜವಾಬ್ದಾರಿಯುತ ತೀರ್ಮಾನ ತೆಗೆದುಕೊಂಡು ಅದನ್ನು ಪರಿಪಾಲಿಸಿದೆ. ಇದರಲ್ಲಿ ಮತಬ್ಯಾಂಕ್ ಪ್ರಶ್ನೆಯೇ ಇಲ್ಲ. ಅದೇನಿದ್ದರೂ ಕಾಂಗ್ರೆಸ್ ಪಕ್ಷದ ಬುದ್ಧಿ. ವಿವಾದದಿಂದ ಹಿಂದೂಗಳ ಮತವನ್ನು ಕ್ರೋಢೀಕರಿಸುವ ಅವಶ್ಯಕತೆ ಬಿಜೆಪಿಗಿಲ್ಲ. ಈ ವಿಚಾರದಲ್ಲಿ ಕಾಂಗ್ರೆಸ್ ಬೆಂಕಿಹಚ್ಚಿ, ಲಾಭ ಪಡೆಯುವ ಪ್ರಯತ್ನ ನಡೆಸುತ್ತಿದೆ. ಈ ನಿಟ್ಟಿನಲ್ಲಿ ಜೆಡಿಎಸ್ ಕೂಡ ಪ್ರಯತ್ನಿಸುತ್ತಿದೆ. ಬಿಜೆಪಿ ಯಾವ ಸಂಘಟನೆಯನ್ನೂ ಸಮರ್ಥನೆ ಮಾಡಿಕೊಳ್ಳುವುದಿಲ್ಲ ಹಾಗೆಯೇ ಯಾವ ವರ್ಗವನ್ನೂ ಟಾರ್ಗೆಟ್ ಮಾಡುತ್ತಿಲ್ಲ. ಸರ್ಕಾರ ಕಾನೂನು ಬದ್ಧವಾಗಿ ನಡೆದುಕೊಳ್ಳಲಿದೆ ಎಂದು ತಿಳಿಸಿದರು.

ಚಾಮುಂಡಿಬೆಟ್ಟದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಂದ ಜನತಾ ಜಲಧಾರೆ ಯಾತ್ರಾ ರಥಕ್ಕೆ ಪೂಜೆ

ಮೈಸೂರು,ಏ.12(ಎಂಟಿವೈ)– ರಾಜ್ಯದಲ್ಲಿ ಎಲ್ಲಾ ನೀರಾವರಿ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಆಗ್ರಹಿಸಿ ಜೆಡಿಎಸ್ ಏ.16ರಿಂದ 'ಜನತಾ ಜಲಧಾರೆ ಯಾತ್ರೆ' ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಇಂದು ಚಾಮುಂಡಿಬೆಟ್ಟದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಯಾತ್ರಾ ರಥಕ್ಕೆ ಪೂಜೆ ಸಲ್ಲಿಸಿದರು.

ಚಾಮುಂಡಿಬೆಟ್ಟದಲ್ಲಿ ನಾಡದೇವಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಜಲಧಾರೆ ವಾಹನಕ್ಕೂ ಪೂಜೆ ಸಲ್ಲಿಸಿದ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಪತ್ರಕರ್ತರೊಂದಿಗೆ ಮಾತನಾಡಿ, ಜೆಡಿಎಸ್‌ನಿಂದ ನಡೆಸುತ್ತಿರುವ ಜನತಾ ಜಲಧಾರೆ ಯಾತ್ರೆ ಕಾಂಗ್ರೆಸ್ ನಡೆಸಿದ ಮೇಕೆದಾಟು ಪಾದಯಾತ್ರೆಗೆ



- ಜನತಾ ಜಲಧಾರೆ ಕಾಂಗ್ರೆಸ್‌ನ ಮೇಕೆದಾಟು ಯಾತ್ರೆಗೆ ಪರ್ಯಾಯವಲ್ಲ: ಹೆಚ್‌ಡಿಕೆ
- ಕಾಂಗ್ರೆಸ್‌ನದ್ದು ಷೋಗಾಗಿ ಯಾತ್ರೆ, ನಮ್ಮದು ಚುನಾವಣಾ ಪ್ರಚಾರ ಯಾತ್ರೆ

ಪರ್ಯಾಯವಲ್ಲ. ಅವರದ್ದು ಷೋಗಾಗಿ ನಡೆಸಿದ ಪಾದಯಾತ್ರೆ ಅವರು ನೇರವಾಗಿ ರಾಜಕೀಯ ಯಾತ್ರೆ ಅಂತಾ ಹೇಳಲಿಲ್ಲ. ನಮ್ಮ ಯಾತ್ರೆ ಜನರ ಮುಂದೆ ಸಮಸ್ಯೆ ಬಿಚ್ಚಿಡಲು ನಡೆಸುತ್ತಿದ್ದೇವೆ. ● 9ನೇ ಪುಟಕ್ಕೆ

ಸರ್ವೆ ಕಾರ್ಯ ಪೂರ್ಣಗೊಂಡಲ್ಲಿ ಸರ್ಕಾರಿ ಆಸ್ತಿ ಒತ್ತುವರಿ ತೆರವು

ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ನಿರ್ಧಾರ

ಮೈಸೂರು, ಏ.12(ಆರ್‌ಕೆ)–ಕೆರೆ, ಕಟ್ಟೆ, ಓಣಿ, ಸ್ಮಶಾನದಂತಹ ಸರ್ಕಾರಿ ಆಸ್ತಿಗಳನ್ನು ಸಂರಕ್ಷಿಸಲು ಮೈಸೂರು ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ತಿಳಿಸಿದ್ದಾರೆ.


ಡಾ.ಬಗಾದಿ ಗೌತಮ್

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಕೆರೆ, ಕಟ್ಟೆ, ಓಣಿ, ರಸ್ತೆ, ಸ್ಮಶಾನಗಳಂತಹ ಸರ್ಕಾರಿ ಆಸ್ತಿ ಒತ್ತುವರಿಗೆ ಸಂಬಂಧಿಸಿದಂತೆ ಸರ್ವೆ ಕಾರ್ಯ ನಡೆಸುವಂತೆ ಸೂಚಿಸಲಾಗಿತ್ತು. ಎಲ್ಲೆಲ್ಲಿ ಸರ್ವೆ ಕಾರ್ಯ ಮುಗಿದಿದೆಯೋ ಅಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸುವಂತೆ ಸೂಚಿಸಲಾಗಿತ್ತು. ಅದರಂತೆ ಕಂದಾಯ ಇಲಾಖೆ, ಗ್ರಾಮ ಪಂಚಾಯ್ತಿ, ಸಣ್ಣ ನೀರಾವರಿ, ಜಲಸಂಪನ್ಮೂಲ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖಾಧಿಕಾರಿಗಳು ಹಾಗೂ ಸಿಬ್ಬಂದಿ ಈಗಾಗಲೇ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯೋನ್ಮುಖರಾಗಿದ್ದಾರೆ ಎಂದು ಡಾ. ಬಗಾದಿ ಗೌತಮ್ ತಿಳಿಸಿದರು.

ಸರ್ಕಾರಿ ಜಾಗದ ಗಡಿ ಗುರ್ತಿಸಿ, ಮೂಲ ದಾಖಲೆಗಳಿಗನುಸಾರ ಕೆರೆ, ಕಟ್ಟೆ, ಸ್ಮಶಾನ, ಗೋಮಾಳ ಜಾಗವನ್ನು ರಕ್ಷಿಸುವುದು, ಸಾರ್ವಜನಿಕರ ಅನುಕೂಲಕ್ಕಾಗಿ ಗ್ರಾಮ ನಕ್ಷೆಗಳಲ್ಲಿ ಗುರುತಿಸಿರುವ ರಸ್ತೆಗಳು ಒತ್ತುವರಿಯಾಗಿದ್ದರೆ ತೆರವುಗೊಳಿಸಿ ಜನರು ಓಡಾಡಲು ಮುಕ್ತಗೊಳಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ಅವರು ನುಡಿದರು.

ಇನ್ನು ಮೈಸೂರು ನಗರ ವ್ಯಾಪ್ತಿಯಲ್ಲಿ ಅತಿಕ್ರಮ ಪ್ರವೇಶ, ಅಕ್ರಮ ಅನುಭೋಗ, ಒತ್ತುವರಿ, ಭೂ ಕಬಳಿಕೆಯಾಗಿರುವುದನ್ನು ಗುರ್ತಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧಿಕಾರಿಗಳು ಈಗಾಗಲೇ ಕಾರ್ಯಾಚರಣೆ ನಡೆಸಿ ಆಸ್ತಿಗಳನ್ನು ವಶಕ್ಕೆ ಪಡೆಯುತ್ತಿದ್ದಾರೆ ಎಂದು ನುಡಿದರು.

ಅನುದಾನ ಬಳಕೆ ಬದಲಿಸಲಾಗದು

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯದ (ಎಸ್ಸಿ, ಎಸ್ಟಿ)ವರ ಅಭಿವೃದ್ಧಿ ಮತ್ತು ಮೂಲ ಸೌಕರ್ಯ ಕಲ್ಪಿಸುವುದಕ್ಕಾಗಿ ಮೀಸಲಿರಿಸಿದ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸಲು ಅವಕಾಶವಿಲ್ಲ. ಆಯಾ ಹೆಡ್ ಆಫ್ ಅಕೌಂಟ್‌ನಲ್ಲಿ ಬರುವ ಹಣವನ್ನು ಮೈಸೂರು ಜಿಲ್ಲೆಯಲ್ಲಿ ಅದೇ ಉದ್ದೇಶಕ್ಕೆ ಖರ್ಚು ಮಾಡಿ ಸೌಕರ್ಯ ಕಲ್ಪಿಸಲಾಗುತ್ತದೆ. ಒಂದು ವೇಳೆ ಅನುದಾನ ಹಂಚಿಕೆ ನಿಯಮ ಉಲ್ಲಂಘನೆ ಆದಲ್ಲಿ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪರಿಶೀಲಿಸಿ ಕ್ರಮ ವಹಿಸುತ್ತಾರೆ. ಆದರೆ ಆ ರೀತಿ ಎಸ್ಸಿ,ಎಸ್ಟಿ ಅನುದಾನವನ್ನು ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಬಳಸಿರುವ ಪ್ರಕರಣಗಳು ತಮ್ಮ ಗಮನಕ್ಕೆ ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಸಾಮಾಜಿಕ ಭದ್ರತಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ

ಅಂಗವಿಕಲರು, ವೃದ್ಧರು, ವಿಧವೆಯರು ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಗಳಿಗೆ ನೋಂದಾಯಿತರಾಗಿರುವ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಪಿಂಚಣಿಗೆ ಕೆಲ ತಾಂತ್ರಿಕ ಕಾರಣಗಳಿಂದ ತೊಂದರೆಯಾಗಿತ್ತು. ಬ್ಯಾಂಕ್ ಖಾತೆ, ಐಎಫ್‌ಎಸ್ಸಿ ಕೋಡ್, ಆಧಾರ್ ಸಂಖ್ಯೆಗಳ ಬದಲಾವಣೆಯಂತಹ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಕಂದಾಯ ಇಲಾಖೆ ಸಿಬ್ಬಂದಿ ಮನೆಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಈಗಾಗಲೇ ಬಹಳಷ್ಟು ಫಲಾನುಭವಿಗಳಿಗೆ ಪಿಂಚಣಿ ಹಣ ಬರಲಾರಂಭಿಸಿದೆ. ಸಾಮಾಜಿಕ ಭದ್ರತಾ ಯೋಜನೆಯಡಿ ಹೋಬಳಿಯ ವಾರು ಕಂದಾಯ ಅದಾಲತ್ ಮಾಡುವ ಮೂಲಕವೂ ಶೇ.100ರಷ್ಟು ಯೋಜನೆ ಅನುಷ್ಠಾನಕ್ಕೆ ಪ್ರಯತ್ನಿಸುತ್ತಿದ್ದೇವೆ ಎಂದು

-ಡಾ.ಬಗಾದಿ ಗೌತಮ್, ಜಿಲ್ಲಾಧಿಕಾರಿ

ಎಲ್ಲರ ಸಹಕಾರದಿಂದ ಕೋವಿಡ್ ನಿರ್ವಹಣೆ

ಸಾರ್ವಜನಿಕರು, ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳು, ಅಧಿಕಾರಿಗಳು, ವೈದ್ಯರು, ವೈದ್ಯಕೇತರ ಸಿಬ್ಬಂದಿಗಳ ಸಹಕಾರದಿಂದ ಕೋವಿಡ್–19 ಸೋಂಕಿನ ಪರಿಸ್ಥಿತಿಯನ್ನು ನಿಭಾಯಿಸಲು ಸಾಧ್ಯವಾಯಿತು. ಕೆಲವೇ ಮಂದಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿ ಲೋಪವೆಸಗಿರುವುದು ಕಂಡುಬಂದಿದ್ದು, ಅಂತಹವರಿಗೆ ಷೋಕಾಸ್ ನೋಟಿಸ್ ನೀಡಿ ನಿಯಮಾನುಸಾರ ಕ್ರಮ ವಹಿಸಲಾಗಿದೆ. ಮುಂದೆ 4ನೇ ಅಲೆ ಬರಬಹುದೆಂದು ಹೇಳಲಾಗುತ್ತಿದೆಯಾದ್ದರಿಂದ ಅದನ್ನು ಗಂಭೀರವಾಗಿಯೇ ಪರಿಗಣಿಸಿ ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತೇವೆ. ಸರ್ಕಾರದಿಂದ ಆಗಿಂದಾಗ್ಗೆ ಬರುವ ನಿರ್ದೇಶನ, ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಕೊರೊನಾ ಸೋಂಕು ಹರಡದಂತೆ ತಡೆದು ಜನರನ್ನು ಈ ಮಹಾಮಾರಿ ರೋಗದಿಂದ ರಕ್ಷಿಸುತ್ತೇವೆ ಎಂದು ಡಾ.ಬಗಾದಿ ಗೌತಮ್ ಹೇಳಿದರು.

ಗುತ್ತಿಗೆದಾರ ಸಂತೋಷ್ ಪಟೇಲ್ ಆತ್ಮಹತ್ಯೆ ಪ್ರಕರಣ

ಆತ್ಮಹತ್ಯೆಗೂ ನನಗೂ ಸಂಬಂಧವಿಲ್ಲ

ನನ್ನ ಮೇಲೆ ಆಪಾದನೆ ಮಾಡಿದವರು ಕೋರ್ಟ್‌ನಲ್ಲೇ ಸಾಬೀತು ಮಾಡಬೇಕಿತ್ತು: ಸಚಿವ ಕೆ.ಎಸ್.ಈಶ್ವರಪ್ಪ

ಮೈಸೂರು,ಏ.12(ಆರ್‌ಕೆಬಿ)–ಗುತ್ತಿಗೆದಾರ ಸಂತೋಷ್ ಪಟೇಲ್ ಆತ್ಮಹತ್ಯೆಗೂ ನನಗೂ ಯಾವುದೇ ಸಂಬಂಧವಿಲ್ಲ. ಆತ್ಮಹತ್ಯೆ ಪ್ರಕರಣದಲ್ಲಿ ನನ್ನ ಪಾತ್ರ ಇಲ್ಲ. ಆತ ಯಾರೆಂಬುದೇ ನನಗೆ ಗೊತ್ತಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಸ್ಪಷ್ಟಪಡಿಸಿದ್ದಾರೆ.




ಸಂತೋಷ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ತಮ್ಮ ಇಲಾಖೆಯ ಮೇಲೆ ಶೇ.40ರಷ್ಟು ಕಮಿಷನ್ ಆರೋಪ ಮಾಡಿದ ಗುತ್ತಿಗೆದಾರ ಸಂತೋಷ ಆತ್ಮಹತ್ಯೆ ಪ್ರಕರಣದಲ್ಲಿ ನನ್ನ ಪಾತ್ರ ಏನೂ ಇಲ್ಲ. ಆತ ಯಾರೆಂಬುದು ನನಗೆ ಗೊತ್ತೇ ಇಲ್ಲ. ಈತ ನಮ್ಮ ಇಲಾಖೆಯ ಮೇಲೆ ಆರೋಪ ಮಾಡಿರುವ ವಿಚಾರದಲ್ಲಿ ನಾನು ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದೇನೆ ಎಂದು ಹೇಳಿದರು.

ಸಂತೋಷ್ ಹಾಗೂ ಒಂದು ಖಾಸಗಿ ಚಾನಲ್ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ. ನ್ಯಾಯಾಲಯದಿಂದ ಆತನಿಗೆ ನೋಟಿಸ್ ಬಂದಿದೆ. ಹೀಗಾಗಿ, ಆತ್ಮಹತ್ಯೆ ಮಾಡಿಕೊಂಡಿರಬಹುದು. ಆತ ನಮ್ಮ ಇಲಾಖೆಯಿಂದ ಯಾವುದೇ ಟೆಂಡರ್ ಪಡೆದಿಲ್ಲ. ಕಾಂಗ್ರೆಸ್ ರಾಜೀನಾಮೆ ನೀಡುವಂತೆ ಆಗ್ರಹಿಸಿದೆ. ನಾನು ರಾಜೀನಾಮೆ ನೀಡುವುದಿಲ್ಲ. ಅಗತ್ಯವೆನಿಸಿದರೆ ತನಿಖೆ ನಡೆಯಲಿ ಎಂದು ತಿಳಿಸಿದರು.

ಗಂಭೀರವಾಗಿ ಪರಿಗಣಿಸಿ, ತನಿಖೆ ನಡೆಸಿ

ಸರ್ಕಾರಕ್ಕೆ ಎಂಎಲ್‌ಸಿ ಎಚ್.ವಿಶ್ವನಾಥ್ ಆಗ್ರಹ

ಮೈಸೂರು,ಏ.12(ಆರ್‌ಕೆಬಿ)–ಗುತ್ತಿಗೆದಾರ ಸಂತೋಷ್ ಪಟೇಲ್ ಆತ್ಮಹತ್ಯೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ತನಿಖೆ ನಡೆಸುವಂತೆ ಬಿಜೆಪಿ ಎಂಎಲ್‌ಸಿ ಎಚ್.ವಿಶ್ವನಾಥ್ ಸರ್ಕಾರವನ್ನು ಆಗ್ರಹಿಸಿದರು.



ಆತ್ಮಹತ್ಯೆ ಪ್ರಕರಣ ಕುರಿತು ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸಂತೋಷ್ ಆತ್ಮಹತ್ಯೆ ಪ್ರಕರಣ ಈಗಾಗಲೇ ರಾಜ್ಯದಲ್ಲಿ ವ್ಯಾಪಕವಾಗಿ ಮಾಧ್ಯಮದಲ್ಲಿ ಚರ್ಚೆ ಆಗುತ್ತಿದೆ. ವಿರೋಧ ಪಕ್ಷಗಳು ಕೂಡ ವ್ಯಾಪಕ ಚರ್ಚೆಯಲ್ಲಿ ತೊಡಗಿವೆ. ಸಂತೋಷ್ ಆತ್ಮಹತ್ಯೆ ಮಾಡಿಕೊಂಡಿರುವ ಹಿನ್ನೆಲೆ ಬೇರೆ ಬೇರೆ ವಿಚಾರ ಇದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ತನಿಖೆ ನಡೆಸಬೇಕು. ಸತ್ಯಾಸತ್ಯತೆ ಹೊರ ತರಬೇಕಾಗಿದೆ ಎಂದರು.

ವ್ಯವಸ್ಥೆಯಲ್ಲಿ ಸರ್ಕಾರ, ವಿರೋಧ ಪಕ್ಷ ಇದ್ದಾಗ ಒಂದೊಂದು ರೀತಿ ಮಾತನಾಡುತ್ತೇವೆ. ಕಂಟ್ರಾಕ್ಟರ್ ವಿಚಾರ ದೆಹಲಿಯಿಂದ, ಇಲ್ಲಿಯವರೆಗೂ ಚರ್ಚೆಯಾಗಿದೆ. ಈ ಆತ್ಮಹತ್ಯೆ ಸಾರ್ವಜನಿಕರಲ್ಲಿ ಅನುಮಾನ ತರಿಸುವಂತೆ ಮಾಡಿದೆ. ಯಾವುದೇ ಮಂತ್ರಿಗಳ ನೈತಿಕ ವಿಚಾರ ಬಂದಾಗ, ಅವರು ನಿರ್ಧಾರ ತೆಗೆದುಕೊಳ್ಳಬಹುದು. ಅವರ ನೈತಿಕ ಹೊಣೆಗಾರಿಕೆ ಬರಲಿದೆ. ನೈತಿಕತೆ ವಿಚಾರದಲ್ಲಿ ಮೂರು ಪಕ್ಷಗಳು ಅಲ್ಲಿಗೆ ಬಂದು ನಿಂತಿವೆ. 10 ಪರ್ಸೆಂಟ್‌ನವರು, 40 ಪರ್ಸೆಂಟ್ ಯಾಕೆ ತಗೋತಿದ್ದೀರಾ ಅಂತಿದ್ದಾರೆ. ಎಲ್ಲರೂ ಕೂಡ ಅವರೇ ಎಂದು ವಿಶ್ವನಾಥ್ ಟೀಕಿಸಿದರು.

ವರನಟ ಡಾ.ರಾಜ್‌ಕುಮಾರ್ 16ನೇ ಪುಣ್ಯ ಸ್ಮರಣೆ

ಅಭಿನಯದ ಮೂಲಕ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಜೀವಂತಿಕೆ ತಂದುಕೊಟ್ಟ ರಾಜ್‌ಕುಮಾರ್

ಮೈಸೂರು, ಏ.12(ಆರ್‌ಕೆಬಿ)– ಐವತ್ತು ವರ್ಷಗಳ ಕಾಲ ಕನ್ನಡ ಭಾಷೆಯ ಸಾಹಿತ್ಯ ಸಂಸ್ಕೃತಿಗೆ ಅಭಿನಯದ ಮೂಲಕ ಜೀವಂತಿಕೆ ತಂದುಕೊಟ್ಟ ಅದ್ವಿತೀಯ ನಟ ಡಾ. ರಾಜ್‌ಕುಮಾರ್ ಎಂದು ಸಾಹಿತ್ಯ ಲೋಕ ಸಂಸ್ಥೆ ಅಧ್ಯಕ್ಷ ವೈ.ಡಿ.ರಾಜಣ್ಣ ತಿಳಿಸಿದರು.



ಡಾ.ರಾಜ್‌ಕುಮಾರ್ ಅವರ 16ನೇ ಪುಣ್ಯ ಸ್ಮರಣೆ ಅಂಗವಾಗಿ ಡಾ.ರಾಜ್‌ಕುಮಾರ್ ಸೇವಾ ಸಮಿತಿ ಮೈಸೂರಿನ ವಸ್ತುಪ್ರದರ್ಶನ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ರಾಜ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.


ಅಭಿನಯದ ಜೊತೆಗೆ ತಮ್ಮ ಸರಳತೆ, ಸಜ್ಜನಿಕೆ, ಪ್ರಬುದ್ಧ ನಡೆ ನುಡಿಗಳಿಂದ ನಾಡಿನ ಒಂದನೇ ತಲೆಮಾರಿನ ಜನರ ಮೇಲೆ ಪ್ರಭಾವ ಬೀರಿದ ಡಾ.ರಾಜ್ ಕನ್ನಡ ಚಿತ್ರರಂಗಕ್ಕಷ್ಟೇ ಅಲ್ಲದೆ ಇಡೀ ಜಗತ್ತಿನ ಅದ್ವಿತೀಯ ಕಲಾವಿದರಾಗಿ ಹೊರಹೊಮ್ಮಿದರು ಎಂದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಡಾ.ರಾಜ್ ನಟನಾ ಕೌಶಲ್ಯದ ಕಾರಣಕ್ಕೆ ಭಾರತದ ಇತರೆ ಭಾಷೆ ಚಿತ್ರಗಳಿಂದ ದೊಡ್ಡಮಟ್ಟದ ಆಹ್ವಾನ ಬಂದರೂ ತಿರಸ್ಕರಿಸಿದರು. ಬೇರೆ ಭಾಷೆಯ ಚಿತ್ರಗಳ ಬಗ್ಗೆ ಅಪಾರ ಗೌರವ ಹೊಂದಿದ್ದರು. ತನ್ನನ್ನು ಬೆಳೆಸಿದ ಕನ್ನಡ ಚಿತ್ರರಂಗ ಹಾಗೂ ಕನ್ನಡ ಭಾಷೆಯಿಂದ ದೂರವಾಗುವುದು ಅವರಿಗೆ ಇಷ್ಟವಾಗಿರಲಿಲ್ಲ. ಆ ಕಾರಣಕ್ಕೆ ಕನ್ನಡ, ಕರ್ನಾಟಕ ಎಂದು ಇಲ್ಲಿಯೇ ಉಳಿದರು. ಕನ್ನಡ ಸಿನಿಮಾ ನಿರ್ಮಾಣಕ್ಕೆ ಹೊಸ ವೇಗ, ಸ್ಪರ್ಶ ನೀಡಿದರು. ಕೇವಲ ನಟನೆಗಷ್ಟೇ ಸೀಮಿತರಾಗದೇ ಕನ್ನಡ, ನೆಲ, ಜಲ ಭಾಷೆಗೆ ತೊಂದರೆ ಆದಾಗಲೆಲ್ಲಾ ದನಿ ಎತ್ತುವಲ್ಲಿ ಮುಂಚೂಣಿಯಲ್ಲಿದ್ದರು. ಹೀಗಾಗಿ ಡಾ. ರಾಜ್ ಕನ್ನಡಿಗರ ಹೃದಯದಲ್ಲಿ ಸದಾ ವಿರಾಜಮಾನರಾಗಿದ್ದಾರೆ ಎಂದರು.

ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್ ಮಾತನಾಡಿ, ಕನ್ನಡ ನಾಡಿನ ಸಾಂಸ್ಕೃತಿಕ ರಾಯಭಾರಿ ಯಾಗಿದ್ದ ಡಾ.ರಾಜ್, ಕನ್ನಡ ಭಾಷೆಯ ಸೊಬಗು ಮತ್ತು ಸೊಗಡನ್ನು ಹೆಚ್ಚಿಸಿದವರು. ಶ್ರೇಷ್ಠ ಅಭಿನಯದ ಜೊತೆ ಜೊತೆಗೆ ಶ್ರೇಷ್ಠ ವ್ಯಕ್ತಿತ್ವದ ಮೂಲಕ ಜನರಲ್ಲಿ ಕನ್ನಡ ಪ್ರೀತಿಯನ್ನು ಬೆಳೆಸಿದವರು. ಅವರ ಬದುಕು ಇಂದಿನ ಯುವಕರಿಗೆ ಮಾದರಿಯಾಗಬೇಕು ಎಂದರು. ಈ ಸಂದರ್ಭದಲ್ಲಿ ಡಾ. ರಾಜ್‌ಕುಮಾರ್ ಅಭಿಮಾನಿ ಸಂಘದ ಸಂಸ್ಥಾಪಕ ಅಧ್ಯಕ್ಷ ಎಂ.ರಾಮೇಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ (ಬಸಪ್ಪ), ಕೆಆರ್‌ಎಸ್ ಗ್ರಾಪಂ ಸದಸ್ಯ ವಿಜಯ್‌ಕುಮಾರ್, ಯುವ ಕಲಾವಿದ ಲೋಹಿತ್, ವಿನಯ್ ಕಣಗಾಲ್, ರಾಜೇಶ್, ರಮೇಶ್, ಚಕ್ರಪಾಣಿ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಶ್ರೀ ಭಗವಾನ್ ಮಹಾವೀರ ಜಯಂತಿ

ಮೈಸೂರು, ಏ.12– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಭಗವಾನ್ ಮಹಾವೀರ ಜಯಂತೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಏ.14ರಂದು ಸಂಜೆ 6.30 ಗಂಟೆಗೆ ಚಂದ್ರಗುಪ್ತ ರಸ್ತೆಯಲ್ಲಿರುವ ಸಂಗಮ್ ಟಾಕಿಸ್ ಪಕ್ಕದ ಎಂ.ಎಲ್. ಜೈನ್ ಬೋರ್ಡಿಂಗ್ ಹೋಂನಲ್ಲಿ ಶ್ರೀ ಭಗವಾನ್ ಮಹಾವೀರ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ.



ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್ ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಚೆನ್ನಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಕರಾಟೆ ತರಬೇತಿ ಶಿಬಿರ

ಮೈಸೂರು,ಏ.12–ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಮಾರ್ಷಲ್ ಆರ್ಟ್ಸ್ ಮತ್ತು ಯೋಗ ಸಂಸ್ಥೆ ವತಿಯಿಂದ ಏ.15ರಿಂದ ಒಂದು ತಿಂಗಳ ಕಾಲ ಉಚಿತ ಕರಾಟೆ ತರಬೇತಿ ಶಿಬಿರವನ್ನು ಸಹಕರ ಭವನ, ರಾಯಲ್ ಇಂಗ್ಲಿಷ್ ಸ್ಕೂಲ್, ಜಯನಗರ ಹಾಗೂ ಗಾಯತ್ರಿಪುರಂ, ಸಿದ್ಧಾರ್ಥನಗರ ಇಲ್ಲಿ ಬೆಳಗ್ಗೆ ಮತ್ತು ಸಂಜೆ ಉಚಿತ ಕರಾಟೆ ತರಬೇತಿ ಶಿಬಿರ ಆಯೋಜಿಸಲಾಗಿದೆ. ಆಸಕ್ತ 5 ವರ್ಷ ಮೇಲ್ಪಟ್ಟ ಮಕ್ಕಳು ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ ಮಾಹಿತಿಗೆ ಮೊ. 944820 8534, 8971175688 ಸಂಪರ್ಕಿಸಬಹುದು.

ಕಾರಿನ ಮೇಲೆ ಮುಸುಕುಧಾರಿಗಳ ದಾಳಿ ಪ್ರಕರಣ

ಹಲ್ಲೆಗೊಳಗಾದವರ ಪತ್ತೆಗೆ ಪೊಲೀಸರ ಶೋಧ

ಮೈಸೂರು, ಏ.12(ಆರ್‌ಕೆ)– ನಂಜನಗೂಡು ರಸ್ತೆಯಲ್ಲಿ ಕಡಕೊಳ ಬಳಿ ಕಾರಿನ ಮೇಲೆ ಮುಸುಕುಧಾರಿಗಳು ದಾಳಿ ಮಾಡಿ ಹಲ್ಲೆ ನಡೆಸಿದ ಕೃತ್ಯ ವಿಡಿಯೋ ವೈರಲ್ ಹಿನ್ನೆಲೆಯಲ್ಲಿ ಹಲ್ಲೆಗೊಳಗಾದವರ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.



ಸಿನಿಮೀಯ ಶೈಲಿಯ ಕೃತ್ಯದ ದೃಶ್ಯಾವಳಿಗಳು ವೈರಲ್ ಆಗಿರುವುದನ್ನು ಹೊರತುಪಡಿಸಿದರೆ, ಮುಸುಕುಧಾರಿಗಳಿಂದ ಹಲ್ಲೆಗೊಳಗಾದವರಾಗಲೀ, ಅವರನ್ನು ನೋಡಿದವರಾಗಲೀ ಅಥವಾ ಮೊಬೈಲ್‌ನಲ್ಲಿ ವಿಡಿಯೋ ವೈರಲ್ ಮಾಡಿದ ವ್ಯಕ್ತಿಯಾಗಲೀ ಪೊಲೀಸರಿಗೆ ಮಾಹಿತಿ ನೀಡದಿರುವುದು, ಇಡೀ ಘಟನೆಯ ಬಗ್ಗೆ ತೀವ್ರ ಕುತೂಹಲ ಕೆರಳಿಸಿದೆ. ಯಾರೂ ದೂರು ನೀಡದ ಕಾರಣ ಘಟನೆ ಕುರಿತಂತೆ ಯಾವುದೇ ಮಾಹಿತಿ ಲಭ್ಯವಿಲ್ಲವಾದರೂ, ವೈರಲ್ ಆಗಿರುವ ವಿಡಿಯೋ ದೃಶ್ಯಾವಳಿ ಆಧಾರದಲ್ಲಿ ದಾಳಿ ಮಾಡಿದವರು ಹಾಗೂ ಹಲ್ಲೆಗೊಳಗಾದವರು ಯಾರೆಂದು ಪತ್ತೆ ಮಾಡಲು ಪೊಲೀಸರು ಶೋಧ ಕಾರ್ಯ ಆರಂಭಿಸಿದ್ದಾರೆ.

ಹವಾಲಾ ಹಣ ಸಾಗಣೆ ಅಥವಾ ಇನ್ನಿತರ ಅಕ್ರಮ ಚಟುವಟಿಕೆಗೆ ಸಂಬಂಧಿಸಿದಂತೆ ವೈಮನಸ್ಸು ಉಂಟಾಗಿ ಕೇರಳದಿಂದ ಮೈಸೂರಿನತ್ತ ಬರುತ್ತಿರುವ ಕಾರನ್ನು ಹಿಂಬಾಲಿಸಿ ಬಂದು ಯುವಕರ ಗುಂಪೊಂದು ನಂಜನಗೂಡು ರಸ್ತೆಯ ಕಡಕೊಳ ಸಮೀಪ ಕಾರು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದೆ ಎಂಬುದು ಖಚಿತವಾಗಿರುವ ಹಿನ್ನೆಲೆಯಲ್ಲಿ ಯಾರೂ ದೂರು ನೀಡದಿದ್ದರೂ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರೇ ಸ್ವತಃ ಪ್ರಕರಣ ದಾಖಲಿಸಿ ತನಿಖೆ ನಡೆಸಲು ಮುಂದಾಗಿದ್ದಾರೆ.

ಎರಡೂ ಗುಂಪಿನವರೂ ಪರಿಚಯಸ್ಥರೇ ಆಗಿದ್ದು, ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದರಿಂದ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರೂ ಪೊಲೀಸ್ ಠಾಣೆಗೆ ದೂರು ನೀಡಿಲ್ಲ. ಪ್ರಮುಖವಾಗಿ ಹವಾಲಾ ಹಣ ಸಾಗಣೆ ಮಾಡುತ್ತಿದ್ದ ಕಾರಣ ಅವರು ಮಾಹಿತಿ ನೀಡದೇ ಪರಾರಿಯಾಗಿರಬಹುದೆಂದು ಶಂಕಿಸಿರುವ ಪೊಲೀಸರು ಪ್ರಕರಣ ಭೇದಿಸಲು ಕಾರ್ಯಾಚರಣೆ ಆರಂಭಿಸಿದ್ದಾರೆ.

ನಂಜನಗೂಡು ಟೌನ್‌ನಲ್ಲಿ ಸರ್ಕಲ್‌ಗಳಲ್ಲಿ ಅಥವಾ ವಾಣಿಜ್ಯ ಕಟ್ಟಡಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪರಿಶೀಲಿಸಿದ ಪೊಲೀಸರು ಕೇರಳ ಗಡಿ ಭಾಗದ ಚೆಕ್ ಪೋಸ್ಟ್ ಸಿಸಿ ಕ್ಯಾಮರಾಗಳಲ್ಲಿ ಸದರಿ ವಾಹನಗಳ ಮಾಹಿತಿ ಕಲೆ ಹಾಕುತ್ತಿದ್ದಾರೆ. ಅಲ್ಲದೇ ಕೇರಳ ಪೊಲೀಸರನ್ನು ಸಂಪರ್ಕಿಸಿ ಪ್ರಕರಣ ಕುರಿತಂತೆ ತನಿಖೆಗೆ ಮಾಹಿತಿ ನೀಡುವಂತೆ ಕೋರಿಕೊಳ್ಳಲಾಗಿದ್ದು, ಈ ಹಿಂದೆ ಇಂತಹ ಕೃತ್ಯಗಳು ನಡೆದಿರುವ ಬಗ್ಗೆ ಸುಳಿವು ನೀಡುವಂತೆ ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು ಮನವಿ ಮಾಡಿದ್ದಾರೆ. ಘಟನೆಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿರುವುದರಿಂದ ಪೊಲೀಸ್ ಇಲಾಖೆ ಉನ್ನತ ಅಧಿಕಾರಿಗಳೂ ಸಹ ಗಂಭೀರವಾಗಿ ಪರಿಗಣಿಸಿದ್ದು, ಪ್ರಕರಣ ಭೇದಿಸುವಂತೆ ಅಧೀನಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಉಚಿತ ಸಂವಾದ ಕಾರ್ಯಕ್ರಮ

ಮೈಸೂರು, ಏ. 11– ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಷನ್ ಸಂಸ್ಥೆಯು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಏಪ್ರಿಲ್ 15ರಂದು ಬೆಳಗ್ಗೆ 11 ಗಂಟೆಗೆ ಉಚಿತ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ. ಆಸಕ್ತಿಯುಳ್ಳವರು ಹೆಚ್ಚಿನ ವಿವರಗಳಿಗಾಗಿ ದೂ. 0821–2031564, ಮೊ. 9945752592 ಸಂಪರ್ಕಿಸಲು ಕೋರಲಾಗಿದೆ.


ಮೈಸೂರು ಸಮಾನ ಮನಸ್ಕರ ಬಳಗದ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರರಾದ ಜ್ಯೋತಿಬಾಫುಲೆ ಅವರ ಜಯಂತಿಯನ್ನು ಆಚರಿಸಲಾಯಿತು. ಚಿತ್ರದಲ್ಲಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ರೇವಣ್ಣ, ಹೆಚ್.ಹರೀಶ್‌ಕುಮಾರ್, ಉದಯ, ರವಿ, ಸಿಡಿ.ಕುಮಾರ್, ಎಸ್.ಎನ್.ಪ್ರಶಾಂತ್ ಇನ್ನಿತರರಿದ್ದಾರೆ.


ಭಾರತೀಯ ಜೀವ ವಿಮಾ ನಿಗಮದ ಶಾರದಾದೇವಿನಗರ ಶಾಖೆಯಲ್ಲಿ 2022–23ನೇ ಆರ್ಥಿಕ ವರ್ಷದ ಹೊಸ ವ್ಯವಹಾರವನ್ನು ದೀಪ ಬೆಳಗಿಸಿ, ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಶಾಖಾಧಿಕಾರಿ, ಕಾಂತರಾಜಪ್ಪ, ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಸಿಬ್ಬಂದಿ ಇದ್ದರು.

ಚಾಮುಂಡಿಬೆಟ್ಟದಲ್ಲಿ ನಾಳೆ ಬೇಬಿ ಫೀಡಿಂಗ್ ಕಿಯಾಸ್ಕ್ ಉದ್ಘಾಟನೆ

ಮೈಸೂರು,ಏ.12(ಆರ್‌ಕೆ)–ಬೆಂಗಳೂರಿನ ಯೂನಿ ಚಾರ್ಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನಿಂದ ಮೈಸೂರಿನ ಚಾಮುಂಡಿಬೆಟ್ಟದ ದಾಸೋಹ ಭವನದ ಮುಂದೆ ಸ್ಥಾಪಿಸಿರುವ ಬೇಬಿ ಫೀಡಿಂಗ್ ಕಿಯಾಸ್ಕ್(ಶಿಶು ಆಹಾರ ಕೊಠಡಿ)ಅನ್ನು ಏ.14ರಂದು ಮಧ್ಯಾಹ್ನ 3 ಗಂಟೆಗೆ ಉದ್ಘಾಟಿಸಲಾಗುವುದು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಕಿಯಾಸ್ಕ್ ಉದ್ಘಾಟಿಸಲಿದ್ದು, ಎಡಿಸಿ ಡಾ.ಮಂಜುನಾಥಸ್ವಾಮಿ, ಮುಜರಾಯಿ ತಹಶೀಲ್ದಾರ್ ಕೃಷ್ಣ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್.ಯತಿರಾಜ್ ಸಂಪತ್ಕುಮಾರನ್, ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ವೆಂಕಟೇಶ್‌ಪ್ರಸಾದ್, ಯೂನಿಚಾರ್ಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಅನುರುದ್ಧ್ ಚೌಹಾಣ್, ಶ್ರುತಿ ಹಾಗೂ ನಾಗೇಂದ್ರ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಏ.12– ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೈಸೂರು ತಾಲೂಕಿನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಆಹ್ವಾನಿಸಲಾಗಿದ್ದ ಅರ್ಜಿ ಸಲ್ಲಿಸುವ ದಿನಾಂಕವನ್ನು ಏ.15ರವರೆಗೆ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ಅವರ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸುವ ಮೂಲಕ ಅರ್ಜಿಯನ್ನು ssp.postmatric.karnataka.gov.in ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಡಾ.ಬಾಬು ಜಗಜೀವನ್ ರಾಮ್ ಕಟ್ಟಡ, ಅದಿಪಂಪ ರಸ್ತೆ, ಒಂಟಿಕೊಪ್ಪಲು ಪೂರ್ವ ಬಡಾವಣೆ, ಪಡುವಾರಹಳ್ಳಿ ಮೈಸೂರು–12 ಅಥವಾ ದೂ.ಸಂ:0821–2520910 ಸಂಪರ್ಕಿಸಬಹುದು.


ನಿಧನ

ಜಿ.ಅನ್ನಪೂರ್ಣದೇವಿ



ಮೈಸೂರು, ಏ. 12– ಮೈಸೂರು ಸಾತಗಳ್ಳಿ ಎ ಬಡಾವಣೆ ನಿವಾಸಿ ಮತ್ತು ಲೇಟ್ ರಾಮಯ್ಯ ಅವರ ಪತ್ನಿ ಶ್ರೀಮತಿ ಜಿ. ಅನ್ನಪೂರ್ಣದೇವಿ (73) ಅವರು ಸೋಮವಾರ ಹೃದಯಾಘಾತದಿಂದ ನಿಧನರಾದರು. ಮೃತರು ಮಕ್ಕಳಾದ ಡಾ. ಬಿ.ರವಿಕಿಶೋರ್, ಬಿ.ಕಿರಣ್‌ಕುಮಾರ್, ಬಿ.ಸುಗಂಧಿನಿದೇವಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.04.2022 ಬುಧವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ದ್ವಾದಶಿ, ನಕ್ಷತ್ರ: ಮಖೆ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಕಲಾಕೂಟ, ವೀರಶೈವ ಲಿಂಗಾಯಿತ ಮಹಾಸಭಾ ಬಸವ ಬಳಗಗಳ ಒಕ್ಕೂಟ :** ಶಿವಸಂಚಾರ ನಾಟಕೋತ್ಸವ, ಬಸ್ ಕಂಡಕ್ಟರ್ ನಾಟಕ ಪ್ರದರ್ಶನ, ರಚನೆ : ಬಿ.ಆರ್. ಅರಿಷಣಗೂಡಿ, ನಿರ್ದೇಶನ ಮತ್ತು ಸಂಗೀತ : ವೈ.ಡಿ. ಬಾದಾಮಿ ಸಾಣೇಹಳ್ಳಿ, ಸ್ಥಳ: ಶ್ರೀ ಹೊಸಮಠ ಶಿಕ್ಷಣ ಸಂಸ್ಥೆಗಳ ಆವರಣ, ಸಂಜೆ 6.30ಕ್ಕೆ

■ **ಡಾ. ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಸ್ನೇಹ ಸೌಹಾರ್ದ ಸಂಘ :** ಡಾ. ಬಿ.ಆರ್. ಅಂಬೇಡ್ಕರ್‌ರವರ 131ನೇ ಜನ್ಮ ದಿನಾಚರಣೆ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಲಲಿತ ಮಹಲ್ ಮೈದಾನ, ಸಂಜೆ 6.30ಕ್ಕೆ.

■ **ಹೆಬ್ಬಾಳು ಸಾಂಸ್ಕೃತಿಕ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಕುರುಕ್ಷೇತ್ರ ಪೌರಾಣಿಕ ನಾಟಕ ಪ್ರದರ್ಶನ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಪಾಲಿಕೆ ಸದಸ್ಯ ಪೈ. ಶ್ರೀನಿವಾಸ್, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡ, ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ಹೆಚ್.ಕೆ. ರಾಮು, ಸ್ಥಳ: ಬಸವನಗುಡಿ ಮುಂಭಾಗ, ರಾತ್ರಿ 7.30ಕ್ಕೆ.

■ **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪ್ರೊ. ಡಿ.ಕೆ. ರಾಜೇಂದ್ರ ಅಭಿನಂದನಾ ಸಮಿತಿ, ಮಣಿ ಪ್ರಕಾಶನ :** ಪ್ರೊ. ಡಿ.ಕೆ. ರಾಜೇಂದ್ರ ಅವರ ಯಥಾರ್ಥ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ, ಉಪಸ್ಥಿತರು : ಶಾಖಾ ಮಠದ ಅಧ್ಯಕ್ಷರಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ವಿದ್ವಾಂಸ ಪ್ರೊ. ಟಿ.ವಿ. ವೆಂಕಟಾಚಲಶಾಸ್ತ್ರಿ, ಗ್ರಂಥ ಬಿಡುಗಡೆ : ಪ್ರೊ. ಅರವಿಂದ ಮಾಲಗತ್ತಿ, ಕೃತಿ ಕುರಿತು : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ನೀಲಗಿರಿ ತಳವಾರ, ಮುಖ್ಯ ಅತಿಥಿಗಳು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜೆ. ಶಶಿಧರ ಪ್ರಸಾದ್, ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಎಂ.ಜಿ. ಮಂಜುನಾಥ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಸಂಜೆ 4ಕ್ಕೆ

ವಿವಿಧೆಡೆ ಶ್ರೀ ರಾಮನವಮಿ

■ **ಗಾನವಿಶಾರದ ಶ್ರೀಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 106ನೇ ವಾರ್ಷಿಕ ಪಾರಂಪರಿಕ ರಾಮನವಮಿ ಸಂಗೀತೋತ್ಸವ, ವಿದ್ವಾನ್ ಪ್ರವೀಣ್ ಗೋಡ್ಖಿಂಡಿ ಮತ್ತು ತಂಡದಿಂದ ಹಿಂದೂಸ್ತಾನಿ ಬಾನ್ಸುರಿ ವಾದನ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 5.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಕೆ. ಶ್ರೇಯಾ, ಡಾ.ಎಂ.ಎ. ಜ್ಯೋತಿ ಮತ್ತು ಎನ್. ಹೇಮಾ, ವ್ಯಾಖ್ಯಾನ– ಡಾ. ಸಿ. ನಾಗಣ್ಣ, 7.15 ಪ್ರಾಯೋಜಿತ ಕಾರ್ಯಕ್ರಮ 'ಕೌಶಲ್ಯ ಕರ್ನಾಟಕ'. ಪ್ರಾಯೋಜಕರು ರಾಜ್ಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ–ಬಾನುಲಿ ಸರಣಿ, 10.00 ಕೌಶಲ್ಯ ಕರ್ನಾಟಕ – ಪ್ರಾಯೋಜಿತ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ, 12.45 ಜನಪದಸಂಗೀತ–ರಾಜಮ್ಮ ಮತ್ತು ತಂಡ, 1.20 ಭಾವಗೀತೆ–ಕೆ.ಪಿ. ರೇವತಿ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ಹಿಮಾಲಯ ತಪ್ಪಲಿಗೆ ಚಾರಣ ಹೋಗಿ ಬಂದ ಮೈಸೂರಿನ ಡಾ. ರಶ್ಮಿ ಹಾಗೂ ಡಾ. ಸುನೀತಾ ಅವರೊಂದಿಗೆ ಮಾತುಕತೆ ನಡೆಸಿಕೊಡುತ್ತಾರೆ ಅಬ್ದುಲ್ ರಶೀದ್, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ. ಮಳಿಮಠ್ ಮತ್ತು ಕೆ.ಬಿ.ಮೀನಾ, 4.45 ಹಿಂದಿ ಪಾಠ, ಪ್ರಸ್ತುತಿ– ಸ್ಮಿತಾ ಚಿಪ್ಳೂಣ್‌ಕರ್, 6.50 ಕೃಷಿರಂಗ–ಕಿಸಾನ್‌ವಾಣಿ, ಕೃಷಿಯಲ್ಲಿ ಕಂಡ ಯಶಸ್ಸು ಕುರಿತು ಇಂದ್ರಮ್ಮ ಅವರೊಂದಿಗೆ ಸಂದರ್ಶನ, 9.05 ಕ್ಷಿತಿಜ–Literacy ಗುರು– ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಹಳ್ಳಿ ಹಾಡ್ಯ, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು



■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 9ಕ್ಕೆ ಹನುಮಂತೋತ್ಸವ, ಬೆಳಗ್ಗೆ 10ಕ್ಕೆ ನರಸಿಂಹ ಕೋಟಿ ಕುಟುಂಬಮ್ ವೃಂದದವರಿಂದ ಭಜನೆ, ಬೆಳಗ್ಗೆ 11ಕ್ಕೆ ಶ್ರೀ ಹರಿವಾಯು ಭಜನಾ ಮಂಡಳಿಯಿಂದ ಭಜನೆ, ಸಂಜೆ 6ಕ್ಕೆ ವಿದ್ವಾನ್ ಮೈಸೂರು ಎನ್. ಶ್ರೀನಾಥ್ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ ಗಾಯನ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ಶ್ರೀ ಜಾನಕೀ ರಾಮ ಮಂದಿರ :** ಶ್ರೀ ರಾಮನವಮಿ ಕಾರ್ಯಕ್ರಮ, ಸಂಜೆ ಶ್ರೀ ವೇದಾದ್ರಿ ಭಜನಾ ಮಂಡಳಿಯವರಿಂದ ಭಜನೆ, ಸ್ಥಳ: ಮಂದಿರದ ಆವರಣ, ಗೊಲ್ಲಗೇರಿ, ಚಾಮರಾಜ ಮೊಹಲ್ಲಾ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ ಕಾರ್ಯಕ್ರಮ, ವಿದ್ವಾನ್ ಮೈಸೂರು ಎಂ. ನಾಗರಾಜ್ ಮತ್ತು ಮೈಸೂರು ಎಂ. ಮಂಜುನಾಥ್ ಅವರಿಂದ ದ್ವಂದ್ವ ಪಿಟೀಲು, ಎಲ್ಲ ವೆಂಕಟೇಶ್ವರ ರಾವ್ (ಮೃದಂಗ), ಗಿರಿಧರ್ ಉಡುಪ (ಘಟಂ), ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.

■ **ಶ್ರೀ ರಾಮ ಸೇವಾ ಮಂಡಲಿ :** ಶ್ರೀ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 10.30ಕ್ಕೆ ಧಾತ್ರೀ ಮಹಿಳಾ ಕೇಂದ್ರದಿಂದ ಭಜನೆ, ಸಂಜೆ 6.30ಕ್ಕೆ ಚಿನ್ಮಯ ಮಿಷನ್‌ನ ಪರಮಪೂಜ್ಯ ಸ್ವಾಮಿ ಆದಿತ್ಯಾನಂದ ಅವರಿಂದ ಆನಂದ ರಾಮಾಯಣ ಕುರಿತು ಉಪನ್ಯಾಸ, ಸಂಜೆ 7.45 ರಿಂದ ಆಲಾಪ್ ಬಿ.ಆರ್ ಮತ್ತು ಸ್ವರಶ್ರೀ ಬಿ.ಆರ್. ಮತ್ತು ವೃಂದದವರಿಂದ ಭಕ್ತಿಗೀತೆಗಳು ಹಾಗೂ ಭಾವಗೀತೆಗಳು, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ, 4ನೇ ಮೇನ್ 9ನೇ ಕ್ರಾಸ್.

■ **ಶ್ರೀ ರಾಮ ಮಂದಿರ, ಜಯನಗರ :** ಶ್ರೀ ರಾಮೋತ್ಸವ, ಬೆಳಗ್ಗೆ 7ಗಂಟೆಗೆ ಶ್ರೀ ಆದಿತ್ಯಾದಿ ನವಗ್ರಹ ಹೋಮ, ಸಂಜೆ 6.30ಕ್ಕೆ ವಿದುಷಿ ನಮ್ರತಾ ಎಸ್. ಜೋಯಿಸ್ ಅವರಿಂದ ಭರತನಾಟ್ಯ, ಸ್ಥಳ: ಶ್ರೀರಾಮಮಂದಿರ, ಜಯನಗರ.


ಮೂವರು ಗಣ್ಯರಿಗೆ ನಾಡೋಜ ಪ್ರಶಸ್ತಿ ಪ್ರದಾನ



ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ 30ನೇ ನುಡಿ ಹಬ್ಬದ ಸಲುವಾಗಿ ಕೊಡ ಮಾಡಿದ 'ನಾಡೋಜ' ಪ್ರಶಸ್ತಿಯನ್ನು ಮಂಗಳವಾರ ವಿದ್ಯಾರಣ್ಯ ಬಯಲು ರಂಗ ಮಂದಿರದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಮೈಸೂರಿನ ಖ್ಯಾತ ವಿದ್ವಾಂಸರಾದ ಧಾರ್ಮಿಕ ಚಿಂತಕ ಡಾ. ಭಾಷ್ಯಂ ಸ್ವಾಮೀಜಿ, ಸಾಹಿತಿ ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ ಹಾಗೂ ಜನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರಿಗೆ ಪ್ರದಾನ ಮಾಡಿದರು. ಈ ವೇಳೆ ವಿವಿ ಕುಲಪತಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಈಶ್ವರಪ್ಪ ರಾಜೀನಾಮೆಗೆ ಒತ್ತಾಯ: ಬಿಎಸ್‌ವೈಗೆ ಫೋನ್ ಮಾಡಿ ಬೊಮ್ಮಾಯಿ ಮಾತುಕತೆ

ಬೆಂಗಳೂರು, ಏ.12– ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ವಿರುದ್ಧ 40 ಪರ್ಸೆಂಟ್ ಕಮಿಷನ್ ಆರೋಪ ಮಾಡಿದ್ದ ಬೆಳಗಾವಿ ಮೂಲದ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ದೂರವಾಣಿ ಕರೆ ಮಾಡಿ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ನನ್ನ ಸಾವಿಗೆ ಸಚಿವ ಈಶ್ವರಪ್ಪ ಅವರೇ ಕಾರಣ ಎಂದು ಸಂತೋಷ್ ಪಾಟೀಲ್ ಡೆತ್‌ನೋಟ್ ಬರೆದಿಟ್ಟಿದ್ದಾರೆ. ಹೀಗಾಗಿ ಈಶ್ವರಪ್ಪ ಅವರಿಂದ ರಾಜೀನಾಮೆ ಪಡೆಯುವ ಸಂಬಂಧ ಯಡಿಯೂರಪ್ಪ ಅವರೊಂದಿಗೆ ಸಿಎಂ ಬೊಮ್ಮಾಯಿ ಚರ್ಚಿಸಿದ್ದಾರೆ ಎಂದು ಮೂಲಗಳಿಂದ ತಿಳಿದು ಬಂದಿದೆ.



ಆತ್ಮಹತ್ಯೆ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಈಶ್ವರಪ್ಪ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ. ಕಾಂಗ್ರೆಸ್ ನಾಯಕರು, ವಿಪಕ್ಷಗಳು ಸಹ ಈಶ್ವರಪ್ಪ ರಾಜೀನಾಮೆಗೆ ಒತ್ತಾಯಿಸಿವೆ.

ಕಳೆದೆರಡು ತಿಂಗಳಿಂದ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿ ನಾಯಕರಿಗೆ ಸಾಲು ಸಾಲು ದೂರು ನೀಡಿದ್ದ ಗುತ್ತಿಗೆದಾರ ಸಂತೋಷ್ ಇದೀಗ ಸಾವಿಗೆ ಶರಣಾಗಿದ್ದಾರೆ. ನನ್ನ ಸಾವಿಗೆ ಈಶ್ವರಪ್ಪ ಕಾರಣ ಎಂದು ನಿನ್ನೆ ರಾತ್ರಿ 11.30ಕ್ಕೆ ವಾಟ್ಸಪ್ ಮಾಡಿದ್ದ ಸಂತೋಷ್ ಪಾಟೀಲ್ ನಾಪತ್ತೆಯಾಗಿದ್ದರು. ಪೊಲೀಸರು ಮೊಬೈಲ್ ಟವರ್ ಮೂಲಕ ಪರಿಶೀಲನೆ ನಡೆಸಿದಾಗ ಸಂತೋಷ್ ಉಡುಪಿಯಲ್ಲಿರುವುದು ಗೊತ್ತಾಗಿತ್ತು. ಪರಿಶೀಲನೆ ವೇಳೆ ಶಾಂಭವಿ ಲಾಡ್ಜ್‌ನ ಕೊಠಡಿಯೊಂದರಲ್ಲಿ ಸಂತೋಷ್ ಮೃತದೇಹ ಪತ್ತೆಯಾಗಿದೆ.

40 ಪರ್ಸೆಂಟ್ ಕಮಿಷನ್ ಸರ್ಕಾರ ತನ್ನದೇ ಕಾರ್ಯಕರ್ತನ ಬಲಿ ಪಡೆದಿದೆ



ನವದೆಹಲಿ, ಏ.12– 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂದೇ ಕುಖ್ಯಾತಿ ಪಡೆದಿರುವ ಕರ್ನಾಟಕ ಬಿಜೆಪಿ ಸರ್ಕಾರ ತನ್ನದೇ ಪಕ್ಷದ ಕಾರ್ಯಕರ್ತನೊಬ್ಬನನ್ನು ಬಲಿ ಪಡೆದಿದೆ ಎಂದು ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರು ಮಂಗಳವಾರ ಬೊಮ್ಮಾಯಿ ಸರ್ಕಾರದ ವಾಗ್ದಾಳಿ ನಡೆಸಿದ್ದಾರೆ. ಉಡುಪಿಯ ಲಾಡ್ಜ್‌ನಲ್ಲಿ ಆತ್ಮಹತ್ಯೆಗೆ ಶರಣಾದ ಗುತ್ತಿಗೆದಾರ ಸಂತೋಷ್ ಪಾಟೀಲ್ ಅವರ ಪ್ರಕರಣವನ್ನು ಉಲ್ಲೇಖಿಸಿ ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, ಗುತ್ತಿಗೆದಾರ ಪ್ರಧಾನಿ ಮೋದಿ ಅವರಿಗೆ ಮಾಡಿದ ಮನವಿಗೂ ಯಾವುದೇ ಉತ್ತರ ಸಿಗದಂತಾಯ್ತು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಾವಿನಲ್ಲಿ ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಬೊಮ್ಮಾಯಿ ಇಬ್ಬರೂ ಭಾಗೀದಾರರು ಎಂದು ರಾಹುಲ್ ಕಿಡಿಕಾರಿದ್ದಾರೆ. ರಾಹುಲ್ ಗಾಂಧಿ ಅವರು #BJPCouuruptionFiles ಎಂಬ ಹ್ಯಾಷ್‌ಟ್ಯಾಗ್ ಅಡಿ ಮಾಧ್ಯಮ ವರದಿ ಸ್ಕ್ರೀನ್ ಶಾಟ್ ಸಮೇತ ಟ್ವೀಟ್ ಮಾಡಿ ಆಕ್ರೋಶ ಹೊರಹಾಕಿದ್ದಾರೆ.

ಏ.16, 'ಗುರುಗುಹಾಂತರರಂಗ' ಪುಸ್ತಕ ಬಿಡುಗಡೆ

ಮೈಸೂರು, ಏ.12– ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರಾದ ಶ್ರೀ ಮುತ್ತುಸ್ವಾಮಿ ಧೀಕ್ಷಿತರ ಸಮಗ್ರ ಕೃತಿಗಳ ಕುರಿತ 'ಗುರುಗುಹಾಂತರರಂಗ' ಪುಸ್ತಕ ಏ.16ರಂದು ಬಿಡುಗಡೆಯಾಗಲಿದೆ. ಮೈಸೂರಿನ ಶ್ರೀ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಶ್ರೀರಾಮನವಮಿ ಪ್ರಯುಕ್ತ ನಡೆಯುತ್ತಿರುವ ಸಂಗೀತ ಕಾರ್ಯಕ್ರಮ ಸರಣಿ ನಡುವೆ ಅಂದು ಸಂಜೆ 5.30ಕ್ಕೆ, ಡಾ.ವಿ.ಶ್ರೀಮತಿ ಅವರು ಶ್ರೀ ಮುತ್ತುಸ್ವಾಮಿ ಧೀಕ್ಷಿತರ ಸಮಗ್ರ ಕೃತಿಗಳ ಕುರಿತು ರಚಿಸಿರುವ 'ಗುರುಗುಹಾಂತರರಂಗ' ಗ್ರಂಥವನ್ನು ವಿದುಷಿಯರಾದ ರಂಜನಿ ಹಾಗೂ ಗಾಯತ್ರಿಯವರು ಬಿಡುಗಡೆ ಮಾಡಲಿದ್ದಾರೆ.

ಪತ್ನಿಯಿಂದಲೇ ಪತಿ ಬರ್ಬರ ಹತ್ಯೆ

ಬೆಂಗಳೂರು,ಏ.12– ಪದೇ ಪದೇ ಜಗಳವಾಡುತ್ತಿದ್ದ ಎಂಬ ಕಾರಣಕ್ಕೆ 52 ವರ್ಷದ ವ್ಯಕ್ತಿಯೊಬ್ಬನನ್ನು ಆತನೇ ಹೆಂಡತಿಯೇ ಕಬ್ಬಿಣದ ರಾಡ್‌ನಿಂದ ಹೊಡೆದು ಸಾಯಿಸಿದ್ದಾಳೆ. ಮೃತನನ್ನು ರಿಯಲ್ ಎಸ್ಟೇಟ್ ಏಜೆಂಟ್ ಜೆಎಂ ಉಮೇಶ್ ಎಂದು ಗುರುತಿಸಲಾಗಿದೆ. ಕೊಲೆ ಆರೋಪದ ಮೇರೆಗೆ ಆತನ ಪತ್ನಿ ವರಲಕ್ಷ್ಮಿ (48)ಯನ್ನು ಪೊಲೀಸರು ಬಂಧಿಸಿದ್ದಾರೆ. ಈ ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಆಂಧ್ರಹಳ್ಳಿ ಮುಖ್ಯರಸ್ತೆಯ ಸಾಯಿ ಬಾಬಾ ನಗರದಲ್ಲಿ ವಾಸವಾಗಿದ್ದರು.

ಕುಣಿಗಲ್ ತಾಲೂಕಿನ ಅಮೃತೂರಿನ ಜಿನ್ನಾಗರ ಗ್ರಾಮದ ಉಮೇಶ್ 28 ವರ್ಷಗಳ ಹಿಂದೆ ವರಲಕ್ಷ್ಮಿ ಅವರನ್ನು ವಿವಾಹವಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಕಳೆದ ಕೆಲ ವರ್ಷಗಳಲ್ಲಿ ಕ್ಷುಲಕ ವಿಚಾರಕ್ಕೆ ಪತ್ನಿಯೊಂದಿಗೆ ಜಗಳ ಮಾಡುತ್ತಿದ್ದರು. ಆಕೆಯ ಕುಟುಂಬದವರು ಆರ್ಥಿಕವಾಗಿ ಸಹಾಯ ಮಾಡದ ಕಾರಣ ಬೇಸತ್ತು ಆಗಾಗ್ಗೆ ಪತ್ನಿಯೊಂದಿಗೆ ಜಗಳ ಮಾಡುತ್ತಿದ್ದರು. ತನ್ನ ಹೆಣ್ಣುಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂದು ಆರೋಪಿಸುತ್ತಿದ್ದರು ಎನ್ನಲಾಗಿದೆ.

ಭಾನುವಾರ ರಾತ್ರಿ ದಂಪತಿ ನಡುವೆ ಜಗಳವಾಗಿತ್ತು. ಸೋಮವಾರ ಬೆಳಗ್ಗೆ ಎದ್ದಾಗ ಉಮೇಶ್ ಮತ್ತೆ ಆಕೆಯೊಂದಿಗೆ ಜಗಳವಾಡಿ ಒದ್ದಿದ್ದಾನೆ ಎನ್ನಲಾಗಿದೆ ಮತ್ತೆ ನಿದ್ದೆಗೆ ಜಾರಿದ ಬಳಿಕ ವರಲಕ್ಷ್ಮಿ ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದಿದ್ದಾರೆ. ಇದರಿಂದ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಬೆಳಗ್ಗೆ 7 ಗಂಟೆ ಸುಮಾರಿಗೆ ಎದ್ದ ಹೆಣ್ಣುಮಕ್ಕಳು ರಕ್ತದ ಮಡುವಿನಲ್ಲಿ ಬಿದ್ದಿದ್ದ ತಂದೆಯನ್ನು ಕಂಡು ಏನಾಯಿತು ಎಂದು ಕೇಳಿದ್ದಾರೆ. ಕೂಡಲೇ ಅವರನ್ನು ಸುಂಕದಕಟ್ಟೆಯ ಖಾಸಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಅಲ್ಲಿ ಆತ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಬ್ಯಾಡರಹಳ್ಳಿ ಪೊಲೀಸರು ಕೊಲೆ ಪ್ರಕರಣ ದಾಖಲಾಗಿದೆ.

ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಇವರು ದಿ.03.04.2022 ಭಾನುವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ದಿನಾಂಕ: 14.04.2022ನೇ ಗುರುವಾರ ಶಿವಗಣಾರಾಧನೆಯನ್ನು ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನ, ಕೆ.ಟಿ.ಸ್ಟ್ರೀಟ್, ಮೈಸೂರು.ಇಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೆ ಆಹ್ವಾನ ಎಂದು ತಿಳಿದು ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ

ಶ್ರೀ ಎಸ್.ಅಮೃತೇಶ್ವರ್
ಹಿರಿಯ ವಕೀಲರು

ದುಃಖತಪ್ತರು: ಮಕ್ಕಳು ಹಾಗೂ ಬಂಧುಗಳು

1ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನು ಅಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತ್ನಿ: ಕಲ್ಪನಾ.ಎಂ.ಎಸ್. ಮತ್ತು ಮಕ್ಕಳು ಹಾಗೂ ಪಾಂಡವಪುರ ತಾಲ್ಲೂಕು, ಕಾಳೇನಹಳ್ಳಿಯವರು ಹಾಗೂ ಕುಟುಂಬವರ್ಗದವರು

ಶ್ರೀ ಎಂ.ಮಲ್ಲೇಗೌಡ
(ನಿವೃತ್ತರು ಪೊಲೀಸ್ ಇಲಾಖೆ)
ನಿಧನ: 13-04-2021

8ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ನೀವು ನಮ್ಮ ಮನದಲ್ಲಿ ಹಾಗೂ ಜೀವನದಲ್ಲಿ ಎಂದೆಂದಿಗೂ ಅಮರ.

ನಿಮ್ಮ ನೆನಪಿನಲ್ಲಿರುವ: ತಾಯಿ: ಶ್ರೀಮತಿ ಚಿಕ್ಕಮ್ಮ ಮತ್ತು ಪತ್ನಿ: ಶ್ರೀಮತಿ ಸುಶೀಲಮ್ಮ, ಶ್ರೀಮತಿ ಸೌಮ್ಯ, ಶ್ರೀಮತಿ ಎಸ್.ಎ. ಭವಾನಿ ಹಾಗೂ ದೊಡ್ಡ ಮಾದೇಗೌಡರ ಕುಟುಂಬ ವರ್ಗ, ಕೆ.ಟಿ. ಕೊಪ್ಪಲು, ಮೈಸೂರು.

ಶ್ರೀ ಯಜಮಾನ್ ಎಂ. ರಾಮೇಗೌಡರು
(ದೊಡ್ಡ ಮಾದಪ್ಪನವರ ಮಗ)
ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದ ವ್ಯವಸ್ಥಾಪಕರು, ನಿಧನ: 13-4-2014

8ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನಗಲಿ ಇಂದಿಗೆ 8 ವರ್ಷ ಕಳೆದರೂ ನಿಮ್ಮ ಮಾರ್ಗದರ್ಶನ ಕೃಪಾ ಆಶೀರ್ವಾದದಿಂದ ಮುನ್ನಡೆಯುತ್ತಿದ್ದೇವೆ. ಲೌಕಿಕವಾಗಿ ನೀವಿಲ್ಲದಿದ್ದರೂ ನಮ್ಮ ಮನದಲ್ಲಿ ಸದಾ ಚಿರಸ್ಥಾಯಿಯಾಗಿ ನೆಲೆಸಿದ್ದೀರಿ.

ನಿಮ್ಮ ನೆನಪಿನಲ್ಲಿರುವ: ಮಕ್ಕಳಾದ ಆರ್. ನಾಗರಾಜ್ (CDPO), ಆರ್. ಶಿವಕುಮಾರ್, ಶ್ರೀಮತಿ ದಾಕ್ಷಾಯಿಣಿ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ದೊಡ್ಡಮಾದಪ್ಪನವರ ಕುಟುಂಬವರ್ಗ, ಕೆ.ಟಿ. ಕೊಪ್ಪಲು, ಮೈಸೂರು.

ಶ್ರೀ ಯಜಮಾನ್ ಎಂ. ರಾಮೇಗೌಡರು
(ದೊಡ್ಡ ಮಾದಪ್ಪನವರ ಮಗ)
ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದ ವ್ಯವಸ್ಥಾಪಕರು, ನಿಧನ: 13-4-2014

ತಕ್ಷಣ ಬೇಕಾಗಿದ್ದಾರೆ

ಮೈಸೂರು ಕೆ. ಎಸ್. ಆರ್ ರಸ್ತೆಯಲ್ಲಿ ಕೆಲಸ ಮಾಡಲು ಕೌಶಲ್ಯ ರಹಿತ ಕೆಲಸಗಾರರು ತಕ್ಷಣ ಬೇಕಾಗಿದ್ದಾರೆ.

ವಯಸ್ಸು : 20 ರಿಂದ 45
ತೂಕ : 50 ರಿಂದ 70
8 ಘಂಟೆಗಳ ಕೆಲಸ,
ಸಂಬಳ : 16,500 (ESI & PF)
9980211233/ 8867911233

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ ಈ ಕೆಳಗೆ ಷೆಡ್ಯೂಲ್ ನಮೂದಿಸಿರುವ ಸ್ವತ್ತುಗಳನ್ನು ನನ್ನ ಕಕ್ಷಿದಾರರು, ಷೆಡ್ಯೂಲ್ ಸ್ವತ್ತಿನ ಮಾಲೀಕರೆಂದು ಪ್ರತಿನಿಧಿಸುವವರ ಮೈಸೂರು ನಗರ, 'ಇ' ಬ್ಲಾಕ್, ಜೆ.ಪಿ.ನಗರ, 11ನೇ ಮುಖ್ಯರಸ್ತೆ, 3ನೇ ಅಡ್ಡ ರಸ್ತೆ, ಮನೆ ಸಂಖ್ಯೆ 709 ರಲ್ಲಿ ವಾಸವಾಗಿರುವ ಸಿ.ಕೆ.ರಾಜ್ ಗೋಪಾಲ್ ರವರ ಧರ್ಮಪತ್ನಿ, ಶ್ರೀಮತಿ ಬಿ.ಜಯಲಕ್ಷ್ಮಿ ರವರಿಂದ ವಿಕ್ರಯಿಸಲು ಒಪ್ಪಿಸಿರುತ್ತಾರೆ. ಸದರಿ ಮಾಲೀಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಹಾಗೇ ಸ್ವತ್ತಿನ ಮೂಲ ಕಾಗದ ಪತ್ರಗಳಾದ 1) ಪುಸ್ತಕ-1, ಸಂಪುಟ ಸಂಖ್ಯೆ-2897, ಪುಟ ಸಂಖ್ಯೆ 23-25, ದಾಸ್ತಾವೇಜು ಸಂಖ್ಯೆ 181. 2) ದಿನಾಂಕ: 06-01-1978 ರಂದು ನೋಂದಣಿಯಾಗಿರುವ ಕ್ರಯಪತ್ರ ಸಂಖ್ಯೆ 324/1977-78. ಕಳೆದುಕೊಂಡಿರುತ್ತಾರೆ ಎಂದು ಪ್ರತಿನಿಧಿಸುತ್ತಾರೆ. ಈ ಸಂಬಂಧವಾಗಿ ಶ್ರೀಮತಿ ಬಿ. ಜಯಲಕ್ಷ್ಮೀರವರು ಪ್ರಮಾಣ ಪತ್ರದ ಮೂಲಕ ದಿ: 01.04.2022 ರಂದು ಪ್ರಮಾಣೀಕರಿಸಿ ಮೈಸೂರು ನಗರ, ವಿದ್ಯಾರಣ್ಯಪುರಂ ಆರಕ್ಷಕ ಠಾಣೆಯಲ್ಲಿ ಉಲ್ಲೇಖ ಸಂಖ್ಯೆ ಪಿ.ಪಿ.ಇ.ಟಿ.ಆ ನಂ. 32/2022 ಜಿ.ಎಸ್.ಸಿ ನಂ. ಪಿ004722060058 ರ ಮೂಲಕ ದಾಖಲೆಗಳು ಕಳೆದು ಹೋಗಿರುತ್ತವೆ ಎಂದು ದೂರನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಕಾಣಿಸಿರುವ ಅಸಲು ದಾಖಲಾತಿಗಳು ಸಾರ್ವಜನಿಕರಿಗೆ ದೊರೆತ ಪಕ್ಷದಲ್ಲಿ ಸದರಿ ದಾಖಲಾತಿಗಳಿಂದ ಯಾವುದಾದರೂ ಋಣಭಾರ ಸೃಷ್ಟಿಯಾಗಿದ ಪಕ್ಷದಲ್ಲಿ ಅಥವಾ ಯಾರಿಗಾದರು ಹಕ್ಕು, ಕ್ಲೇಮು ಇದ್ದ ಪಕ್ಷದಲ್ಲಿ ಅಂತಹ ವಿಶಿಷ್ಟ ಹಕ್ಕು, ಕ್ಲೇಮುಗಳು ಯಾರ ಬಾರಿಗೆ ಸಂಬಂಧಿಸಿದ ಹಾಗೇ ದಾಖಲಾತಿಗಳ ಬಗ್ಗೆ ಈ ಕೆಳಕಂಡವರನ್ನು, ಈ ಸಾರ್ವಜನಿಕರ ಪ್ರಕಟಣೆ ನೀಡಿದ 15 ದಿನಗಳ ಒಳಗಾಗಿ ಭೇಟಿ ಮಾಡಿ ಅಥವಾ ನೋಂದಾಯಿತ ಅಂಚೆಯ ಮೂಲಕ ಅಂತಹ ಕ್ಲೇಮು ದಾಖಲೆಗಳನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಕ್ರಯ ವ್ಯವಹಾರಗಳನ್ನು ಪೂರ್ಣ ಗೊಳಿಸಲು ಯಾವುದೇ ವ್ಯವಹಾರಗಳನ್ನು ಸಂಪೂರ್ಣಗೊಳಿಸಲಾಗಿರುತ್ತದೆ. ತದನಂತರ ಯಾವುದೇ ತಕರಾರುಗಳಿಗೆ ನನ್ನ ಕಕ್ಷಿದಾರರು ಬಧ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತು

ಮೈಸೂರು ನಗರ, ನಜರ್‌ಬಾದ್ ಸಿದ್ದಪ್ಪಾಜಿ ಬೀದಿ, 2ನೇ ತಿರುವು, ಮನೆ ಸಂಖ್ಯೆ 299/ಎನ್-5, ಮನೆ ಅಳತೆ 18X20.

Sd/- Mohan.S BAL, LL.B,
Advocate, KAR:2940/2010.
#35, Kuvempu Trust Building,
Kalidasa Road,Jayalakshmipuram,
Mysore-02. Mob.: 9900717197
Vidyaranyapuram Police Station : 0821-2418322, 9742889804
B.Jayalakshmi: 9980099399

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸರ್ಹವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಸಂಖ್ಯೆ ಮೈ.ನ.ಪ್ರಾ/ವ-4/2021-22

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥಮಂಡಳಿ ರವರಿಂದ ದಿನಾಂಕ 27.12.1965ರ ... 13ನೇ 'ಏ' ... 108ಎ ... ದಿ: 26.10.1974ರಂದು ... [illegible]

ವಿಶೇಷ ತಹಸೀಲ್ದಾರ್
ವಲಯ ಕಛೇರಿ-4
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2022ಕ್ಕೆ 42 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 43ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 14, 2022 ರೊಳಗೆ ನೀಡಬೇಕಾಗಿ ಕಳಕಳಿ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಆಂಥೋಣಿ ಡೋಜ್: 8951668960
ಪ್ರೇಮ: 9880549879, ಗಿರೀಶ್. ಆರ್: 9945783118

ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು ಕಛೇರಿ: ಪ್ರಸಾದ್
ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ
08272-223517 / 97314-69871

ಮಂಡ್ಯ ಕಛೇರಿ: ಎಂ.ಕೆ. ಮೋಹನ್‌ರಾಜ್
3ನೇ ಕ್ರಾಸ್, ಅಶೋಕನಗರ, ಮಂಡ್ಯ
8762960325

ಚಾಮರಾಜನಗರ ಕಛೇರಿ: ಸಿದ್ದಲಿಂಗಸ್ವಾಮಿ
ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ
92422-65657

ಹಾಸನ: ಆರ್.ಎನ್.ಸೋಮೇಶ್‌ಗೌಡ
ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 94484-01175

ನಂಜನಗೂಡು: ಎಂ.ಎಸ್.ಸುದರ್ಶನ್
ಇಡಬ್ಲ್ಯೂಎಸ್-12, ಕೆಹೆಚ್‌ಬಿ ಕಾಲೋನಿ, ನಂಜನಗೂಡು.
9972335009

ಟಿ. ನರಸೀಪುರ: ಕುಮಾರ್
ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 99867-19590

ಹುಣಸೂರು: ಕೆ. ಕೃಷ್ಣ (ಕೆ.ಕೆ.)
EWS 204, KHB ಕಾಲೋನಿ, ಹುಣಸೂರು. 94487-20626
ಹುಣಸೂರು: ಹೆಚ್.ಎಸ್.ಮುರಳೀಧರ್
ಬ್ರಾಹ್ಮಣರ ಬೀದಿ, ಹುಣಸೂರು. 94482-22415

ಕೆ.ಆರ್. ನಗರ: ಕೆ.ಬಿ. ರಮೇಶ್
ಸ್ನೇಹ ಎಂಟರ್ ಪ್ರೈಸಸ್, ಬಿ.ಎಂ.ರಸ್ತೆ, ಕೆ.ಆರ್. ನಗರ. 94480-21368

ಗುಂಡ್ಲುಪೇಟೆ: ಸೋಮಶೇಖರ್
ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 98459-95426

ಶ್ರೀರಂಗಪಟ್ಟಣ: ವಿನಯ್ ಕಾರೇಕುರ
96868-93234

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ, ಬಿತ್ತನೆಬೀಜ ಮತ್ತು ಕ್ರಿಮಿನಾಶಕಗಳ ಮಾರಾಟಗಾರರ ಸಂಘ (ರಿ)

ನಂ.180/1, 1ನೇ ಮಹಡಿ, ರಾಮವಿಲಾಸ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು - 570004.

ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ, ಬಿತ್ತನೆಬೀಜ ಮತ್ತು ಕೀಟನಾಶಕ ಮಾರಾಟಗಾರರ ಸಂಘದ ವತಿಯಿಂದ ದಿನಾಂಕ :14-04-2022 ರ ಗುರುವಾರ ಬೆಳಗ್ಗೆ 10-00 ಗಂಟೆಗೆ "ನಿತ್ಯೋತ್ಸವ ಹಾಲ್" ಬಲ್ಲಾಳ್ ಸರ್ಕಲ್, ಮೈಸೂರು ಇಲ್ಲಿ ವಾರ್ಷಿಕ ಮಹಾ ಸಭೆಯನ್ನು ಆಯೋಜಿಸಲಾಗಿರುತ್ತದೆ.

ಸಭೆಯ ಆಹ್ವಾನ ಪತ್ರಿಕೆಯು ತಲುಪದೇ ಇರುವವರು ಈ ಪ್ರಕಟಣೆಯನ್ನು ಆಹ್ವಾನ ಪತ್ರಿಕೆಯೆಂದು ಭಾವಿಸಿ ತಾವು ಸಭೆಗೆ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಸಹಿ/- ಕಾರ್ಯದರ್ಶಿ

ನಕ್ಕರೆ ಅದೇ ಸ್ವರ್ಗ

ಜಿಪುಣ ಶ್ರೀಮಂತ ರೋಗಿ : ನನ್ನ ಖಾಯಿಲೆ ವಾಸಿ ಮಾಡೋಕೆ ಎಷ್ಟು ಖರ್ಚಾಗುತ್ತೆ?
ವೈದ್ಯ : ಐವತ್ತು ರೂಪಾಯಿ
ರೋಗಿ : ಸಾಯಲು
ವೈದ್ಯ : ಐದು ರೂಪಾಯಿ
ರೋಗಿ : ಹಾಗಾದರೆ ನಾನು ಸಾಯಲು ಸಿದ್ಧ ನಲವತ್ತೈದು ರೂಪಾಯಿ ಉಳಿಯುತ್ತೆ

ಮೈಸೂರು ಮಿತ್ರ
ಬುಧವಾರ, 13 ಏಪ್ರಿಲ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಜೀವನದಲ್ಲಿ ಎಲ್ಲಾ ಲಾಭಗಳನ್ನು ಒಮ್ಮೆಲೇ ಪಡೆಯಲು ಪ್ರಯತ್ನಿಸುವವನಿಗೆ ಏನೂ ದೊರೆಯದು –ಬೂಮ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆನೆ ಭಾರ ಆನೆಗೆ ಸೊಳ್ಳೆ ಭಾರ ಸೊಳ್ಳೆಗೆ

ನಿಮ್ಮ ಪತ್ರಗಳು

ಬಹುತ್ವ ಭಾರತದ ಬಟ್ಟೆ ಬಿಚ್ಚಿಸುತ್ತಿರುವ ಪೊಲೀಸ್

ಮಾನ್ಯರೆ,

ಇಂದು ನಾವು ನಮ್ಮದೇ ಆದ ಸ್ವಾತಂತ್ರ್ಯ ಭಾರತದಲ್ಲಿ ಜೀವಿಸುತ್ತಿದ್ದೇವೋ ಅಥವಾ ಬ್ರಿಟಿಷ್ ಆಳ್ವಿಕೆಯಲ್ಲಿ ಬದುಕುತ್ತಿದ್ದೇವೋ ಎಂಬುದು ಅರ್ಥವಾಗದೇ ನಲುಗುತ್ತಿದ್ದೇವೆ. ಏಕೆಂದರೆ, ಇತ್ತೀಚೆಗೆ ಮಧ್ಯಪ್ರದೇಶದ ಸಿಧಿ ಜಿಲ್ಲೆಯಲ್ಲಿ ಬಿಜೆಪಿ ಶಾಸಕ ಕೇದಾರನಾಥ ಶುಕ್ಲಾ ಹಾಗೂ ಅವರ ಪುತ್ರ ಕುಂದೇರ್ ಗುರುದತ್ ಶುಕ್ಲಾ ವಿರುದ್ಧ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದರೆನ್ನಲಾದ ರಂಗಭೂಮಿ ಕಲಾವಿದ ನೀರಜ್‌ಕುಮಾರ್‌ರ ಬಂಧನದ ವಿರುದ್ಧ ನಡೆದ ಪ್ರತಿಭಟನೆಯನ್ನು ವರದಿ ಮಾಡಲು ಹೋಗಿದ್ದ ಪತ್ರಕರ್ತರು, ಛಾಯಾಗ್ರಾಹಕರು ಹಾಗೂ ರಂಗಭೂಮಿ ಕಲಾವಿದರು ಸೇರಿ 8 ಮಂದಿಯನ್ನು ಮಧ್ಯಪ್ರದೇಶದ ಪೊಲೀಸರು ಬಂಧಿಸಿ ಅವರ ಮೇಲೆ ದೌರ್ಜನ್ಯ ಎಸಗಿದಲ್ಲದೇ ಠಾಣೆಯೊಳಗೆ ಒಳ ಉಡುಪಿನಲ್ಲಿ ಕೈ ಕಟ್ಟಿ ನಿಲ್ಲುವಂತೆ ಮಾಡಿರುವ ಆಘಾತಕಾರಿ ಛಾಯಾಚಿತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿರುವುದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಪ್ರಜಾತಂತ್ರ ವ್ಯವಸ್ಥೆಯ ಅಂಗಗಳಾದ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ತನ್ನ ಕರ್ತವ್ಯ ನಿರ್ವಹಿಸುವುದನ್ನು ಮಾಧ್ಯಮದಲ್ಲಿ ಪ್ರಕಟಿಸುವುದು. ಅದರ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡುವುದು. ಒಂದು ವೇಳೆ ಅದು ತಪ್ಪು ಎಂದಾದರೆ ಅದನ್ನು ಸರಿಪಡಿಸುವಂತೆ ಒತ್ತಾಯಿಸುವುದು ಮತ್ತು ದೈನಂದಿನವಾಗಿ ಸಮಾಜದಲ್ಲಿ ನಡೆಯುವ ವಿಷಯಗಳನ್ನು ಜನರಿಗೆ ತಲುಪುವಂತೆ ಮಾಡುವ ಕೆಲಸ ಮಾಧ್ಯಮದವರದ್ದಾಗಿದೆ. ಇವರದ್ದು ಅತ್ಯಂತ ಜವಾಬ್ದಾರಿಯುತ ಮತ್ತು ಮೌಲ್ಯವರ್ಧಿತವಾದ ವೃತ್ತಿಯಾಗಿದೆ. ಇಂತಹ ವೃತ್ತಿಯಲ್ಲಿ ತೊಡಗಿರುವ ಪತ್ರಕರ್ತರನ್ನು ಮಧ್ಯಪ್ರದೇಶದ ಪೊಲೀಸರು ಬಟ್ಟೆ ಬಿಚ್ಚಿಸಿ ನಿಲ್ಲಿಸುತ್ತಾರೆ ಎಂದರೆ ವ್ಯವಸ್ಥೆಯನ್ನು ಯಾವ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಮುಂದುವರೆದು ಠಾಣಾಧಿಕಾರಿ ಅಭಿಷೇಕ್ ತಿವಾರಿ ಪರ್ತಕರ್ತರಿಗೆ ನೀವು ಯಾಕೆ ಶಾಸಕರ ವಿರುದ್ಧ ವರದಿ ಪ್ರಕಟಿಸುತ್ತೀರಾ? ಮತ್ತೆ ಶಾಸಕರ ವಿರುದ್ಧ ವರದಿ ಪ್ರಕಟಿಸಿದರೆ ನಿಮ್ಮನ್ನು ಬೆತ್ತಲೆ ಮೆರವಣಿಗೆ ಮಾಡುವುದಾಗಿ ಬೆದರಿಕೆಯನ್ನು ಸಹ ಒಡ್ಡಿದ್ದಾರೆ. ಇವರಿಗೆ ಬಂಧಿಸಿದ ವ್ಯಕ್ತಿಯ ಬಟ್ಟೆ ಬಿಚ್ಚಿಸಲು ಅಧಿಕಾರ ಕೊಟ್ಟವರ್‍ಯಾರು? ಕಾನೂನಾತ್ಮಕವಾಗಿ ಒಬ್ಬ ವ್ಯಕ್ತಿಯನ್ನು ಬಂಧಿಸಿದರೆ ಆತನಿಗೆ ಸಂವಿಧಾನ ಕಲಂ. 21 ಪ್ರಕಾರ ಜೀವ ಸಂರಕ್ಷಣೆ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆ ಮಾಡಬೇಕೇ ಹೊರತು ಹರಣ ಮಾಡತಕ್ಕುದಲ್ಲ ಎಂದು ಹೇಳಿದೆ. ಆದರೆ ಇಲ್ಲಿ ಪೊಲೀಸರು ವ್ಯಕ್ತಿ ಸ್ವಾತಂತ್ರ್ಯವನ್ನು ಮಾತ್ರವಲ್ಲದೇ ಪತ್ರಿಕಾ ಸ್ವಾತಂತ್ರ್ಯವನ್ನು ಸಹ ಹರಣ ಮಾಡಿ ಸಂವಿಧಾನಕ್ಕೆ ದ್ರೋಹ ವೆಸಗಿದ್ದಾರೆ. ಈ ಪೊಲೀಸರು ಶಾಸಕರ ಪರಧ್ವನಿ ಎತ್ತಿ ಪತ್ರಕರ್ತರಿಗೆ ಧಮ್ಕಿ ಹಾಕುತ್ತಾರೆ ಎಂದರೆ ಇವರು ಶಾಸಕರ ಪರ ಕೆಲಸ ಮಾಡುತ್ತಾರೋ ಅಥವಾ ಸಾರ್ವಜನಿಕರ ಪರ ಕೆಲಸ ಮಾಡುತ್ತಾರೋ ಎಂಬುದು ಸಹ ವಿಮರ್ಶಿಸಬೇಕಾಗಿದೆ. ಇವರು ಸಾರ್ವಜನಿಕ ತೆರಿಗೆಯಲ್ಲಿ ಪಡೆಯುವ ಸಂಬಳಕ್ಕೆ ಪ್ರಾಮಾಣಿಕರಾಗಿರಬೇಕೇ ಹೊರತು ಶಾಸಕರು ಕೊಡುವ ದೇಣಿಗೆಗೆ ಅಲ್ಲ ಎಂಬುದು ಇವರು ಮನಗಾಣ ಬೇಕಾಗಿದೆ. ಈ ಕೃತ್ಯ ಭಾರತದ ಪ್ರಜಾತಂತ್ರ ವ್ಯವಸ್ಥೆಗೆ ಕೊಳ್ಳಿ ಇಟ್ಟಂತಾಗಿದೆ ಅಲ್ಲದೇ ಬಹುತ್ವ ಭಾರತದ ಬಟ್ಟೆಯನ್ನು ಬಿಚ್ಚಿಸಲು ಹೊರಟಿದ್ದಾರೆ ಎಂದರೆ ತಪ್ಪಾಗಲಾರದು! ಕೂಡಲೇ ಈ ಪತ್ರಕರ್ತರ ಮೇಲೆ ದೌರ್ಜನ್ಯಎಸಗಿದ ಪೊಲೀಸರ ಮೇಲೆ ಸರ್ಕಾರ ಕಾನೂನು ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ಮುಂದೊಂದು ದಿನ ಇವರಿಂದಲೇ ಸಮಾಜದಲ್ಲಿ ಅರಾಜಕತೆ ಸೃಷ್ಟಿಯಾಗಿ ಕಟ್ಟಕಡೆಯ ಜನರಿಗೆ ನ್ಯಾಯ ಮರೀಚಿಕೆಯಾಗಿ ಪ್ರಜಾತಂತ್ರ ವ್ಯವಸ್ಥೆ ದುರ್ಬಲಗೊಳ್ಳುವ ದಿನ ದೂರವೇನಿಲ್ಲ.

–ಪುನೀತ್. ಎನ್. ವಕೀಲರು, ಅಶೋಕಪುರಂ, ಮೈಸೂರು.

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಶ್ರೀ ಸಾಮಾನ್ಯ ಕಂಗಾಲು

ಮಾನ್ಯರೆ,

ಕೇಂದ್ರ ಮತ್ತು ರಾಜ್ಯ ಸರಕಾರಗಳ ಆಡಳಿತ ಒಂದೇ ಪಕ್ಷವಾದರೂ ಜನರ ಕಷ್ಟಗಳು ನಿವಾರಣೆಯಾಗುವ ಬದಲು ಹೆಚ್ಚಾಗುತ್ತಲೇ ಇದೆ. ಕಳೆದ 2 ವಾರದಿಂದ ಪೆಟ್ರೋಲ್, ಡೀಸೆಲ್ ಬೆಲೆ ಹತ್ತು ರೂಪಾಯಿಗಿಂತ ಹೆಚ್ಚು ಏರಿಕೆಯಾಗಿದೆ. ಈಗ ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ 35 ಪೈಸೆ ಹೆಚ್ಚಳ ಮಾಡಿದೆ. ಅಡುಗೆ ಎಣ್ಣೆಯು ಸೇರಿ ಆಹಾರ ಸಾಮಗ್ರಿಗಳು, ನಂದಿನಿ ಉತ್ಪನ್ನಗಳಾದ ತುಪ್ಪ ಹೀಗೆ ಹಲವು ವಸ್ತುಗಳ ಮೇಲೆ ಬೆಲೆ ಏರಿಕೆಯಾಗುತ್ತಲೇ ಇದೆ. ಕೋವಿಡ್ ಎಂಬ ಸಾಂಕ್ರಾಮಿಕ ರೋಗದಿಂದ ಜನಸಾಮಾನ್ಯರು ಹದಗೆಟ್ಟ ಸ್ಥಿತಿಯನ್ನು ಸುಧಾರಿಸಿ ಕೊಳ್ಳುತ್ತಿರುವ ಸಮಯದಲ್ಲಿ ಸರಕಾರ ಎಲ್ಲ ವಸ್ತುಗಳ ಬೆಲೆಯನ್ನು ಹೆಚ್ಚಿಸುತ್ತಿರುವುದು ತರವಲ್ಲ.

ಬೆಲೆ ಏರಿಕೆಯ ಕಾರಣದಿಂದ ಹೋಟೆಲ್ ಉದ್ಯಮ, ಟ್ರಾವೆಲ್ಸ್ ಉದ್ಯಮಗಳೆಲ್ಲ ತಮ್ಮ ಸೇವೆಯ ದರವನ್ನು ಹೆಚ್ಚಿಸಿದ್ದು, ಇದು ಜನ ಸಾಮಾನ್ಯರ ಮೇಲೆ ಪ್ರಭಾವ ಬೀರುತ್ತದೆ. ಸರಕಾರ ಜನರ ದೃಷ್ಟಿ ಕೋನ ವನ್ನು ಬೇರೆ ಅನಗತ್ಯ ವಿಷಯಗಳ ಕಡೆ ಗಮನ ನೀಡುವಂತೆ ಮಾಡಿ, ಬೆಲೆ ಏರಿಕೆಯ ಬಿಸಿಯನ್ನು ಜನರಿಗೆ ನೀಡುತ್ತಿದೆ.

–ಅನುಷ ಬಿ.ಎನ್, ಕಾಳೇನಹಳ್ಳಿ

ಕುಮಾರಸ್ವಾಮಿ ರಾಜಕೀಯ ಮಾಡುವುದೂ ಹೊಟ್ಟೆಪಾಡಿಗಾಗಿ!

ಮಾನ್ಯರೆ,

ಅರ್ಚಕರು ಹೊಟ್ಟೆಪಾಡಿಗಾಗಿ ಪೂಜೆ ಮಾಡುತ್ತಾರೆ ಎಂದಿದ್ದಾರೆ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ! ಅರ್ಚಕರು ಪೂಜೆ ಮಾಡುವುದು ಹೊಟ್ಟೆಪಾಡಿಗಾಗಿ ಎನ್ನುವುದಾದರೆ ಎಚ್.ಡಿ. ಕುಮಾರಸ್ವಾಮಿಯವರು ರಾಜಕೀಯ ಮಾಡುವುದು ಹೊಟ್ಟೆಪಾಡಿಗಾಗಿ ಎನ್ನಬಹುದಲ್ಲವೇ?

–ಪಿ.ಜೆ.ರಾಘವೇಂದ್ರ ಮೈಸೂರು

ಉದ್ಬೂರು ಗ್ರಾಮದಲ್ಲಿ ರಸ್ತೆಯಲ್ಲಿ ಕಸ ತೆರವುಗೊಳಿಸಿ

ಮಾನ್ಯರೇ,

ಮೈಸೂರು ತಾಲೂಕು ಉದ್ಬೂರು ಗ್ರಾಮದ ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಹಲವು ತಿಂಗಳುಗಳಿಂದ ತ್ಯಾಜ್ಯ ವಿಲೇವಾರಿಯಾಗದೆ ಕಸದ ರಾಶಿ ರಾರಾಜಿಸುತ್ತಿದೆ. ರಸ್ತೆಯ ಪಕ್ಕದಲ್ಲೇ ಇರುವ ಕೆರೆಯು ತ್ಯಾಜ್ಯದಿಂದ ಬರುವ ದುರ್ವಾಸನೆ ಹಾಗೂ ಸೊಳ್ಳೆಗಳಿಂದ ಅಲ್ಲಿ ಓಡಾಡುವ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ರಾಜಕಾರಣಿಗಳು ಹಾಗೂ ಗಣ್ಯರು ಬರುವಾಗ ಹಾಗೂ ಭೇಟಿ ನೀಡುವಾಗ ಮಾತ್ರ ಇದರ ಸ್ವಚ್ಛತೆ ನಡೆಯುತ್ತದೆ. ಮತ್ತೊಬ್ಬ ರಾಜಕಾರಣಿ ಬರುವವರೆಗೂ ಆ ಕಸದ ರಾಶಿಗೆ ಮುಕ್ತಿ ಸಿಗುವುದಿಲ್ಲ. ಹಾಗಾಗಿ ಇಲ್ಲಿನ ಸ್ವಚ್ಛತೆ ಕಾರ್ಯ ಕೇವಲ ತೋರುವಿಕೆಯ ಸಂಗತಿಯಾಗಿದೆ. ಈಗಲಾದರೂ ಸ್ಥಳೀಯರ ಆರೋಗ್ಯ ಹಾಗೂ ಗ್ರಾಮದ ಸ್ವಚ್ಛತೆಯ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳು ಸ್ವಚ್ಛತೆಯ ಬಗ್ಗೆ ಗಮನಹರಿಸಬೇಕೆಂದು ತಮ್ಮಲ್ಲಿ ಮನವಿ

–ಸುಚಿತ್ರ, ಸಿ. ಮಹಾರಾಣಿ ಕಾಲೇಜು ಮೈಸೂರು.



ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ರಾಮಾನುಜಾಚಾರ್ಯರು ಹಾಗೂ ಆಳ್ವಾರರುಗಳ ಉಪದೇಶಗಳು


ರಾಮಾನುಜಾಚಾರ್ಯರು ಮದರಾಸಿನ ಸಮೀಪದಲ್ಲಿರುವ ಶ್ರೀಪೆರಂಬೂರಿನಲ್ಲಿ 1017ರಲ್ಲಿ ಜನಿಸಿದರು. ತಂದೆಯ ಹೆಸರು **ಕೇಶವ ಸೋಮಯಾಜಿ** ಹಾಗೂ ತಾಯಿಯ ಹೆಸರು ಕಾಂತಿಮತಿ. ಇವರಿಗೆ 15 ವರ್ಷಗಳಾಗಿದ್ದಾಗ **ರಕ್ಷಾಂಬಾಳ್** ಎಂಬುವರೊಡನೆ ವಿವಾಹ ನೆರವೇರಿತು. ಇವರು ತಮ್ಮ ವಿದ್ಯಾಭ್ಯಾಸವನ್ನು ಕಾಂಚೀಪುರಂ ಅದ್ವೈತ ವಿದ್ವಾಂಸರಾದ **ಯಾದವ ಪ್ರಕಾಶರಲ್ಲಿ** ಆರಂಭಿಸಿದರು. ಆದರೆ ಇವರು ಯಾದವ ಪ್ರಕಾಶರಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಲಿಲ್ಲ. ಏಕೆಂದರೆ ಉಪನಿಷದ್ ವಾಕ್ಯಗಳನ್ನು ಅರ್ಥೈಸುವಲ್ಲಿ ಭಿನ್ನಾಭಿಪ್ರಾಯಗಳು ಉಂಟಾದವು. ಹೀಗಾಗಿ ರಾಮಾನುಜಾಚಾರ್ಯರು ಸ್ವತಂತ್ರವಾಗಿ ಯೋಚಿಸಲು ಆರಂಭಿಸಿದರು.

ಆಚಾರ್ಯರು ಗೊಂದಲದಲ್ಲಿದ್ದಾಗ ಅವರಿಗೆ ಧೈರ್ಯ ಹಾಗೂ ವಿಶ್ವಾಸವನ್ನು ತುಂಬುತ್ತಿದ್ದವರು **ಕಾಂಚೀಪೂರ್ಣರು**. ಶ್ರೀರಂಗದಲ್ಲಿ **ಯಮುನಾಚಾರ್ಯರು** ಆರೋಗ್ಯವಿಲ್ಲದೇ ತಮ್ಮ ಉತ್ತರಾಧಿಕಾರಿಯನ್ನು ಹುಡುಕುತ್ತಿದ್ದರು. ಆಗ ರಾಮಾನುಜಾಚಾರ್ಯರ ಹೆಸರು ಅವರ ಕಿವಿಗೂ ಬಿದ್ದಿತು. ಅವರನ್ನೇ ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಲು ತೀರ್ಮಾನಿಸಿ **ಮಹಾಪೂರ್ಣ** ಎಂಬುವರನ್ನು ಶ್ರೀರಂಗಕ್ಕೆ ಕರೆಸಿಕೊಂಡರು. ಆದರೆ ರಾಮಾನುಜಾಚಾರ್ಯರು ಬರುವುದಕ್ಕೂ ಮುಂಚೆಯೇ ಯಮುನಾಚಾರ್ಯರು ನಿಧನರಾದರು. **ಯಮುನಾಚಾರ್ಯರ** ಮೂರು ಕೈಬೆರಳುಗಳು ಮಡಚಿಕೊಂಡಿದ್ದವು. ಇವು **ಯಮುನಾಚಾರ್ಯರ** ಮೂರು ಮನೋರಥಗಳ ಸಂಕೇತವೆಂದು ತಿಳಿದ ರಾಮಾನುಜಾಚಾರ್ಯರು ಅಲ್ಲಿ ನೆರೆದಿದ್ದ ಜನಸ್ತೋಮದ ಎದುರಿನಲ್ಲಿ **ಬ್ರಹ್ಮಸೂತ್ರಗಳಿಗೆ ವಿಶಿಷ್ಟಾದ್ವೈತ ಪರವಾದ** ವ್ಯಾಖ್ಯಾನ ಬರೆಯುವುದು ಮತ್ತು **ವಿಷ್ಣು ಸಹಸ್ರನಾಮದ ಭಾಷ್ಯ** ಹಾಗೂ **ದಿವ್ಯ ಪ್ರಬಂಧಗಳಿಗೆ** ಟೀಕೆ ಬರೆಯುತ್ತೇನೆಂದು ಪ್ರತಿಜ್ಞೆ ಮಾಡಿದರು. ಮಡಚಿಕೊಂಡಿದ್ದ **ಯಮುನಾಚಾರ್ಯರ** ಕೈಬೆರಳುಗಳು ತೆರೆದುಕೊಂಡವು. ಆಗ ಬ್ರಹ್ಮಸೂತ್ರಕ್ಕೆ ಹೊಸದೊಂದು ಭಾಷ್ಯವನ್ನು ಶ್ರೀವೈಷ್ಣವ ಸಿದ್ಧಾಂತ ಪ್ರಕಾರ ಬರೆಯುತ್ತೇನೆ ಎಂದು ವಾಗ್ದಾನ ಮಾಡಿದರು.

ಆಧ್ಯಾತ್ಮದ ವಿಷಯಗಳಿಗೆ ಸಂಬಂಧಿಸಿದಂತೆ ಇವರಿಗೂ ಇವರ ಧರ್ಮಪತ್ನಿಯ ನಡುವೆ ಪರಸ್ಪರ ಹೊಂದಾಣಿಕೆ ಇಲ್ಲದಾಯಿತು. ರಾಮಾನುಜಾಚಾರ್ಯರು ಅವರ ಹೆಂಡತಿ ರಕ್ಷಾಂಬಾಳ್ ಅವರಿಗೆ ಬೇಕಾದುದೆಲ್ಲವನ್ನೂ ನೀಡಿ ಗೌರವದಿಂದ ಅವರ ತವರುಮನೆಗೆ ಕಳುಹಿಸಿದರು.

ಈಗ ರಾಮಾನುಜಾಚಾರ್ಯರು ಎಲ್ಲಾ ಆಸೆಗಳನ್ನೂ ತ್ಯಜಿಸಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಈ ಆಚಾರ್ಯರಲ್ಲಿ ಗೌರವವಿದ್ದ ಅನೇಕರು ಆಚಾರ್ಯರ ಶಿಷ್ಯರಾದರು. ನಂತರ, ಇವರು ಕಾಂಚೀಪುರ ಮಠಕ್ಕೆ ಬಂದು ನೆಲೆಸಿದರು. ಇದರಿಂದ ಇವರಿಗೆ ತತ್ವ ಪ್ರಸಾರಕ್ಕೆ ಹೆಚ್ಚಿನ ಅನುಕೂಲವೇ ಆಯಿತು. ಸ್ವಲ್ಪ ದಿನಗಳ ನಂತರ ಕಾಂಚೀಪುರ ತ್ಯಜಿಸಿ ಶ್ರೀರಂಗಕ್ಕೆ ಬಂದು ಇವರು ಯಮುನಾಚಾರ್ಯರ ಮಠಕ್ಕೆ ಬಂದು ಅಧಿಪತ್ಯವನ್ನು ವಹಿಸಿಕೊಂಡರು. ನಂತರ ಇವರು ಗೋಷ್ಠಿ ಪೂರ್ಣರಿಂದ ಮಂತ್ರೋಪ ದೇಶವನ್ನು ಪಡೆದರು. ಈ ಮಂತ್ರವನ್ನು ಗುಟ್ಟಾಗಿಡಬೇಕೆಂದು ಗೋಷ್ಠಿ ಪೂರ್ಣರು ಹೇಳಿದ್ದರೂ ರಾಮಾನುಜಾಚಾರ್ಯರು ಎಲ್ಲ ಜನಗಳ ಉದ್ಧಾರಕ್ಕಾಗಿ, ದೇವಾಲಯದಲ್ಲಿದ್ದ ಗೋಪುರವನ್ನೇರಿ ಅಲ್ಲಿ ನೆರೆದಿದ್ದ ಜನಸ್ತೋಮಕ್ಕೆ ಉಪದೇಶ ಮಾಡಿದರು. ಈ ಮಂತ್ರವನ್ನು ಎಲ್ಲರಿಗೂ ಉಪದೇಶ ಮಾಡಿದ್ದರಿಂದ ನೀವು ನರಕಕ್ಕೆ ಹೋಗುತ್ತೀರಿ ಎಂದು ಗೋಷ್ಠಿ ಪೂರ್ಣರು ಹೇಳಿದರು. ನಾನು ನರಕಕ್ಕೆ ಹೋದರೂ ಪರವಾಗಿಲ್ಲ, ಎಲ್ಲರಿಗೂ ಈ ಮಂತ್ರದ ಉಪದೇಶಕ್ಕಾಗಿ ಸಂತೋಷಿಸುತ್ತೇನೆ ಎಂದು ಹೇಳಿ ಜನಸ್ತೋಮಕ್ಕೆ ಆಶ್ಚರ್ಯವನ್ನುಂಟುಮಾಡಿದರು.

ಶ್ರೀರಂಗದ ದೊರೆ ಕುಲೋತ್ತುಂಗ ಚೋಳ ರಾಜನು ಶಿವನ ಭಕ್ತನಾಗಿದ್ದನು. ಇವನು ರಾಮಾನುಜಾಚಾರ್ಯರ ವೈಷ್ಣವ ಸಿದ್ಧಾಂತಕ್ಕೆ ಹೆಚ್ಚಿನ ಪ್ರಚಾರ ಕೊಟ್ಟಿದ್ದನ್ನು ನೋಡಿ ಕೋಪಗೊಂಡನು. ಇವನು ಕೊಟ್ಟ ತೊಂದರೆಯನ್ನು ತಾಳಲಾರದೇ ರಾಮಾನುಜಾಚಾರ್ಯರು ಶ್ರೀರಂಗಂ ನಗರವನ್ನು ಬಿಟ್ಟು, ಮೈಸೂರಿಗೆ ಬಂದರು. ಇಲ್ಲಿ ರಾಮಾನುಜಾಚಾರ್ಯರಿಗೆ ಭವ್ಯ ಸ್ವಾಗತ ದೊರಕಿತು. ಆ ಸಮಯದಲ್ಲಿ ಮೈಸೂರು ರಾಜ್ಯವನ್ನು ಆಳುತ್ತಿದ್ದವನು ಬಿಟ್ಟಿದೇವ. ರಾಮಾನುಜಾಚಾರ್ಯರು ಇವನಿಗೆ ವೈಷ್ಣವ ಧರ್ಮದ ದೀಕ್ಷೆಯನ್ನು ನೀಡಿ **ವಿಷ್ಣುವರ್ಧನ** ಎಂಬ ಹೊಸ ಹೆಸರನ್ನು ಕೊಟ್ಟರು. ಈ ದೊರೆಯು ರಾಮಾನುಜಾಚಾರ್ಯರ ಅಪೇಕ್ಷೆಯಂತೆ ಬೇಲೂರಿನಲ್ಲಿ **ಚನ್ನಕೇಶವ**, ತಲಕಾಡಿನಲ್ಲಿ **ಕೀರ್ತಿ ನಾರಾಯಣ,** ಹಾಗೂ ಗದುಗಿನಲ್ಲಿ **ವೀರ ನಾರಾಯಣ** ಮತ್ತು ಮೇಲುಕೋಟೆಯಲ್ಲಿ **ಚಲುವನಾರಾಯಣ** ಎಂಬ ಹೆಸರಿನ ದೇವಾಲಯಗಳನ್ನು ನಿರ್ಮಿಸಿದನು.



ರಾಮಾನುಜಾಚಾರ್ಯರು

ರಾಮಾನುಜಾಚಾರ್ಯರು ಮೈಸೂರಿಗೆ ಬಂದ ಸಮಯದಲ್ಲಿ **ಸಾಲಿಗ್ರಾಮ** ಹಾಗೂ ತೊಂಡನೂರು (ತೊಣ್ಣೂರು) ಮುಂತಾದ ಸ್ಥಳಗಳಲ್ಲಿದ್ದ 14 ವರ್ಷಗಳ ಕಾಲ ಇದ್ದರು. ನಂತರ ರಾಮಾನುಜಾಚಾರ್ಯರು ಶ್ರೀರಂಗಕ್ಕೆ ಹಿಂದಿರುಗಿದರು. ಇವರು ಅನೇಕ ವಿಷ್ಣು ದೇವಾಲಯಗಳನ್ನು **ಪಂಚರಾತ್ರ** ಆಗಮಗಳ ಪ್ರಕಾರ ಪೂಜಾ ವಿಧಾನವನ್ನು ಏರ್ಪಡಿಸಿದರು. ಶ್ರೀರಂಗನಲ್ಲಿ ರಾಮನುಜಾ ಚಾರ್ಯರು ತಮ್ಮ ವ್ಯಾಖ್ಯಾನಗಳ ಮೂಲಕ ವಿಶಿಷ್ಟಾದ್ವೈತ ವೇದಾಂತವನ್ನು ಯಶಸ್ವಿಯಾಗಿ ಪ್ರಚಾರ ಮಾಡಿದರು.

ರಾಮಾನುಜಾಚಾರ್ಯರು ತಮ್ಮ ಹಿಂದಿನ ಗುರುಗಳ ಮಾರ್ಗದರ್ಶನವನ್ನು ಮನದಟ್ಟು ಮಾಡಿಕೊಂಡರು ಹಾಗೂ **ಬ್ರಹ್ಮಸೂತ್ರಗಳಿಗೂ** ಮತ್ತು **ಭಗವದ್ಗೀತೆಗೂ** ವಿಶಿಷ್ಟಾದ್ವೈತ ಪರವಾಗಿ ಭಾಷ್ಯವನ್ನು ರಚಿಸಿದರು. ಜೊತೆಯಲ್ಲಿಯೇ ವಿದ್ಯಾವಂತರು ಹಾಗೂ ವಿದ್ಯೆ ತಿಳಿಯದವರಿಗಾಗಿ **ಆತ್ಮೋದ್ಧಾರದ** ಮಾರ್ಗವನ್ನು ತೋರಿಸಿದರು. ರಾಮಾನುಜಾಚಾರ್ಯರು ರಚಿಸಿದ ಗ್ರಂಥಗಳಲ್ಲಿ ಮುಖ್ಯವಾದವುಗಳೆಂದರೆ, **ಶ್ರೀ ಭಾಷ್ಯ, ವೇದಾಂತ ಸಾರ** ಹಾಗೂ **ವೇದಾಂತ ದೀಪ** ಎಂಬ ಸೂತ್ರಗಳಿಗೆ ವಿಶಿಷ್ಟಾದ್ವೈತ ಪರವಾದ ಅರ್ಥ ವಿವರಣೆ ಹಾಗೂ **ಗದ್ಯತ್ರಯಗಳು** ಎಂದು ಪ್ರಸಿದ್ಧವಾಗಿರುವ **ಶ್ರೀರಂಗ ಗದ್ಯ, ಶರಣಾಗತಿ ಗದ್ಯ ಹಗೂ ಆತ್ಮೋಜೀವನ ಉದ್ಧಾರವನ್ನು** ಮಾಡಿಕೊಳ್ಳಲು ಸಹಾಯವಾಗುವಂತಹಾ ಗದ್ಯಗಳನ್ನು ಇವರು ರಚಿಸಿದರು.

ತಮ್ಮ ಈ ಗ್ರಂಥಗಳು ಪ್ರಾಚೀನ ಕಾಲದವು ಎಂದು ತೋರಿಸಲು ತಮಗೆ ಗುರುಗಳಾಗಿದ್ದವರ ಹೆಸರನ್ನು ರಾಮಾನುಜಾಚಾರ್ಯರು ಗ್ರಂಥಗಳಲ್ಲಿ ಸೂಚಿಸಿದ್ದಾರೆ. ಈ ಪ್ರಾಚೀನ ಗುರುಗಳೇ **ಅಂಕ, ದ್ರಾವಿಡ, ಗುಹದೇವ, ಕಪರ್ದಿ, ಭಾರತಿ, ಬೋಧಾಯನ** ಮುಂತಾದವರು. ಈ ಗುರುಗಳ ಉಪದೇಶದಿಂದಲೂ ಹಾಗೂ ಯಮುನಾಚಾರ್ಯರ ಹಾಗೂ ಆಳ್ವಾರರ ಪ್ರಬಂಧಗಳಿಂದಲೂ ಇವರು ಸ್ಫೂರ್ತಿ ಪಡೆದರು. ಅಷ್ಟೇ ಅಲ್ಲದೇ ರಾಮಾನುಜಾಚಾರ್ಯರು ಆಳ್ವಾರರ ಉಪದೇಶಗಳನ್ನು ಸಮನ್ವಯಗೊಳಿಸಿದರು. ಆದುದರಿಂದ ಇವರಿಗೆ **ಉಭಯ ವೇದಾಂತ ಪ್ರವರ್ತಕ** ಎಂಬ ಬಿರುದೂ ಇದೆ.

ರಾಮಾನುಜಾಚಾರ್ಯರ ನಂತರ ಇವರಲ್ಲಿ ಎರಡು ಶಾಖೆಗಳಾಗಿ ಒಡೆಯಿತು. ಇವೇ **ತೆಂಕಲೈ** ಮತ್ತು **ವಡಗಲೈ** ಎಂಬ ಪಂಥಗಳು ತೆಂಕಲೈ ಪಂಥದ ಪ್ರಧಾನ ಆಚಾರ್ಯರು, ಹದಿಮೂರನೆಯ ಶತಮಾನದಲ್ಲಿದ್ದ **ಶ್ರೀ ಪಿಳ್ಳೈ ಲೋಕಾಚಾರ್ಯರು** ಮತ್ತು ವಡಗಲೈ ಪಂಥದ ಮುಖ್ಯ ಆಚಾರ್ಯರೇ **ವೆಂಕಟನಾಥರು** ಅಥವಾ **ವೇದಾಂತದೇಶಿಕರು.**

ರಾಮಾನುಜಾಚಾರ್ಯರು 1137ರಲ್ಲಿ ದೇಹತ್ಯಾಗ ಮಾಡಿದರು. ರಾಮಾನುಜಾಚಾರ್ಯರ ಪರಂಪರೆ ಇಂದಿಗೂ ಮುಂದುವರಿಯುತ್ತಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ರಾಮಾನುಜಾಚಾರ್ಯರು ತೋರಿಸಿದ ಮಾರ್ಗದರ್ಶನದಂತೆಯೇ ಎಲ್ಲ ದೇವಾಲಯಗಳು ಇಂದಿಗೂ ನಡೆಯುತ್ತಿವೆ.

ರಾಮಾನುಜಾಚಾರ್ಯರು ತೋರಿಸಿದ ಮಾರ್ಗದಲ್ಲಿ ನಡೆದವರೇ ನಮ್ಮಾಳ್ವಾರ್ ಅವರು. ಇವರು ರಚಿಸಿದ ಪ್ರಬಂಧಗಳ ಮಹತ್ವದಿಂದ ಆಳ್ವಾರರುಗಳ ಪದವಿಗೆ ಏರಿದರು. ಇವರು ಜೀವಿಸಿದ್ದ ಕಾಲದ ಬಗ್ಗೆ ಯಾರಿಗೂ ಸರಿಯಾದ ಮಾಹಿತಿಯಿಲ್ಲ. ಇವರು ಕ್ರಿ.ಶ. 6ನೇ ಶತಮಾನದಲ್ಲಿ ಜೀವಿಸಿದ್ದರೆಂದು ಕೆಲವರು ಭಾವಿಸಿದ್ದಾರೆ. ಇವರು ತಿನ್ನವೆಲ್ಲಿ ಜಿಲ್ಲೆಯ **ತಿರುಕ್ಕುರುಹೂರ್** ಎಂಬ ಗ್ರಾಮದಲ್ಲಿ ವಿಶ್ವಕ್ಸೇನರ ಅಂಶವಾಗಿ ಅವತರಿಸಿದರೆಂದು **ಗುರುಪರಂಪರಾ** ಎಂಬ ಗ್ರಂಥದಿಂದ ತಿಳಿದು ಬರುತ್ತದೆ. ಇವರ ತಂದೆಯ ಹೆಸರು **ಕಾರಿಯಾರ್,** ಇವರ ತಾಯಿಯ ಹೆಸರು **ಉಡ್ಡೆಯ ನಂಗೈಯಾರ್.** ಇವರ ತಂದೆ ತಾಯಿಗಳು ಹರಕೆ ಹೊತ್ತು ಪಡೆದ ಮಗುವಿಗೆ **ಮಾರ** ಎಂಬ ಹೆಸರಿಟ್ಟರು. ಇವರಿಗೆ **ಶಠಾರಿ, ಶಡಗೋಪ** ಎಂಬ ಹೆಸರೂ ಇದ್ದಿತು. ಈ ಮಗು ಹುಟ್ಟಿದಾಗಿನಿಂದ ಅಳಲೂ ಇಲ್ಲ, ಊಟವನ್ನೂ ಮಾಡಲಿಲ್ಲ. ಇಂತಹಾ ಮಗುವನ್ನು ಏನು ಮಾಡಬೇಕೆಂದು ತೋಚದೆ ಇವರ ತಂದೆಯವರು, ಅವರೂರಿನಲ್ಲಿದ್ದ ಹೊಳೆಯ ದಂಡೆಯಲ್ಲಿದ್ದ ಒಂದು ಗುಹೆಯಲ್ಲಿ ಮಲಗಿಸಿ ಬಂದರು. ಈ ಮಗು ಯಾರ ಸಹಾಯವೂ ಇಲ್ಲದೇ ಚೆನ್ನಾಗಿ ಬೆಳೆಯಿತು. ಪವಾಡವೋ ಎಂಬಂತೆ ಈ ಮಗು ನಡೆದುಕೊಂಡು ಹೋಗಿ ಒಂದು ಹುಣಸೆ ಮರದಲ್ಲಿ ನೆಲೆಸಿತು. ಹೀಗೆ ಸ್ವಾನುಭವದ ಆನಂದದಲ್ಲಿ 16 ವರ್ಷದವರೆಗೆ ಮೌನವಾಗಿದ್ದ ಈ ಮಗುವನ್ನು ಮಧುರ ಕವಿ ಎಂಬ ಬ್ರಾಹ್ಮಣನು ಮಾತನಾಡಿಸಿದನು. ನಮ್ಮಾಳ್ವಾರರನ್ನು ಕಂಡು ಮಧುರ ಕವಿಗಳು ತಾವು ಅರಸುತ್ತಿದ್ದ ಗುರುವನ್ನು **ಶಡಗೋಪರಲ್ಲಿ** ಕಂಡುಕೊಂಡರು. **ಮಧುರ ಕವಿಗಳು** ಶಡಗೋಪರ ಸೇವೆಗೆ ನಿಂತರು.

ನಮ್ಮಾಳ್ವಾರ್ ಅವರಿಂದ ಲಭ್ಯವಾಗಿರುವ ರಚನೆಗಳು ನಾಲ್ಕು. ಅವು ಯಾವುವೆಂದರೆ **ತಿರುವಿತ್ತಂ (ನೂರು ಬಿಡಿ ಪದ್ಯಗಳು), ತಿರುವಾಶಿರಿಯಂ**(ಏಳು ಬಿಡಿಪದ್ಯಗಳು) ಹಾಗೂ **ಪೆರಿಯತಿರುವಂದಾದಿ(87 ಬಿಡಿಪದ್ಯಗಳು), ತಿರುವಾಯ್ ಮೊಳಿ(1102 ಪದ್ಯಗಳು),** ಹೀಗೆ ನಮ್ಮಾಳ್ವಾರ್ ಬರೆದ ಪದ್ಯಗಳ ಸಂಖ್ಯೆ 1296(ಬಿಡಿ ಪದ್ಯಗಳು), **ತಿರುವಾಯ್ ಮೊಳಿ** ಇವುಗಳಿಗೆ ಐದು ದೊಡ್ಡ ವ್ಯಾಖ್ಯಾನಗಳಿವೆ. ಶ್ರೀವೈಷ್ಣವರ ವಿಚಾರಗಳನ್ನು ತಿಳಿದುಕೊಳ್ಳಲು ಬಯಸು ವವರಿಗೆ ಈ ವ್ಯಾಖ್ಯಾನಗಳು ತುಂಬಾ ಸ್ವಾರಸ್ಯವಾಗಿವೆ ಮೊದಲನೆಯ ವ್ಯಾಖ್ಯಾನಕ್ಕೆ **ಆರಾಯಿಪ್ಪಡಿ** ಎಂದು ಹೆಸರು. ಇದನ್ನು ರಾಮಾನುಜಾಚಾರ್ಯರ ಶ್ರೇಷ್ಠ ಶಿಷ್ಯರಾದ **ತಿರುಕ್ಕುರು ಕೈಪ್ಪಿರಾನ್** ಎಂಬುವರಿಂದ ಬರೆಸಿದರು. ವೇದಾಂತ ದೇಶಿಕರ್ ಎಂಬ ಶ್ರೇಷ್ಠ ಆಚಾರ್ಯರು **ದ್ರಾವಿಡೋಪನಿಷತ್, ತಾತ್ಪರ್ಯ ರತ್ನಾವಳಿ** ಎಂಬ ಸಂಸ್ಕೃತ ಪದ್ಯಗಳಲ್ಲಿ ರಾಮಾನುಜಾಚಾರ್ಯರ ಉಪದೇಶಗಳನ್ನು ಅಳವಡಿಸಿದರು. ಇತ್ತೀಚಿನವರಾದ ನರಸಿಂಹಾಚಾರ್ಯರು (ಶ್ರೀಕಲ್ಕಿ) ಎಂಬ ಸ್ವಾಮಿಗಳು ಈ ಪ್ರಬಂಧಕ್ಕೆ ಕನ್ನಡದಲ್ಲಿ ಅರ್ಥವನ್ನೂ, ತಾತ್ಪರ್ಯವನ್ನೂ ಬರೆದು, ಇವುಗಳನ್ನು ಸಂಸ್ಕೃತ ಭಾಷೆಗೆ ಅನುವಾದಿಸಿದ್ದಾರೆ. ಜೀವಾತ್ಮನಿಗೆ **ಅಚಿತ್** ಸಂಪರ್ಕದಿಂದ **ಸುಖ ಭ್ರಾಂತಿ** ಮತ್ತು **ಭಗವದ್ ವಿಶ್ಲೇಷಣಾ** ಎಂಬುದನ್ನು ಶ್ರೀಕಲ್ಕಿ ಸ್ವಾಮಿಗಳು ಬರೆದಿದ್ದಾರೆ. ದಾರ್ಶನಿಕರಿಗೆ ಈ ಗ್ರಂಥಗಳಲ್ಲಿ ಒಳ್ಳೆಯ **ದರ್ಶನ** ದೊರೆಯುತ್ತದೆ. ಭಕ್ತರಿಗೆ ತಮ್ಮ ನಿಷ್ಠೆಯು ಹೇಗಿರಬೇಕು ಎಂಬುದು ಸ್ಪಷ್ಟವಾಗುತ್ತದೆ.

ನಮ್ಮಾಳ್ವಾರರು ಕೇವಲ 31 ವರ್ಷಗಳು ಬದುಕಿದ್ದರೆಂದೂ, ಇದ್ದ ಸ್ಥಳವನ್ನು ಬಿಟ್ಟು ಕದಲಲಿಲ್ಲವೆಂದೂ ಸಂಪ್ರದಾಯಗಳು ತಿಳಿಸುತ್ತವೆ. ಇವರು ಬರೆದ ಗೀತೆಗಳಲ್ಲಿ ದಿವ್ಯ ಸ್ಥಳಗಳ ಪೂಜಾರ್ಹ ಮೂರ್ತಿಗಳು ಹಾಗೂ ಸ್ತೋತ್ರಗಳಿರುವುದರಿಂದ, ನಮ್ಮಾಳ್ವಾರ್ ಅವರು ಚೋಳ, ಪಾಂಡ್ಯ, ಕೇರಳ ದೇಶಗಳಲ್ಲಿ ಯಾತ್ರೆಯನ್ನು ನಡೆಸಿದರೆಂದು ವಿದ್ವಾಂಸರು ಊಹಿಸಿದ್ದಾರೆ.

ಈಗ ಮಧುರಕವಿ ಆಳ್ವಾರ್ ಅವರ ಕೊಡುಗೆಗಳನ್ನು ಗಮನಿಸಬಹುದು. ಇವರು ನಮ್ಮಾಳ್ವಾರ್ ಅವರ ಸಮಕಾಲೀನರು, ನಮ್ಮಾಳ್ವಾರ್ ಅವರಿಗಿಂತ ವಯಸ್ಸಿನಲ್ಲಿ 10 ವರ್ಷ ಹಿರಿಯರು. ಮಧುರಕವಿ ಆಳ್ವಾರ್ ಅವರು ಪಾಂಡ್ಯ ದೇಶದ **ತಿರುಕೊಳೂರಿನಲ್ಲಿ** ಸಾಮವೇದ ಶಾಖೆಯ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಇವರು **ವೇದ–ವೇದಾಂಗಗಳಲ್ಲಿ** ಪಂಡಿತರಾಗಿದ್ದರು. ಇವರು ಬಹುಕಾಲ ಸತ್ಸಂಗದಲ್ಲಿ ನಿರತರಾಗಿದ್ದು, ಅನೇಕ ತೀರ್ಥಕ್ಷೇತ್ರಗಳಿಗೆ ಯಾತ್ರೆಯನ್ನು ಮಾಡಿದರು. ಆದರೆ ಯಾತ್ರೆಗಳಿಂದ ಮಧುರಕವಿ ಆಳ್ವಾರ್ ಅವರಿಗೆ ನೆಮ್ಮದಿ ಸಿಕ್ಕಲಿಲ್ಲ. ಇವರು ಒಂದು ಸಾರಿ ಆಯೋಧ್ಯೆಯಲ್ಲಿದ್ದಾಗ, ಆಕಾಶದಲ್ಲಿ ಒಂದು ಜ್ಯೋತಿಯು ಇವರಿಗೆ ಕಾಣಿಸಿತು. ಹಿಂದೆಂದೂ ಕಾಣದಿದ್ದ ಬೆಳಕನ್ನು ಇವರು ಮೂರು ದಿನ ಕಂಡರು. ಈ ಜ್ಯೋತಿಯನ್ನು ಹುಡುಕುತ್ತಾ ಹೋಗುತ್ತಿದ್ದಾಗ, ಇವರು **ತಿರುಕುಹೂರ್** ಎಂಬ ಹಳ್ಳಿಗೆ ಬಂದರು. ಇಲ್ಲಿನ ಆಶ್ಚರ್ಯವೇನೆಂಬುದನ್ನು ಇವರು ಕೇಳಿದಾಗ ಹುಣಸೇ ಮರದ ಡೊಗರಿನಲ್ಲಿದ್ದ **ಮಾರನ್** ಎಂಬುವರನ್ನು ತೋರಿಸಿದರು. ಈ ಬಾಲಯೋಗಿಯ ತೇಜಸ್ಸಿಗೆ ಮರುಳಾಗಿ ಮಧುರಕವಿಗಳು ಉಪಾಯದಿಂದ ಆತ ಎದ್ದುಬರುವಂತೆ ಮಾಡಿದರು. ಇವರೇ ತಮಗೆ ತಕ್ಕ ಗುರುವೆಂದು ಭಾವಿಸಿ ಅವರನ್ನು ಆಶ್ರಯಿಸಿ ಅವರ ಸೇವೆಗೆ ನಿಂತರು. ನಮಗೆ ಮಧುರ ಕವಿಗಳಿಂದ ಲಭ್ಯವಾಗಿರುವುದು 11 ಬಿಡಿ ಪದ್ಯಗಳು. ಇವುಗಳಲ್ಲಿ ಮುಖ್ಯವಾಗಿರುವುದು **ಆಚಾರ್ಯ ಸ್ತೋತ್ರ.**

ಈಗ ಕುಲಶೇಖರ ಆಳ್ವಾರ್ ಅವರ ವಿಚಾರಗಳನ್ನು ಪರಿಶೀಲಿಸಬಹುದು. ನಮ್ಮಾಳ್ವಾರ್ ನಂತರ ಹುಟ್ಟಿದವರೇ ಕುಲಶೇಖರ ಆಳ್ವಾರ್ ಅವರು. ಇವರು ಕೇರಳ ದೇಶದ **ಕೊಳ** ಎಂಬ ಪಟ್ಟಣದ ದೊರೆಯಾದ ದೃಢವ್ರತನೆಂಬ ರಾಜನ ಮಗ. ಇವರು ಶ್ರೀಮನ್ಮಹಾವಿಷ್ಣುವಿನ ಅಂಶವಾಗಿ ಜನಿಸಿದರೆಂದು ಅನೇಕ ಗ್ರಂಥಗಳು ತಿಳಿಸಿವೆ. ಇವರು ರಾಜರಾಗಿ ಹುಟ್ಟಿದ್ದರೂ, ಇಹಲೋಕದ ಸುಖದಲ್ಲಿ ಇವರಿಗೆ ಯಾವ ಆಸಕ್ತಿಯೂ ಇರಲಿಲ್ಲ. ಆದರೆ ಇವರಿಗೆ ದೇವರನ್ನು ನೋಡಬೇಕೆಂಬ ಆಸೆ ಇದ್ದಿತು. ಎಲ್ಲರೂ ಆಸೆ ಪಡುವ ಭೂಮಿ ಹಾಗೂ ಹಣದಲ್ಲಿ ನನಗೆ ಆಸೆಯಿಲ್ಲ. ಇದಕ್ಕಿಂತಲೂ ತಿರುವೇಂಗಡ ಬೆಟ್ಟದಲ್ಲಿ ಹರಿದಾಡುವ ಹೊಳೆಯಾಗಿರುವುದೇ ಲೇಸು ಎಂದು ಕುಲಶೇಖರ ಆಳ್ವಾರ್ ಹೇಳುತ್ತಿದ್ದರು. ಇವರಿಗೆ **ರಾಮಾಯಣ** ಹಾಗೂ **ಮಹಾಭಾರತ** ಕಥೆಗಳನ್ನು ಓದುವುದಲ್ಲಿ ಹೆಚ್ಚಿನ ಆಸಕ್ತಿ ಇದ್ದಿತು. ಕುಲಶೇಖರ ಆಳ್ವಾರ್ ಅವರು **ತಿರುಮೊಳಿ** ಎಂಬ 105 ಬಿಡಿ ಪದ್ಯಗಳುಳ್ಳ ಪ್ರಬಂಧವನ್ನು ರಚಿಸಿದ್ದಾರೆ. ಇವರು ಇದರಲ್ಲಿ ಹೇಳಿರುವುದು ಗಮನಾರ್ಹ ಸಂಗತಿ ಎಂದರೆ **ಒಡೆಯನೇ ಎಷ್ಟು ಕಷ್ಟಗಳನ್ನಾದರೂ ಕೊಡು;** ಅವುಗಳನ್ನು **ನೀನೇ ಹೋಗಲಾಡಿಸಬೇಕು** ಎಂದು ಹೇಳುತ್ತಿದ್ದರು. ಈ ತರಹದ ಮಾತುಗಳು ಇವರು ಬರೆದ ಕವಿತಗಳಲ್ಲಿ ಸಾಕಷ್ಟಿವೆ.

ಈಗ ಪರಿಯಾಳ್ವಾರ್ ಅವರ ಉಪದೇಶಗಳನ್ನು ಅಧ್ಯಯನ ಮಾಡಬಹುದು. ಇವರ ತಂದೆಯವರ ಹೆಸರು ಶ್ರೀವಿಲ್ಲಿ ಪುತ್ತೂರಿನ ಮುಕುಂದಾಚಾರ್ಯರು. ಇವರು ಶ್ರೇಷ್ಠ ಬ್ರಾಹ್ಮಣರು. ಇವರ ತಾಯಿಯವರ ಹೆಸರು ಪುರುಮೈಯಾರ್. ಇವರಿಗೆ ತಂದೆ–ತಾಯಿಯು ಇಟ್ಟ ಹೆಸರು ಚಿತ್ತ. ಇವರು ಗುರುಗಳಿಂದ ವಿದ್ಯೆಯನ್ನು ಕಲಿತವರೆಂದು ತೋರುವುದಿಲ್ಲ. ಆದರೆ ಭಗವದ್ ಕೃಪೆಯಿಂದ ಪಾಂಡ್ಯ ರಾಜ ವೆಂಕಟೇಶ ರಾಜನು ಏರ್ಪಡಿಸಿದ್ದ ವಿದ್ವತ್ಸಭೆಯಲ್ಲಿ ಬಹುಮಾನಗಳನ್ನು ಗೆದ್ದು, ಇವರು ಪೂಜೆಗೊಂಡರು. ವೆಂಕಟೇಶ ರಾಜನು ಇವರನ್ನು ಆನೆಯ ಅಂಬಾರಿಯಲ್ಲಿ ಕೂರಿಸಿ ಮೆರವಣಿಗೆಯಲ್ಲಿ ಕರೆತರುತ್ತಿದ್ದಾಗ, ನಡು ದಾರಿಯಲ್ಲಿ ಗರುಡ ವಾಹನನಾದ ಶ್ರೀ ಮನ್ಮಹಾವಿಷ್ಣುವು ಪ್ರತ್ಯಕ್ಷನಾದನು. ಮಹಾ ವಿಷ್ಣುವಿನ ಅಂದವು ಎಂದಿಗೂ ಹಾಳಾಗದಿರಲಿ ಎಂದು ಒಂದು ಶ್ಲೋಕವನ್ನು ಆಳ್ವಾರರು ಸುಶ್ರಾವ್ಯವಾಗಿ ಹಾಡಿದರು. ಇದೇ ಶ್ರೀವೈಷ್ಣವರು ಪೂಜೆಯ ಸಮಯದಲ್ಲಿ ಹಾಡುವ ಪ್ರಸಿದ್ಧವಾದ **ಪಲ್ಲಾಂಡು** ಎಂಬ 12 ಪದ್ಯಗಳು. ಆಳ್ವಾರರು ತಮಗೆ ಭಕ್ತಿಯಿಂದ ನೀಡಿದ ಹಣವನ್ನು ತೆಗೆದುಕೊಳ್ಳದೇ, ಅದೇ ಊರಿನ ದೇವರಿಗೆ ಅರ್ಪಿಸಿದರು.

ಹೀಗಿರುವಾಗ ಇವರ ತೋಟದ ತುಳಸೀವನದಲ್ಲಿ ಒಬ್ಬಳು ಮಗಳು ಇವರಿಗೆ ದೊರೆತಳು. ಈಕೆಯೇ **ಗೋದಾದೇವಿ.** ಆಳ್ವಾರರು ಗೋದಾದೇವಿಯನ್ನು ತುಂಬಾ ಮಮತೆಯಿಂದ ಸಾಕಿದರು ಹಾಗೂ ಆಕೆಯನ್ನು ಸುಸಂಸ್ಕೃತಳನ್ನಾಗಿ ಮಾಡಿದರು.

ಇವರು ಎರಡು ಕೃತಿಗಳನ್ನು ರಚಿಸಿದರು. ಇವುಗಳಲ್ಲಿ ಮೊದಲನೆಯದೇ **ತಿರುಪಲ್ಲಾಂಡು** ಇದರಲ್ಲಿ 12 ಬಿಡಿ ಪದ್ಯಗಳಿವೆ. ಎರಡನೆಯದಾದ **ಪೆರಿಯತಿರುಮೊಳಿ** ಎಂಬ ಪದ್ಯ ಮಾಲಿಕೆಯಲಿ 461 ಬಿಡಿ ಪದ್ಯಗಳಿವೆ. ಈ ಪದ್ಯಗಳು **ಶ್ರೀಕೃಷ್ಣನ ಲೀಲೆಯನ್ನು** ಸುಂದರವಾಗಿ ಎಲ್ಲರಿಗೂ ಮನ ಮುಟ್ಟುವಂತೆ ವರ್ಣಿಸಿವೆ. ಪೆರಿಯ ಆಳ್ವಾರ್ ಅವರಿಗೂ ಶ್ರೀ ಕೃಷ್ಣನಿಗೂ ಈ ಪ್ರಬಂಧದಲ್ಲಿ ತಂದೆ ಹಾಗೂ ಮಗನ ಸಂಬಂಧವನ್ನು ಕಾಣಬಹುದು. ಈ ಸಂದರ್ಭದಲ್ಲಿ ವಾತ್ಸಲ್ಯ ಭಾವ ವಿಶೇಷವಾಗಿ ಕಾಣಬರುತ್ತದೆ. ಪೆರಿಯಾಳ್ವಾರ್ ರಚಿಸಿದ ಕವಿತೆಗಳಲ್ಲಿ ಕಂಡುಬರುವ **ಲಾಲಿತ್ಯ** ಹಾಗೂ **ವರ್ಣನೆಗಳು** ತುಂಬಾ ಮನೋಹರವಾಗಿವೆ ಈ ರೀತಿ ಕವಿಗಳು ಕಾಣದ್ದನು ಪೆರಿಯಾಳ್ವಾರ್ ಕಂಡರು ಎಂಬುದಕ್ಕೆ ಅವರೇ ರಚಿಸಿದ ಕವಿತೆಗಳೇ ಸಾಕ್ಷಿ. ಈ ರೀತಿ ರಾಮಾನುಜಾಚಾರ್ಯರು ಹಾಗೂ ಆಳ್ವಾರರುಗಳು ಪ್ರಬಂಧಗಳಿಂದ ತಿಳುವಳಿಕೆ ಮತ್ತು ಜ್ಞಾನವನ್ನು ದರ್ಶನ ಮಾಡಿಸಿದ್ದಾರೆ. ಇದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

ನ್ಯೂಯಾರ್ಕ್: ಸುರಂಗ ನಿಲ್ದಾಣದಲ್ಲಿ ಶೂಟೌಟ್; ಕನಿಷ್ಠ ಐವರಿಗೆ ಗುಂಡೇಟು, ಹಲವರಿಗೆ ಗಾಯ

ನ್ಯೂಯಾರ್ಕ್, ಏ. 11– ಅಮೆರಿಕದ ನ್ಯೂಯಾರ್ಕ್‌ನ ಬ್ರೂಕ್ಲಿನ್‌ನಲ್ಲಿರುವ ಸುರಂಗ ನಿಲ್ದಾಣದಲ್ಲಿ ಮಂಗಳವಾರ ಸಂಭವಿಸಿದ ಶೂಟೌಟ್‌ನಲ್ಲಿ ಕನಿಷ್ಠ ಐವರಿಗೆ ಗುಂಡೇಟು ತಗುಲಿದ್ದು, ಹಲವರಿಗೆ ಗಾಯಗಳಾಗಿವೆ ಎಂದು ತಿಳಿದುಬಂದಿದೆ.

ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿರುವಂತೆ ನ್ಯೂಯಾರ್ಕ್‌ನ ಬ್ರೂಕ್ಲಿನ್‌ನಲ್ಲಿರುವ ಸನ್‌ಸೆಟ್ ಪಾರ್ಕ್‌ನ 36 ನೇ ಸ್ಟ್ರೀಟ್ ನ ಸುರಂಗ ನಿಲ್ದಾಣದಲ್ಲಿ ಅನೇಕ ಜನರು ಗುಂಡು ಹಾರಿಸಿದ್ದು, ಪ್ರಾಥಮಿಕ ವರದಿಗಳ ಪ್ರಕಾರ ಈ ಶೂಟೌಟ್‌ನಲ್ಲಿ ಕನಿಷ್ಠ ಐವರಿಗೆ ಗುಂಡೇಟು ತಗುಲಿದೆ ಎಂದು ನ್ಯೂಯಾರ್ಕ್ ಅಗ್ನಿಶಾಮಕ ಇಲಾಖೆ ಮಾಹಿತಿ ನೀಡಿದೆ.

ಮಂಗಳವಾರ ಬೆಳಿಗ್ಗೆ ನಿಲ್ದಾಣದಲ್ಲಿ ಅತೀ ಹೆಚ್ಚು ಪ್ರಯಾಣಿಕರಿದ್ದ ಸಂದರ್ಭದಲ್ಲಿ ಮಾಸ್ಕ್ ಧರಿಸಿದ್ದ ವ್ಯಕ್ತಿ ಏಕಾಏಕಿ ಗುಂಡಿನ ದಾಳಿ ಆರಂಭಿಸಿದ್ದಾನೆ. ಈ ವೇಳೆ ಪ್ರಯಾಣಿಕರಿಗೆ ಗುಂಡೇಟು ತಗುಲಿದೆ ಎನ್ನಲಾಗಿದೆ. ಮತ್ತೊಂದು ಮೂಲದ ಪ್ರಕಾರ ಈ ಶೂಟೌಟ್ ನಲ್ಲಿ ಕನಿಷ್ಟ 13 ಮಂದಿಗೆ ಗಾಯಗಳಾಗಿವೆ ಎನ್ನಲಾಗಿದೆ.

ವಿಚಾರ ತಿಳಿಯುತ್ತಲೇ ಸ್ಥಳಕ್ಕೆ ದೌಡಾಯಿಸಿದ ನ್ಯೂಯಾರ್ಕ್ ಪೊಲೀಸರು ನಿಲ್ದಾಣವನ್ನು ವಶಕ್ಕೆ ಪಡೆದಿದ್ದು, ನಿಲ್ದಾಣದಲ್ಲಿದ್ದ ಪ್ರಯಾಣಿಕರನ್ನು ಸುರಕ್ಷಿತವಾಗಿ ಹೊರಗೆ ತರುವ ಕಾರ್ಯಾಚರಣೆ ನಡೆಸಿದ್ದಾರೆ. ಅಲ್ಲದೆ ಘಟನೆ ನಡೆದ ಸನ್‌ಸೆಟ್ ಪಾರ್ಕ್‌ನ 36ನೇ ಸ್ಟ್ರೀಟ್‌ನ ಸುರಂಗಮಾರ್ಗ ನಿಲ್ದಾಣದ ಲೈನ್ ನಲ್ಲಿ ತೀವ್ರ ಶೋಧ ಕಾರ್ಯಾಚರಣೆ ನಡೆಸಿದ್ದಾರೆ.

ಸ್ಫೋಟಗೊಳ್ಳದ ಸ್ಫೋಟಕ ಡಿವೈಸ್‌ಗಳು ಪತ್ತೆ: ಇನ್ನು ಈ ಕಾರ್ಯಾಚರಣೆ ವೇಳೆ ಸುರಂಗ ಮಾರ್ಗದಲ್ಲಿ ಸ್ಫೋಟಗೊಳ್ಳದ ಸ್ಫೋಟಕ ಡಿವೈಸ್‌ಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಲ್ಲದೆ ಮುಂಜಾಗ್ರತಾ ಕ್ರಮವಾಗಿ ಈ ಮಾರ್ಗದಲ್ಲಿ ಬರುವ ಇತರೆ ನಿಲ್ದಾಣಗಳನ್ನು ಮತ್ತು ಈ ಮಾರ್ಗದಲ್ಲಿ ಸೇರುವ ಪ್ರದೇಶಗಳಲ್ಲಿನ ಸಂಚಾರವನ್ನು ಸ್ಥಗಿತಗೊಳಿಸಲಾಗಿದ್ದು, ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ. ಡಿ,ಎನ್ ಮತ್ತು ಆರ್ ಲೈನ್‌ಗಳಲ್ಲಿ ರೈಲುಗಳು ವಿಳಂಬವಾಗುತ್ತವೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ಮಾಹಿತಿ ಪಡೆದ ಅಧ್ಯಕ್ಷ ಬೈಡನ್: ಇನ್ನು ಘಟನೆ ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದು, ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ವೈಟ್ ಹೌಸ್ ಹಿರಿಯ ವಕ್ತಾರರು ಮಾಹಿತಿ ನೀಡಿದ್ದಾರೆ.

ಡಬ್ಲ್ಯುಟಿಒ ಅನುಮತಿ ನೀಡಿದರೆ ಜಗತ್ತಿಗೆ ಆಹಾರ ದಾಸ್ತಾನು ಪೂರೈಸಲು ಭಾರತ ಸಿದ್ಧ: ಪ್ರಧಾನಿ ಮೋದಿ

ಅಹಮದಾಬಾದ್: ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಅವರೊಂದಿಗೆ ನಡೆದ ಮಾತುಕತೆ ವೇಳೆ, ವಿಶ್ವ ವಾಣಿಜ್ಯ ಸಂಸ್ಥೆ(ಡಬ್ಲ್ಯುಟಿಒ) ಅನುಮತಿ ನೀಡಿದರೆ ಜಗತ್ತಿಗೆ ಭಾರತ ಆಹಾರ ದಾಸ್ತಾನು ಪೂರೈಸಲಿದೆ ಎಂದು ಹೇಳಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ತಿಳಿಸಿದ್ದಾರೆ.

ಇಂದು ಗುಜರಾತ್‌ನ ಅದಲಾಜ್‌ನಲ್ಲಿ ಶ್ರೀ ಅನ್ನಪೂರ್ಣ ಧಾಮ್ ಟ್ರಸ್ಟ್‌ನ ಹಾಸ್ಟೆಲ್ ಮತ್ತು ಶಿಕ್ಷಣ ಸಂಕೀರ್ಣವನ್ನು ವೀಡಿಯೊ ಕಾನರೆನ್ಸ್ ಮೂಲಕ ಉದ್ಘಾಟಿಸಿ ಮಾತನಾಡಿದ ಮೋದಿ, ರಷ್ಯಾ–ಉಕ್ರೇನ್ ಯುದ್ಧದಿಂದಾಗಿ ವಿಶ್ವದ ವಿವಿಧ ಭಾಗಗಳಲ್ಲಿ ಆಹಾರ ದಾಸ್ತಾನು ಕ್ಷೀಣಿಸುತ್ತಿದೆ, ಜಗತ್ತು ಅನಿಶ್ಚಿತ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಜನ ಬಯಸಿದ್ದನ್ನು ಪಡೆಯಲಾಗುತ್ತಿಲ್ಲ ಎಂದರು. ಕೋವಿಡ್ ಕಾಣಿಸಿಕೊಂಡ ನಂತರ ಭಾರತ ತನ್ನ ಸುಮಾರು 80 ಕೋಟಿ ಜನರಿಗೆ ಎರಡು ವರ್ಷಗಳಿಂದ ಉಚಿತ ಪಡಿತರವನ್ನು ನೀಡುತ್ತಿದೆ ಎಂದು ತಿಳಿದು ಜಗತ್ತು ಆಶ್ಚರ್ಯಚಕಿತವಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಎಲ್ಲಾ ಬಾಗಿಲುಗಳು ಮುಚ್ಚಿರುವುದರಿಂದ ಪೆಟ್ರೋಲ್, ಡಿಸೇಲ್ ಸೇರಿದಂತೆ ತೈಲ ಹಾಗೂ ರಸಗೊಬ್ಬರಗಳನ್ನು ಖರೀದಿಸುವುದು ಕಷ್ಟಕರವಾಗಿದೆ. ರಷ್ಯಾ–ಉಕ್ರೇನ್ ಯುದ್ಧ ಪ್ರಾರಂಭವಾದ ನಂತರ ಪ್ರತಿಯೊಬ್ಬರೂ ತಮ್ಮ ಷೇರುಗಳನ್ನು ಭದ್ರಪಡಿಸಿಕೊಳ್ಳಲು ಬಯಸುತ್ತಿದ್ದಾರೆ ಎಂದು ಹೇಳಿದ್ದಾರೆ. ಜಗತ್ತು ಈಗ ಹೊಸ ಸಮಸ್ಯೆಯನ್ನು ಎದುರಿಸುತ್ತಿದೆ. ಪ್ರಪಂಚದ ಆಹಾರ ಸಂಗ್ರಹ ಖಾಲಿಯಾಗುತ್ತಿದೆ, ಅಮೆರಿಕಾ ಅಧ್ಯಕ್ಷರೊಂದಿಗೆ ಮಾತನಾಡುವ ವೇಳೆ ಅವರು ಈ ವಿಷಯವನ್ನು ಪ್ರಸ್ತಾಪಿಸಿದರು. ಡಬ್ಲ್ಯುಟಿಒ ಅನುಮತಿ ನೀಡಿದರೆ, ನಾಳೆಯಿಂದಲೇ ವಿಶ್ವಕ್ಕೆ ಆಹಾರ ದಾಸ್ತಾನು ಪೂರೈಸಲು ಭಾರತ ಸಿದ್ಧವಾಗಿದೆ ಎಂದು ನಾನು ಸಲಹೆ ನೀಡಿದ್ದೇನೆ ಎಂದು ಮೋದಿ ಹೇಳಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಾಲ್ಕನೇ ಅಲೆ ತಡೆಗೆ ಒಂದೇ ಉಪಾಯ: ಲಸಿಕೆ ತಪ್ಪದೇ ಪಡೆಯಿರಿ

ಆರೋಗ್ಯ ಸಚಿವ ಡಾ. ಸುಧಾಕರ್ ಮನವಿ

ಬೆಂಗಳೂರು, ಏ.12 (ಕೆಎಂಶಿ)– ಸಂಭಾವ್ಯ ನಾಲ್ಕನೇ ಅಲೆ ತಡೆಗೂ ಲಸಿಕೆ ಒಂದೇ ಉಪಾಯ. ಅದನ್ನು ವಿಳಂಬ ಮಾಡದೇ ಪಡೆಯಿರಿ ಎಂದು ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವ ಡಾ॥ ಕೆ. ಸುಧಾಕರ್ ಮನವಿ ಮಾಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್–ಜುಲೈ ಪ್ರಾರಂಭವಾಗಿ ಸೆಪ್ಟೆಂಬರ್‌ವರೆಗೆ ನಾಲ್ಕನೇ ಅಲೆ ಇರಬಹುದು ಎಂದು ತಜ್ಞರು ತಿಳಿಸಿದ್ದಾರೆ. ಅದನ್ನು ಎದುರಿಸಿ ನಿಯಂತ್ರಿಸಲು ಕರ್ನಾಟಕ ಸಿದ್ಧವಾಗಿದೆ ಎಂದು ಅವರು ತಿಳಿಸಿದರು.

ನಾಲ್ಕನೇ ಅಲೆಗೆ ಆತಂಕ ಪಡುವ ಅಗತ್ಯವಿಲ್ಲ. ವಿಶ್ವದ 8 ದೇಶಗಳಲ್ಲಿ ಹೆಚ್ಚು ಕಾಣಿಸುತ್ತಿದ್ದು, ಅಲ್ಲಿಂದ ಬಂದವರಿಗೆ ತಪಾಸಣೆ ಮಾಡಲಾಗುತ್ತಿದೆ ಎಂದರು.

ಮಾಸ್ಕ್ ಹಾಕುವುದು ಅತ್ಯಗತ್ಯ. ಅದರಲ್ಲಿ ಸಡಿಲಿಕೆ ಇಲ್ಲ ಎಂದ ಅವರು, ನಾಲ್ಕನೇ ಅಲೆಗೆ ಹೆದರಬೇಕಿಲ್ಲ ಎಂದು ಅಮ ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು. 6ರಿಂದ 12 ವರ್ಷದ 5 ಸಾವಿರ ಮಕ್ಕಳಿಗೆ ಲಸಿಕೆ ಕೊಟ್ಟಿಲ್ಲ. ಅವರ ಸ್ಕ್ರೀನಿಂಗ್ ಮಾಡಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಇವತ್ತು ಕೋವಿಶೀಲ್ಡ್ ಕೋವ್ಯಾಕ್ಸಿನ್ ಸೇರಿ ಒಟ್ಟು 10 ಲಸಿಕೆಗಳು ಲಭ್ಯವಿದೆ. 12 ವರ್ಷ ಮೇಲ್ಪಟ್ಟ ಮಕ್ಕಳಿಗೂ ಲಸಿಕೆ ಕೊಡಲಾಗುತ್ತಿದೆ. ಡಿಎನ್‌ಎ ವ್ಯಾಕ್ಸಿನ್ ನಮ್ಮಲ್ಲಿ ಮಾತ್ರ ಲಭ್ಯವಿದೆ. ವಿವಿಧ ಕಂಪೆನಿಗಳ ಲಸಿಕೆಗಳ ಉತ್ಪಾದನೆ ನಡೆದಿದೆ ಎಂದು ತಿಳಿಸಿದರು.



ಅಮೆರಿಕದಲ್ಲಿ ಲಸಿಕೆ ಉತ್ಪಾದನೆ ಆಯಿತು. ಭಾರತ ಅಲ್ಲಿಂದ ಲಸಿಕೆ ಪಡೆಯಬಯಸಿತ್ತು. ಲಸಿಕೆಯಿಂದ ಸಮಸ್ಯೆ ಆದರೆ ನಾವು ಹೊಣೆಗಾರರಲ್ಲ ಎಂದು ಅಮೆರಿಕ ತಿಳಿಸಿತು. ಆದರೆ, ನಮ್ಮ ಸರಕಾರವು ಜನರ ಜೀವದೊಂದಿಗೆ ಚೆಲ್ಲಾಟ ಆಡಲು ಸಿದ್ಧವಿರಲಿಲ್ಲ ಎಂದು ವಿವರಿಸಿದರು.

ಇಲ್ಲಿನವರೆಗೂ 185 ಕೋಟಿ 90 ಲಕ್ಷಕ್ಕೂ ಹೆಚ್ಚು ಲಸಿಕೆಗಳನ್ನು ನೀಡಲಾಗಿದೆ. ಮುಂದುವರಿದ ದೇಶ ಅಮೆರಿಕದಲ್ಲೂ ಲಸಿಕೆ ಪಡೆಯಲು ಜನರು ಹಿಂದೆ ಮುಂದೆ ನೋಡುತ್ತಿದ್ದಾರೆ. ಒಕ್ಕೂಟ ವ್ಯವಸ್ಥೆ ಇರುವ ದೇಶ ಇದಾಗಿದ್ದು, ವಿವಿಧ ರಾಜ್ಯಗಳಲ್ಲಿ ವಿವಿಧಪಕ್ಷಗಳು ಆಡಳಿತ ನಡೆಸುತ್ತಿವೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ ಯಿಂದ ಕೋವಿಡ್ ನಿಯಂತ್ರಣ ಸಾಧ್ಯವಾಗಿದೆ ಎಂದರು.

ಕರ್ನಾಟಕದಲ್ಲಿ 10.54 ಕೋಟಿ ಲಸಿಕೆ ಕೊಡಲಾಗಿದೆ. ಶೇ. 98 ರಷ್ಟು ಎರಡನೇ ಡೋಸ್ ಲಸಿಕೆ ನೀಡಿಕೆ ಸಾಧ್ಯವಾಗಿದೆ ಎಂದ ಅವರು, ಕೋವಿಡ್ ಕುರಿತಂತೆ ಉದಾಸೀನತೆ ಸಲ್ಲದು. 32 ಲಕ್ಷ ಜನರು ಎರಡನೇ ಡೋಸ್ ಪಡೆಯಬೇಕಿದೆ. ಪ್ರಿವೆಂಟಿವ್ ಡೋಸ್ ಕೂಡ ಪಡೆಯಬೇಕು. ವೈರಸ್ ಬೇರೆ ಪ್ರಭೇದದ ಮೂಲಕ ಬರುಹುದು ಎಂದು ಎಚ್ಚರಿಸಿದರು. ಕೋವಿಡ್ ಅನ್ನು ಸಮರ್ಥವಾಗಿ ಸೆಣಸಲು ಲಸಿಕೆ ಒಂದೇ ಉಪಾಯ. ಭಾರತವೊಂದರಲ್ಲೇ ಉಚಿತವಾಗಿ ಲಸಿಕೆ ಸಿಗುತ್ತಿದೆ. ಬೇರೆ ದೇಶಗಳಲ್ಲಿ ಸಾವಿರಾರು ರೂಪಾಯಿ ವೆಚ್ಚ ಮಾಡಿ ಲಸಿಕೆ ಪಡೆಯುತ್ತಿದ್ದಾರೆ ಎಂದು ವಿವರ ನೀಡಿದರು.

ಶ್ರೀಕಾಕುಳಂ: ರೈಲು ಡಿಕ್ಕಿ; ಐವರ ಸಾವು

ಅಮರಾವತಿ: ಆಂಧ್ರಪ್ರದೇಶದಲ್ಲಿ ಭೀಕರ ರೈಲು ಅಪಘಾತ ಸಂಭವಿಸಿದ್ದು, ಕೊನಾರ್ಕ್ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದ ಪರಿಣಾಮ ಐದು ಮಂದಿ ಸಾವನ್ನಪ್ಪಿರುವ ಘಟನೆ ಸಂಜೆ ನಡೆದಿದೆ. ಆಂಧ್ರ ಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಬಟುವಾ ಗ್ರಾಮದ ಬಳಿ ಈ ಘಟನೆ ನಡೆದಿದ್ದು, ಕೊನಾರ್ಕ್ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದು ಐವರು ಪ್ರಯಾಣಿಕರು ಮೃತಪಟ್ಟಿದ್ದಾರೆ. ಮೂಲಗಳ ಪ್ರಕಾರ ಕೊಯಮತ್ತೂರು–ಸಿಲ್ಚಾರ್ ಎಕ್ಸ್‌ಪ್ರೆಸ್ ರೈಲಿನಿಂದ ಸಿಗಡಮ್ ಚಿಪುರುಪಲ್ಲಿ ನಿಲ್ದಾಣಗಳ ನಡುವೆ ಇಳಿದು ಪಕ್ಕದ ಹಳಿಯತ್ತ ಪ್ರಯಾಣಿಕರು ಓಡಲು ಪ್ರಯತ್ನಿಸುತ್ತಿದ್ದಾಗ ಅದೇ ಹಳಿಯಲ್ಲಿ ವೇಗವಾಗಿ ಬಂದ ಭುವನೇಶ್ವರ–ಮುಂಬೈ ಕೊನಾರ್ಕ್ ರೈಲು ಹಳಿಯ ಮೇಲಿದ್ದ ಪ್ರಯಾಣಿಕರ ಮೇಲೆ ಹರಿದಿದೆ. ಪರಿಣಾಮ ಹಳಿಯ ಮೇಲಿದ್ದ 5 ಮಂದಿ ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ವಿಶಾಖಪಟ್ಟಣ–ಪಲಾಸ ಮುಖ್ಯ ಮಾರ್ಗದ ಮಧ್ಯಭಾಗದಲ್ಲಿ ಘಟನೆ ನಡೆದಿದ್ದು, ಗಾಯಗೊಂಡ ಒಬ್ಬ ವ್ಯಕ್ತಿಯನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರು ಮೃತರಿಗೆ ಸಂತಾಪ ಸೂಚಿಸಿದ್ದಾರೆ.

ತಿರುಪತಿ ದರ್ಶನಕ್ಕೆ ಭಕ್ತಾದಿಗಳ ನೂಕುನುಗ್ಗಲು; ಕಾಲ್ತುಳಿಯದಿಂದ ಮೂವರಿಗೆ ಗಾಯ

ಅಮರಾವತಿ: ಆಂಧ್ರಪ್ರದೇಶದ ತಿರುಮಲ ತಿರುಪತಿ ದೇಗುಲದ(ಟಿಟಿಡಿ) ಟಿಕೆಟ್ ಕೌಂಟರ್‌ನಲ್ಲಿ ಮಂಗಳವಾರ ಕಾಲ್ತುಳಿತದಂತಹ ಸ್ಥಿತಿ ನಿರ್ಮಾಣವಾಗಿದ್ದು, ಘಟನೆಯಲ್ಲಿ ಮೂವರು ಭಕ್ತಾದಿಗಳಿಗೆ ಗಾಯಗಳಾಗಿವೆ ಎಂದು ವರದಿಯಾಗಿದೆ. ಮಂಗಳವಾರ 10,000ಕ್ಕೂ ಹೆಚ್ಚು ಯಾತ್ರಾರ್ಥಿಗಳು ವೆಂಕಟೇಶ್ವರನ ದರ್ಶನಕ್ಕೆ ಟಿಕೆಟ್ ಪಡೆಯಲು ಕೌಂಟರ್‌ನಲ್ಲಿ ಜಮಾಯಿಸಿದ್ದರು. ಭಕ್ತರ ಸಂಖ್ಯೆ ಹೆಚ್ಚಾದಿಂದ ಕಾಲ್ತುಳಿತ ಸಂಭವಿಸಿದೆ ಎಂದು ವರದಿಗಳು ತಿಳಿಸಿವೆ. ತಿರುಪತಿಯ 3 ಟೋಕನ್ ಕೌಂಟರ್‌ಗಳಲ್ಲಿ ಭಾರೀ ಜನದಟ್ಟಣೆ ಕಂಡುಬಂದಿದೆ. ಇದನ್ನು ನೋಡಿ ಟಿಟಿಡಿ ಮಂಡಳಿ ಯಾತ್ರಾರ್ಥಿಗಳನ್ನು ನೇರವಾಗಿ ದರ್ಶನ ಪಡೆಯಲು ಕಂಪಾರ್ಟ್‌ಮೆಂಟ್‌ಗೆ ಕಳುಹಿಸಲು ನಿರ್ಧರಿಸಿದೆ. ಸದ್ಯ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಟಿಕೆಟ್ ಕೌಂಟರ್‌ಗಳಲ್ಲಿ ಕಾಲ್ತುಳಿತದ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಟಿಟಿಡಿ ಭಾನುವಾರದವರೆಗೆ ವಿಐಪಿ ದರ್ಶನವನ್ನು ರದ್ದುಗೊಳಿಸಿದೆ.

ಪ್ರಧಾನಿ ಮೋದಿಗೆ ಪ್ರಥಮ ಲತಾ ದೀನನಾಥ್ ಮಂಗೇಶ್ಕರ್ ಪ್ರಶಸ್ತಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಲತಾ ದೀನನಾಥ್ ಮಂಗೇಶ್ವರ್ ಪ್ರಶಸ್ತಿ ಗೌರವ ಪಡೆಯುವ ಪ್ರಥಮ ವ್ಯಕ್ತಿಯಾಗಲಿದ್ದಾರೆ. ಏಪ್ರಿಲ್ 24 ರಂದು ನಡೆಯಲಿರುವ 80ನೇ ವಾರ್ಷಿಕ ಮಾಸ್ಟರ್ ದೀನನಾಥ್ ಮಂಗೇಶ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮೊದಲ ಲತಾ ದೀನನಾಥ್ ಮಂಗೇಶ್ಕರ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.



ಇತ್ತೀಚಿಗೆ ಮುಂಬೈನಲ್ಲಿ ತಮ್ಮ 92ನೇ ವಯಸ್ಸಿನಲ್ಲಿ ನಿಧನರಾದ ಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಅವರ ಸ್ಮರಣಾರ್ಥ ಮತ್ತು ಗೌರವಾರ್ಥವಾಗಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ಮಾಸ್ಟರ್ ದೀನನಾಥ್ ಮಂಗೇಶ್ಕರ್ ಸ್ಮೃತಿ ಪ್ರತಿಷ್ಠಾನ ಚಾರಿಟಬಲ್ ಟ್ರಸ್ಟ್, "ನಮ್ಮ ರಾಷ್ಟ್ರ, ಜನರು, ನಮ್ಮ ಸಮಾಜಕ್ಕೆ ಅದ್ಭುತ ಮತ್ತು ಅನುಕರಣೀಯ ಕೊಡುಗೆಗಳನ್ನು ನೀಡಿದ ಓರ್ವ ವ್ಯಕ್ತಿಗೆ ಈ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುವುದು" ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ರಾಷ್ಟ್ರ ಮತ್ತು ಸಮಾಜಕ್ಕೆ ನಿಸ್ವಾರ್ಥ ಸೇವೆಗಾಗಿ ಪ್ರಧಾನಿ ಮೋದಿ ಮೊದಲಿಗರಾಗಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ ಎಂದು ಮಾಸ್ಟರ್ ದೀನನಾಥ್ ಮಂಗೇಶ್ಕರ್ ಸ್ಮೃತಿ ಪ್ರತಿಷ್ಠಾನ ಚಾರಿಟಬಲ್ ಟ್ರಸ್ಟ್ ತಿಳಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮುಂಬೈನಲ್ಲಿ ನಡೆದ ಲತಾ ಮಂಗೇಶ್ಕರ್ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಖ್ಯಾತ ಗಾಯಕಿಗೆ ಅಂತಿಮ ನಮನ ಸಲ್ಲಿಸಿದ್ದರು. ಏಪ್ರಿಲ್ 24 ರಂದು ಗಾನ ಕೋಗಿಲೆ ಲತಾ ಮಂಗೇಶ್ಕರ್ ಅವರ ತಂದೆ ಮಾಸ್ಟರ್ ದೀನನಾಥ್ ಮಂಗೇಶ್ಕರ್ ಅವರ 80ನೇ ಪುಣ್ಯತಿಥಿ. ಪ್ರಶಸ್ತಿ ಪ್ರದಾನ ಸಮಾರಂಭ ಮುಂಬೈನ ಷಣ್ಮುಖಾನಂದ ಸಭಾಂಗಣದಲ್ಲಿ ನಡೆಯಲಿದೆ.

ರಷ್ಯಾ ಯುದ್ಧದಿಂದ ಉಕ್ರೇನ್ ಆರ್ಥಿಕತೆ ಶೇ.45ರಷ್ಟು ಕುಸಿತ: ವಿಶ್ವಬ್ಯಾಂಕ್ ವರದಿ

ಲಂಡನ್: ರಷ್ಯಾದ ಆಕ್ರಮಣದಿಂದಾಗಿ ಉಕ್ರೇನ್‌ನ ಆರ್ಥಿಕತೆಯು ಈ ವರ್ಷ ಶೇಕಡಾ 45.1 ರಷ್ಟು ಕುಸಿಯಲಿದೆ.ಯುದ್ಧದಿಂದಾಗಿ ದೇಶದ ಅರ್ಧದಷ್ಟು ವ್ಯವಹಾರಗಳನ್ನು ಸ್ಥಗಿತಗೊಳಿಸಿದೆ, ಆಮದು ಮತ್ತು ರಫ್ತುಗಳನ್ನು ಸ್ಥಗಿತಗೊಳಿಸಿದೆ, ಅಪಾರ ಪ್ರಮಾಣದಲ್ಲಿ ಮೂಲಸೌಕರ್ಯಗಳು ಹಾನಿಗೀಡಾಗಿವೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.

ಯುದ್ಧಕ್ಕೆ ಪ್ರತಿಕ್ರಿಯೆಯಾಗಿ ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳು ವಿಧಿಸಿದ ನಿರ್ಬಂಧಗಳು, ರಷ್ಯಾವನ್ನು ಆರ್ಥಿಕ ಹಿಂಜರಿತಕ್ಕೆ ತಳ್ಳುತ್ತಿದೆ. ರಷ್ಯಾ ತನ್ನ ಆರ್ಥಿಕ ಬೆಳವಣಿಗೆಯ ಹತ್ತನೇ ಒಂದು ಭಾಗಕ್ಕಿಂತ ಹೆಚ್ಚಿನದನ್ನು ಕಳೆದುಕೊಳ್ಳುತ್ತಿವೆ ಎಂದು ವಿಶ್ವಬ್ಯಾಂಕ್ ವರದಿ ಹೇಳಿದೆ. ಕೋವಿಡ್ –19 ಸಾಂಕ್ರಾಮಿಕ ರೋಗವು ಯುರೋಪ್ ಮತ್ತು ಮಧ್ಯ ಏಷ್ಯಾದಾದ್ಯಂತ ಉಂಟು ಮಾಡಿದ್ದ ಆರ್ಥಿಕ ಹಾನಿಗಿಂತ ಎರಡು ಪಟ್ಟು ಹೆಚ್ಚು ಹಾನಿ ಈ ಯುದ್ಧದಿಂದಾಗಿದೆ ಎಂದು ವಾಷಿಂಗ್ಟನ್ ಮೂಲದ "ವಾರ್ ಇನ್ ದಿ ರೀಜನ್" ಆರ್ಥಿಕ ವರದಿಯಲ್ಲಿ ತಿಳಿಸಿದೆ.

ಯುದ್ಧದಿಂದ ಉಂಟಾದ ಮಾನವೀಯ ಬಿಕ್ಕಟ್ಟಿನ ಪ್ರಮಾಣವು ದಿಗ್ಭ್ರಮೆಗೊಳಿಸುವಂತಿದೆ ಎಂದು ಯುರೋಪ್ ಮತ್ತು ಮಧ್ಯ ಏಷ್ಯಾ ವಲಯದ ವಿಶ್ವಬ್ಯಾಂಕ್‌ನ ಉಪಾಧ್ಯಕ್ಷ ಅನ್ನಾ ಬ್ಜೆರ್ಡೆ ಹೇಳಿದ್ದಾರೆ. ರಷ್ಯಾದ ಆಕ್ರಮಣವು ಉಕ್ರೇನ್‌ನ ಆರ್ಥಿಕತೆಗೆ ಭಾರೀ ಹೊಡೆತವನ್ನು ನೀಡುತ್ತಿದೆ. ಇದು ಮೂಲಸೌಕರ್ಯಕ್ಕೆ ಅಪಾರ ಹಾನಿಯನ್ನುಂಟು ಮಾಡಿದೆ. ರಸ್ತೆಗಳು, ಸೇತುವೆಗಳು, ಬಂದರುಗಳು ಮತ್ತು ರೈಲು ಹಳಿಗಳಂತಹ ಉತ್ಪಾದಕ ಮೂಲಸೌಕರ್ಯಗಳು ನಾಶವಾಗಿರುವುದರಿಂದ ಉಕ್ರೇನ್‌ನಲ್ಲಿನ ದೊಡ್ಡ ಪ್ರದೇಶಗಳಲ್ಲಿ ಆರ್ಥಿಕ ಚಟುವಟಿಕೆ ಅಸಾಧ್ಯವೆಂದು ವರದಿ ಹೇಳಿದೆ.

ಗೋಧಿಯಂತಹ ಕೃಷಿ ರಫ್ತುಗಳ ಜಾಗತಿಕ ಪೂರೈಕೆದಾರರಾಗಿ ಉಕ್ರೇನ್ ಪ್ರಮುಖ ಪಾತ್ರವನ್ನು ವಹಿಸುತ್ತದೆ, ಆದರೆ ಯುದ್ಧದಿಂದಾಗಿ ಅಲ್ಲಿ ಕೃಷಿ ಚಟುವಟಿಕೆಗಳಿಗೆ ಕೂಡ ಹಿನ್ನಡೆಯಾಗಿದೆ ಎಂದು ವರದಿ ಆತಂಕಕಾರಿ ಮಾಹಿತಿಗಳನ್ನು ಹೊರಹಾಕಿದೆ.

ಯುದ್ಧವು ಕಪ್ಪು ಸಮುದ್ರಕ್ಕೆ ಪ್ರವೇಶವನ್ನು ಕಡಿತಗೊಳಿಸಿದೆ, ಉಕ್ರೇನ್‌ನ ಧಾನ್ಯ ಸಾಗಣೆಯ ಶೇಕಡಾ 90 ರಷ್ಟು ಸೇರಿದಂತೆ, ಉಕ್ರೇನ್‌ನಿಂದ ಪಲಾಯನ ಮಾಡುವ ನಿರಾಶ್ರಿತರ ಸಂಖ್ಯೆಯು ಹಿಂದಿನ ಬಿಕ್ಕಟ್ಟುಗಳನ್ನು ಕುಬ್ಜಗೊಳಿಸುವ ನಿರೀಕ್ಷೆಯಿದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ. ನಾಲ್ಕು ದಶಲಕ್ಷಕ್ಕೂ ಹೆಚ್ಚು ಜನರು ಉಕ್ರೇನ್‌ನಿಂದ ಪಲಾಯನ ಮಾಡಿದ್ದಾರೆ, ಅರ್ಧಕ್ಕಿಂತ ಹೆಚ್ಚು ಜನರು ಪೋಲೆಂಡ್‌ಗೆ ವಲಸೆ ಹೋಗಿದ್ದಾರೆ. ಇತರರು ಮೊಲ್ಡೊವಾ, ರೊಮೇನಿಯಾ ಮತ್ತು ಹಂಗೇರಿಯಂತಹ ದೇಶಗಳಿಗೆ ಹೋಗುತ್ತಿದ್ದಾರೆ.ಹೆಚ್ಚುವರಿ 6.5 ಮಿಲಿಯನ್ ಜನರು ಆಂತರಿಕವಾಗಿ ಸ್ಥಳಾಂತರಗೊಂಡಿದ್ದಾರೆ. ವಲಸೆ ಹೋಗುವ ನಾಗರಿಕರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎಂದು ವಿಶ್ವಬ್ಯಾಂಕ್ ಆತಂಕ ವ್ಯಕ್ತಪಡಿಸಿದೆ.

ರಾಮನವಮಿ ಮೆರವಣಿಗೆಯಲ್ಲಿ ಕಲ್ಲೆಸೆದವರಿಗೆ ತಕ್ಕ ಶಾಸ್ತಿ

ಕಟ್ಟಡಗಳಿಗೆ ಜೆಸಿಬಿ ನುಗ್ಗಿಸಿದ ಅಧಿಕಾರಿಗಳು!

ಖಾರ್ಗೋನೆ(ಮಧ್ಯಪ್ರದೇಶ): ಶ್ರೀರಾಮ ನವಮಿ ಮೆರವಣಿಗೆ ವೇಳೆ ಕಲ್ಲು ತೂರಿ ಹಿಂಸಾಚಾರಕ್ಕೆ ಕಾರಣರಾದವರ ಮೇಲೆ ಮಧ್ಯ ಪ್ರದೇಶ ಸರ್ಕಾರ ಕಠಿಣ ಕ್ರಮಕೈಗೊಂಡಿದೆ.

ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರ ಸೂಚನೆ ಮೇರೆಗೆ ಜಿಲ್ಲಾಡಳಿತ ಮತ್ತು ಪೊಲೀಸರು ರಾಮನವಮಿ ಮೆರವಣಿಗೆ ಮೇಲೆ ದಾಳಿ ನಡೆಸಿದವರ ಅಕ್ರಮ ಕಟ್ಟಡಗಳನ್ನು ನೆಲಸಮಗೊಳಿಸಿದ್ದಾರೆ. ಅಧಿಕಾರಿಗಳು ಸುಮಾರು 45 ಮನೆಗಳು ಮತ್ತು ಅಂಗಡಿಗಳ ಮೇಲೆ ಬುಲ್ಡೋಜರ್ ದಾಳಿ ಮಾಡಿಸಿ ಕಟ್ಟಡಗಳನ್ನು ಧ್ವಂಸ ಮಾಡಿದ್ದಾರೆ. ಸೋಮವಾರ ಸುಮಾರು 16 ಮನೆಗಳು ಮತ್ತು 29 ಅಂಗಡಿಗಳನ್ನು ನೆಲಸಮಗೊಳಿಸಲಾಗಿದೆ.



ಇಂದೋರ್‌ನ ವಿಭಾಗೀಯ ಆಯುಕ್ತ ಪವನ್ ಶರ್ಮಾ, ರಾಮ ನವಮಿ ಮೆರವಣಿಗೆಯಲ್ಲಿ ಕಲ್ಲು ತೂರಾಟ ಮಾಡಿದವರ ಆಸ್ತಿಗಳನ್ನು ನೆಲಸಮ ಮಾಡಲು ಖಾರ್ಗೋನ್ ಆಡಳಿತ ನಿರ್ಧರಿಸಿದೆ. ಪೊಲೀಸರು ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. 84 ಆರೋಪಿಗಳನ್ನು ಬಂಧಿಸಲಾಗಿದೆ. ಖಾರ್ಗೋನ್‌ನಲ್ಲಿ ಕರ್ಫ್ಯೂ ವಿಧಿಸಲಾಗಿದೆ ಎಂದರು. ರಾಮನವಮಿ ಮೆರವಣಿಗೆ ವೇಳೆ ಜನರ ಗುಂಪು ಪರಸ್ಪರ ಕಲ್ಲು ತೂರಾಟ ನಡೆಸಿದ್ದರಿಂದ ಪೊಲೀಸ್ ಸಿಬ್ಬಂದಿ ಸೇರಿದಂತೆ ಹಲವರು ಗಾಯಗೊಂಡ ಘಟನೆ ಭಾನುವಾರ ನಡೆದಿತ್ತು. ಮೆರವಣಿಗೆಯ ಆರಂಭದಲ್ಲಿಯೇ ಕಲ್ಲು ತೂರಾಟ ಪ್ರಾರಂಭವಾಗಿ ಪೊಲೀಸ್ ಇನ್ಸ್‌ಪೆಕ್ಟರ್ ಸೇರಿದಂತೆ ಸುಮಾರು ನಾಲ್ವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದುಷ್ಕರ್ಮಿಗಳ ಗುಂಪು ನಾಲ್ಕು ಮನೆಗಳಿಗೆ ಬೆಂಕಿ ಹಚ್ಚಿದ ನಂತರ, ಆಡಳಿತವು ತಲಾಬ್ ಚೌಕ್, ಗೌಶಾಲಾ ಮಾರ್ಗ್ ಮತ್ತು ಮೋತಿಪುರ ಪ್ರದೇಶಗಳಲ್ಲಿ ಕರ್ಫ್ಯೂ ವಿಧಿಸಿತು. ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಈ ಕೃತ್ಯವನ್ನು ಖಂಡಿಸಿದ್ದು, ಇದು ದುರದೃಷ್ಟಕರ ಎಂದು ಬಣ್ಣಿಸಿದ್ದಾರೆ. ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗಳಿಗೆ ಉಂಟಾದ ಹಾನಿಯನ್ನು ಗಲಭೆಕೋರರಿಂದ ವಸೂಲಿ ಮಾಡಲಾಗುವುದು ಎಂದು ಅವರು ಹೇಳಿದರು.

ವೇಶ್ಯಾಗೃಹದ ದಾಳಿ ವೇಳೆ ಸಿಕ್ಕಿಬಿದ್ದ ಗ್ರಾಹಕನನ್ನು ಬಂಧಿಸುವಂತಿಲ್ಲ; ಕರ್ನಾಟಕ ಹೈಕೋರ್ಟ್ ಆದೇಶ

ಬೆಂಗಳೂರು: ವೇಶ್ಯಾವಾಟಿಕೆ ನಡೆಯುವ ಸ್ಥಳದಲ್ಲಿ ಪತ್ತೆಯಾದ ಗ್ರಾಹಕನ ವಿರುದ್ಧ ಅನೈತಿಕ ಕಳ್ಳಸಾಗಣೆಯ ಅಪರಾಧಗಳಿಗಾಗಿ ಕಾನೂನು ಕ್ರಮ ಜರುಗಿಸುವಂತಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಪುನರುಚ್ಚರಿಸಿದೆ. ದಾಳಿ ವೇಳೆ ವೇಶ್ಯಾಗೃಹ ದಲ್ಲಿರುವ ಗ್ರಾಹಕರನ್ನು ಕ್ರಿಮಿನಲ್ ಮೊಕದ್ದಮೆಗೆ ಒಳಪಡಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಆದೇಶಿಸಿದ್ದಾರೆ.

ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಅರ್ಜಿದಾರರು ವೇಶ್ಯಾಗೃಹದಲ್ಲಿ ಗ್ರಾಹಕರಾಗಿದ್ದರು. ಅವರು ವೇಶ್ಯಾಗೃಹಕ್ಕೆ ಹೋದಾಗಲೇ ಅಲ್ಲಿ ದಾಳಿ ನಡೆದಿತ್ತು. ಹೀಗಾಗಿ, ಆತನನ್ನು ಕೂಡ ಬಂಧಿಸಿ, ಆತನ ವಿರುದ್ಧ ಸೆಕ್ಷನ್ 3 (ವೇಶ್ಯಾಗೃಹ ಇರಿಸುವ ಶಿಕ್ಷೆ ಅಥವಾ ಆವರಣವನ್ನು ವೇಶ್ಯಾವಾಟಿಕೆಯಾಗಿ ಬಳಸಲು ಅನುಮತಿ), ಐಪಿಸಿ ಸೆಕ್ಷನ್ 4 (ವೇಶ್ಯಾವಾಟಿಕೆಯ ಗಳಿಕೆಯ ಮೇಲೆ ಜೀವನ), ಸೆಕ್ಷನ್ 5 (ವೇಶ್ಯಾವಾಟಿಕೆಗಾಗಿ ವ್ಯಕ್ತಿಯನ್ನು ಪ್ರೇರೇಪಿಸುವುದು ಅಥವಾ ಕರೆದೊಯ್ಯುವುದು) ಮತ್ತು ಅನೈತಿಕ ಸಂಚಾರ ತಡೆ ಕಾಯ್ದೆ (ITPA) ಮತ್ತು ಭಾರತೀಯ ದಂಡ ಸಂಹಿತೆಯ (IPC) ಸೆಕ್ಷನ್ 370 (ವ್ಯಕ್ತಿಗಳ ಕಳ್ಳಸಾಗಣೆ) ಸೆಕ್ಷನ್ 6 (ವೇಶ್ಯಾವಾಟಿಕೆ ನಡೆಸುವ ಆವರಣದಲ್ಲಿ ವ್ಯಕ್ತಿಯನ್ನು ಬಂಧಿಸುವುದು) ಕೇಸ್ ದಾಖಲಿಸಲಾಗಿತ್ತು.

ತನ್ನ ವಿರುದ್ಧದ ವಿಚಾರಣೆಯನ್ನು ರದ್ದುಗೊಳಿಸುವಂತೆ ಕೋರಿ ಆ ಅರ್ಜಿದಾರ ಹೈಕೋರ್ಟ್ ಮೊರೆ ಹೋಗಿದ್ದರು. ವೇಶ್ಯಾವಾಟಿಕೆ ನಡೆಯುವ ಸ್ಥಳದಲ್ಲಿರುವ ಗ್ರಾಹಕರು ವೇಶ್ಯಾಗೃಹವನ್ನು ಇಟ್ಟುಕೊಳ್ಳುವುದಿಲ್ಲ ಅಥವಾ ಆವರಣವನ್ನು ವೇಶ್ಯಾವಾಟಿಕೆಯಾಗಿ ಬಳಸಲು ಅನುಮತಿಸುವುದಿಲ್ಲ, ವೇಶ್ಯಾವಾಟಿಕೆಗೆ ಪ್ರೇರೇಪಿಸುವುದೂ ಇಲ್ಲ ಎಂಬ ಅಂಶವನ್ನು ಗಮನಿಸಿದ ಹೈಕೋರ್ಟ್ ಆ ಅರ್ಜಿದಾರನ ಅರ್ಜಿಯನ್ನು ಅಂಗೀಕರಿಸಿತು ಮತ್ತು ಅರ್ಜಿದಾರರ ವಿರುದ್ಧದ ಕ್ರಿಮಿನಲ್ ಪ್ರಕ್ರಿಯೆಗಳನ್ನು ರದ್ದುಗೊಳಿಸಿದೆ.

ಈಶ್ವರಪ್ಪ ಬಂಧಿಸುವವರೆಗೂ ಅಂತ್ಯಕ್ರಿಯೆ ನಡೆಸಲ್ಲ; ಪ್ರಶಾಂತ್ ಪಾಟೀಲ್

ಬೆಳಗಾವಿ, ಏ. 11– ನನ್ನ ಸಹೋದರ ಸಂತೋಷ್ ಈಶ್ವರಪ್ಪ ಅವರ ಜೊತೆ ಚೆನ್ನಾಗಿದ್ದ. ಆದ್ರೆ ಈಗ ಈಶ್ವರಪ್ಪ ಅವರು ಸಂತೋಷ್ ಯಾರು ಅಂತ ಗೊತ್ತೇ ಇಲ್ಲ ಎನ್ನುತ್ತಿದ್ದಾರೆ ಎಂದು ಸಂತೋಷ್ ಸಹೋದರ ಪ್ರಶಾಂತ್ ಪಾಟೀಲ್ ಆರೋಪಿಸಿದ್ದಾರೆ. ಈಶ್ವರಪ್ಪ ಅವರನ್ನು ಬಂಧಿಸುವವರೆಗೂ ನಾವು ಅಂತ್ಯಕ್ರಿಯೆ ನಡೆಸುವುದಿಲ್ಲ ಎಂದು ತಿಳಿಸಿದರು. ಗುತ್ತಿಗೆದಾರನಾಗಿದ್ದ ನನ್ನ ತಮ್ಮ ಸಂತೋಷ್ ಪಾಟೀಲ ಸಾವಿಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರೇ ನೇರ ಕಾರಣ. ಸಂತೋಷ್ ಹಿಂದಿನಿಂದಲೂ ಗುತ್ತಿಗೆ ಕೆಲಸ ಮಾಡುತ್ತಿದ್ದ. ಸುಮಾರು 4 ಕೋಟಿ ಮೊತ್ತದ ಕೆಲಸ ಮಾಡಿದ್ದೇನೆ. ಆದ್ರೆ ಬಿಲ್ ಆಗಿಲ್ಲ. ಇದರಿಂದ ತುಂಬಾನೇ ಕಷ್ಟವಾಗಿದೆ ಎಂದು ಹೇಳಿದ್ದ. ಅಂತೋಷ್ ವಿರುದ್ಧ ಮಾನನಷ್ಟ ಮೊಕದ್ದಮೆಯೂ ದಾಖಲಾಗಿತ್ತು. ಜೀವ ಬೆದರಿಕೆಯೂ ಇದೆ ಎಂದಿದ್ದ ಎಂದು ಪ್ರಶಾಂತ್ ಪಾಟೀಲ್ ಹೇಳಿದ್ದಾರೆ.

ಉ.ಪ್ರದೇಶ ಪರಿಷತ್ ಚುನಾವಣೆ: ಬಿಜೆಪಿ ಜಯಭೇರಿ

ಲಕ್ನೋ, ಏ. 11– ಉತ್ತರ ಪ್ರದೇಶದ ಚುನಾವಣೆಯಲ್ಲಿ ಸತತ ಎರಡನೇ ಬಾರಿ ಗೆದ್ದು ಅಧಿಕಾರಕ್ಕೇರಿದ ಬಿಜೆಪಿ ಈಗ ವಿಧಾನ ಪರಿಷತ್ ಚುನಾವಣೆಯಲ್ಲೂ ಭರ್ಜರಿ ಜಯಗಳಿಸಿದೆ. ಒಟ್ಟು 36 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 33, ಪಕ್ಷೇತರ 2, ಜೆಎಸ್‌ಡಿ ಒಂದು ಸ್ಥಾನದಲ್ಲಿ ಜಯಗಳಿಸಿದೆ. ವಿರೋಧ ಪಕ್ಷವಾದ ಎಸ್‌ಪಿ ಜೊತೆ ಬಿಎಸ್‌ಪಿ, ಕಾಂಗ್ರೆಸ್ ಶೂನ್ಯ ಸಂಪಾದಿಸಿದೆ.

ಪರಿಹಾರ ಪಾವತಿಸದ ಪಾಲಿಕೆ ಪೀಠೋಪಕರಣ ಜಪ್ತಿ ಯತ್ನ: ಭಾಗಶಃ ಪರಿಹಾರ ಪಾವತಿ

ಮೈಸೂರು, ಏ.12(ಎಂಕೆ)– ಭೂ ಸ್ವಾಧೀನ ಪ್ರಕರಣವೊಂದರಲ್ಲಿ ಹೆಚ್ಚುವರಿ ಪರಿಹಾರ ಪಾವತಿ ಮಾಡದ ಹಿನ್ನೆಲೆ ಕೋರ್ಟ್ ಸಿಬ್ಬಂದಿ ಪಾಲಿಕೆ ಕಚೇರಿಯಲ್ಲಿದ್ದ ಪೀಠೋಪಕರಣಗಳ ಜಪ್ತಿಗೆ ಮುಂದಾದ ಘಟನೆ ಮಂಗಳವಾರ ನಡೆಯಿತು. ಮೈಸೂರು ಮಹಾನಗರ ಪಾಲಿಕೆಯು ವಾಣಿವಿಲಾಸ ವಾಟರ್ ವರ್ಕ್ಸ್‌ಗೆ ಸಂಬಂಧಿಸಿದ ಭೂ ಸ್ವಾಧೀನ ಪ್ರಕರಣವೊಂದರಲ್ಲಿ ಭೂಮಿ ನೀಡಿದವರಿಗೆ ಹೆಚ್ಚುವರಿ ಪರಿಹಾರ ನೀಡುವಂತೆ ಕೋರ್ಟ್ ಆದೇಶ ನೀಡಿತ್ತು. ಆದರೆ ಪಾಲಿಕೆಯು ಪರಿಹಾರವನ್ನು ನೀಡಿರಲಿಲ್ಲ ಈ ಸಂಬಂಧ ಕೋರ್ಟ್‌ನಿಂದ ಬಂದ ಸಿಬ್ಬಂದಿ ಪಾಲಿಕೆಯಲ್ಲಿದ್ದ ಪೀಠೋಪಕರಣಗಳನ್ನು ಜಪ್ತಿ ಮುಂದಾಗಿದ್ದಾರೆ. ಕೂಡಲೇ ಆಗಮಿಸಿದ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಭೂ ಪರಿಹಾರ ನೀಡಿಕೆಗೆ ಭಾಗಶಃ ಹಣ ಪಾವತಿಸಿ, ಉಳಿದ ಹಣ ಪಾವತಿಗೆ ಕಾಲಾವಕಾಶ ಪಡೆದು ಜಪ್ತಿಯಿಂದ ಪಾರಾಗಿದ್ದಾರೆ.

ಮಹಿಳೆ ನಾಪತ್ತೆ

ಮೈಸೂರು, ಏ.12– ಆರಾಧ್ಯ ಲೇಔಟ್, ಶ್ರೀನಗರ ರೈಲ್ವೆ ಗೇಟ್ ಬಳಿ 21 ವರ್ಷದ ಪದ್ಮ ಎಂಬುವವರು ವಾಸವಾಗಿದ್ದು, ಮಾ.28ರ ಮಧ್ಯಾಹ್ನ 12 ಗಂಟೆ ನಂತರದಲ್ಲಿ ಮನೆಯಿಂದ ಕಾಣೆಯಾಗಿರುತ್ತಾರೆ ಎಂದು ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. 5 ಅಡಿ ಎತ್ತರ, ಗೋಧಿ ಮೈ ಬಣ್ಣ, ಎದೆ ಮತ್ತು ಬೆನ್ನಿನಲ್ಲಿ ಆಪರೇಷನ್ ಮಾಡಿದ ಗುರುತು ಇರುತ್ತದೆ, ಪಿಂಕ್ ಕಲರ್ ಚೂಡಿದಾರ್ ಟಾಪ್ ಹಾಗೂ ಕ್ರೀಂ ಬಣ್ಣದ ಲೆಗ್ಗಿನ್ಸ್ ಧರಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ಎಸ್.ಪಿ. ದೂ.ಸಂ:0821–2520040, ಮೈಸೂರು ಜಿಲ್ಲಾ ನಿಸ್ತಂತು ಕೊಠಡಿ ದೂ.ಸಂ: 0821–2444800, ಮೈಸೂರು ಸೌತ್ ಪೊಲೀಸ್ ಠಾಣೆ ದೂ.ಸಂ: 0821–2444955 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಠಾಣಾಧಿಕಾರಿಯಾದ ನಾರಾಯಣಮೂರ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ಮಹಿಳೆ ಶವ ಪತ್ತೆ

ಮೈಸೂರು, ಏ.12– ಅಭ್ಯುದಯ ಲೇ ಔಟ್, ಆಶ್ರಯ ಬಡಾವಣೆ ದಡದಹಳ್ಳಿ ಮೈಸೂರು ಇಲ್ಲಿ 50 ರಿಂದ 55 ವರ್ಷದ ಗೀತಾ ಎಂಬುವವರ ಶವ ಪತ್ತೆಯಾಗಿದ್ದು, ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಗೆ ಬಿ.ಪಿ. ಮತ್ತು ಶುಗರ್ ಖಾಯಿಲೆ ಇದ್ದು ಇವರು ಅನುಮಾನಸ್ಪದವಾಗಿ ಮೃತಪಟ್ಟಿರುವುದು ಕಂಡುಬಂದಿದೆ. ಮೃತ ಮಹಿಳೆಯ ವಾರಸುದರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ಎಸ್.ಪಿ. ದೂ.ಸಂ: 0821–2520040, ಮೈಸೂರು ಜಿಲ್ಲಾ ನಿಸ್ತಂತು ಕೊಠಡಿ ದೂ.ಸಂ: 0821–2444800, ಮೈಸೂರು ಸೌತ್ ಪೊಲೀಸ್ ಠಾಣೆ ದೂ.ಸಂ: 0821–2444955 ಅನ್ನು ಸಂಪರ್ಕಿಸಬಹುದು ಎಂದು ಮಹಿಳಾ ಪೊಲೀಸ್ ಉಪ ನಿರೀಕ್ಷಕರಾದ ಲಮಣಿ ಸುಷ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರುಕ್ಮಣಮ್ಮ ನಿಧನ



ಮೈಸೂರು, ಏ. 12– ಮೈಸೂರು ಹೆಬ್ಬಾಳು 2ನೇ ಹಂತದ ನಿವಾಸಿ ದಿವಂಗತ ಸುಬ್ರಹ್ಮಣ್ಯ ಶೆಟ್ಟಿ ಅವರ ಪತ್ನಿ ರುಕ್ಮಣಮ್ಮ(97) ಅವರು ಮಂಗಳವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು.

ಮೂಲತಃ ನಂಜನಗೂಡು ತಾಲೂಕು ತಗಡೂರು ಗ್ರಾಮದ ವಾಸಿಗಳಾದ ರುಕ್ಮಣಮ್ಮನವರು ಹೆಬ್ಬಾಳು ಬಡಾವಣೆಯಲ್ಲಿ ಮಕ್ಕಳು–ಮೊಮ್ಮಕ್ಕಳೊಂದಿಗೆ ವಾಸವಾಗಿದ್ದರು. ದಿವಂಗತರು ನಾಲ್ವರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಂಜೆ ವೇಳೆಗೆ ಹೆಬ್ಬಾಳುವಿನಲ್ಲಿರುವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತೋಷ್ ಪಾಟೀಲ್ ಆತ್ಮಹತ್ಯೆಗೆ ನಾನು ಕಾರಣ ಅಲ್ಲ

ನಾನ್ಯಾಕೆ ರಾಜೀನಾಮೆ ಕೊಡಲಿ: ಕೆ.ಎಸ್. ಈಶ್ವರಪ್ಪ

ಬೆಂಗಳೂರು: ನಾನು ಯಾವುದೇ ತಪ್ಪು ಮಾಡಿಲ್ಲ, ನಾನ್ಯಾಕೆ ರಾಜೀನಾಮೆ ನೀಡಲಿ, ಪ್ರಕರಣ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ, ಕೋರ್ಟ್ ತೀರ್ಪು ಹೊರಬರಲಿ, ಇದು ಪ್ರತಿಪಕ್ಷ ಕಾಂಗ್ರೆಸ್ ನಾಯಕರ ಆರೋಪಕ್ಕೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಪ್ರತಿಕ್ರಿಯೆ.

ಇಂದು ಉಡುಪಿಯ ಶಾಂಭವಿ ಲಾಡ್ಜ್‌ನಲ್ಲಿ ಬಿಜೆಪಿ ಕಾರ್ಯಕರ್ತ, ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಬಹಿರಂಗವಾಗುತ್ತಿದ್ದಂತೆ ಅವರು ವಾಟ್ಸಾಪ್ ನಲ್ಲಿ ಕಳುಹಿಸಿದ್ದ ಸಂದೇಶ ದೊಡ್ಡ ಮಟ್ಟದಲ್ಲಿ ಸದ್ದು ಮಾಡುತ್ತಿದೆ. ಅದರಲ್ಲಿ ನನ್ನ ಆತ್ಮಹತ್ಯೆಗೆ ಸಚಿವ ಈಶ್ವರಪ್ಪನವರೇ ಕಾರಣ ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕರು ಸಚಿವ ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸುತ್ತಿದ್ದಾರೆ.

ಇದಕ್ಕೆ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವ ಈಶ್ವರಪ್ಪ, ಸಂತೋಷ್ ಪಾಟೀಲೇ ತಪ್ಪು ಮಾಡಿದ್ದು, ನಾನು ಯಾವುದೇ ತಪ್ಪನ್ನು ಮಾಡಿಲ್ಲ, ದೆಹಲಿಯಲ್ಲಿ ಡಿ.ಕೆ ಸುರೇಶ್, ಹನುಮಂತಯ್ಯ ಅವರನ್ನು ಸಂತೋಷ್ ಭೇಟಿ ಮಾಡಿ ಸುದ್ದಿಗೋಷ್ಠಿ ನಡೆಸಿದ್ದರು. ಆ ಕಾಪಿಯನ್ನು ನಾನು ತೆಗೆದುಕೊಂಡು ಗುತ್ತಿಗೆದಾರ ಸಂತೋಷ್ ವಿರುದ್ಧ ಕೋರ್ಟ್‌ನಲ್ಲಿ ಮಾನನಷ್ಟ ಕೇಸ್ ಹಾಕಿದ್ದೇನೆ ಎಂದರು. ಕೋರ್ಟ್‌ನಿಂದ ನೋಟಿಸ್ ಹೋದ ನಂತರ ಭೀತಿಗೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದು. ನೋಟಿಸ್ ಹೋದ ನಂತರ ಗಾಬರಿಯಾಗಿದ್ದಾರೆ ಅನಿಸುತ್ತೆ. ಸಂತೋಷ್ ಆತ್ಮಹತ್ಯೆಗೂ, ನನಗೂ ಏನೂ ಸಂಬಂಧವಿಲ್ಲ. ಸಂತೋಷ್ ಅವರನ್ನು ನಾನು ನೋಡಿಲ್ಲ. ಅವರು ಯಾರೂ ಎಂದೇ ನನಗೆ ಗೊತ್ತಿಲ್ಲ ಎಂದು ಹೇಳಿದರು.

40 ಪರ್ಸೆಂಟ್ ಕಮಿಷನ್ ಕುರಿತು ಗುತ್ತಿಗೆದಾರ ಸಂತೋಷ್ ನನ್ನ ಬಗ್ಗೆಯೂ ಅಲ್ಲ, ನಮ್ಮ ಕಡೆ ಅವರು ಯಾರೋ ಕೇಳುತ್ತಿದ್ದಾರೆ ಎಂದು ಪತ್ರ ಬರೆದಿದ್ದಾರೆ. ಇದರಿಂದಾಗಿ ನಾನು ಕಾನೂನುಬದ್ಧವಾಗಿ ಪ್ರಜಾಪ್ರಭುತ್ವದಲ್ಲಿ ಏನು ವ್ಯವಸ್ಥೆ ಇದೆಯೋ ಅದನ್ನು ಮಾಡಿದ್ದೇನೆ. ಸುಮ್ಮನೆ ಯಾವುದೇ ರಾಜಕಾರಣಿಯ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಗೂ ಪತ್ರಗಳನ್ನು ಬರೆದರೆ ಸಹಿಸಲು ಸಾಧ್ಯವಿಲ್ಲ. ಇದರಿಂದಾಗಿ ನಾನು ಕೋರ್ಟ್‌ಗೆ ಹೋಗಿದ್ದೇನೆ ಎಂದು ಹೇಳಿದ್ದಾರೆ.

ಸಾಲ ಹೆಚ್ಚಾಗಿ ಆತ್ಮಹತ್ಯೆ ಮಾಡಿಕೊಂಡಿರಬಹುದು

ಈಶ್ವರಪ್ಪ ಪರ ಯತ್ನಾಳ್ ಬ್ಯಾಟಿಂಗ್

ವಿಜಯಪುರ: ಸಂತೋಷ್ ಆತ್ಮಹತ್ಯೆಗೆ ಯಾರ ಸಂಬಂಧವೂ ಇಲ್ಲ. ಆತ್ಮಹತ್ಯೆಗೆ ಅನೇಕ ಕಾರಣಗಳು ಇರುತ್ತವೆ. ಅವರ ಜೀವನದಲ್ಲಿ ಜಿಗುಪ್ಸೆ ಆಗಿರಬಹುದು ಹೀಗಾಗಿ ಸಂತೋಷ್ ಈ ನಿರ್ಧಾರಕ್ಕೆ ಬಂದಿರಬಹುದು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಈಶ್ವರಪ್ಪ ಪರವಾಗಿ ಮಾತನಾಡಿದರು.

ಸಾಲ ಸೋಲ ಹೆಚ್ಚಾಗಿ ಅಥವಾ ಕುಟುಂಬದ ಸಮಸ್ಯೆಯಿಂದಾಗಿ ಸಂತೋಷ್ ಆತ್ಮಹತ್ಯೆ ಮಾಡಿಕೊಂಡಿರಬಹುದು. ತಮ್ಮ ವಯಕ್ತಿಕ ವಿಚಾರವನ್ನು ತಂದು, ವ್ಯಕ್ತಿ ಹಾಗೂ ಪಕ್ಷದ ವಿರುದ್ಧ ಮಾಡುವುದು ಸರಿಯಲ್ಲ ಎಂದು ಹೇಳಿದರು. ಶೇ.40 ಲಂಚಕ್ಕಾಗಿ ಆತ್ಮಹತ್ಯೆ ಎನ್ನುವುದು ಸಂಪೂರ್ಣ ಸುಳ್ಳು. ಈಶ್ವರಪ್ಪ ಶೇ.40 ಲಂಚ ತೆಗೆದುಕೊಳ್ಳುತ್ತಾರೆ ಎನ್ನುವುದಾದರೆ ಅದಕ್ಕೆ ಸಾಕ್ಷಿ ಏನಿದೆ? ಇದು ಹೇಗೆ ಸಾಧ್ಯ? ಈ ಬಗ್ಗೆ ತನಿಖೆಯಾಗಲಿ. ಕೆಲವರು ಮಾಹಿತಿ ಹಕ್ಕಿನಲ್ಲಿ ಅರ್ಜಿ ಹಾಕಿ ಹಣ ಕೇಳುವವರೂ ಇರುತ್ತಾರೆ ಎಂದು ತಿಳಿಸಿದರು.

ಈಶ್ವರಪ್ಪ ಇಂತಹ ಕೀಳುಮಟ್ಟಕ್ಕೆ ಹೋಗುವವರು ಅಲ್ಲ. ಈಶ್ವರಪ್ಪ ವಿರುದ್ಧ ಬರೆದಿಟ್ಟು, ಸಂತೋಷ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನು ಮುಂದೆ ಎಲ್ಲರೂ ಹಾಗೇ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆತ್ಮಹತ್ಯೆ ಎಲ್ಲದಕ್ಕೂ ಪರಿಹಾರ ಅಲ್ಲ. ಸಂತೋಷ್ ಪಾಟೀಲ್ ಆತ್ಮಹತ್ಯೆ ಹಿಂದೆ ಕಾಂಗ್ರೆಸ್ ಕೈವಾಡ ಇದೆ ಎಂದರು. ಕಾಂಗ್ರೆಸ್‌ನವರು ಇಂಥವನೊಬ್ಬನನ್ನು ರೆಡಿ ಮಾಡ್ತಾರೆ. ಅವನಿಂದ ಹೇಳಿಕೆ ಕೊಡಿಸುತ್ತಾರೆ. ಇಂತಹ ಘಟನೆಗಳು ರಾಜಕಾರಣದಲ್ಲಿ ಬಹಳ ನಡೆಯುತ್ತವೆ. ಪಂಚರಾಜ್ಯ ಚುನಾವಣೆಯಲ್ಲಿ ಸೋಲುಂಡ ಕಾಂಗ್ರೆಸ್ ಹತಾಶೆಗೊಂಡು ಹೀಗೆಲ್ಲಾ ಮಾಡುತ್ತಿದೆ ಎಂದು ಹೇಳಿಕೆ ನೀಡಿದ್ದಾರೆ.

ತೀವ್ರ ಒತ್ತಡಕ್ಕೆ ಸಿಲುಕಿದ ಸರ್ಕಾರ, ಈಶ್ವರಪ್ಪ ರಾಜೀನಾಮೆ ಸಾಧ್ಯತೆ

ಬೆಳಗಾವಿ: ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ರಾಜೀನಾಮೆ ಪಡೆಯಬೇಕು ಮತ್ತು ಅವರನ್ನು ಬಂಧಿಸಬೇಕು ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತೀವ್ರ ಒತ್ತಡಕ್ಕೆ ಸಿಲುಕಿದೆ. ಹೀಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈಶ್ವರಪ್ಪ ಅವರಿಂದ ರಾಜೀನಾಮೆ ಪಡೆಯುವ ಸಾಧ್ಯತೆ ಇದೆ ಎನ್ನಲಾಗಿದೆ.

ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರಿಗೆ ತುರ್ತು ವರದಿ ರವಾನಿಸಲಾಗಿದೆ ಸಿವಿಲ್ ಗುತ್ತಿಗೆದಾರ ಸಂತೋಷ್ ಪಾಟೀಲ್(ಬಿಜೆಪಿ ಕಾರ್ಯಕರ್ತ) ಅವರು ಇಂದು ಆತ್ಮಹತ್ಯೆ ಮಾಡಿಕೊಂಡಿದ್ದು, ಬೆಳಗಾವಿಯಲ್ಲಿ ಆರ್‌ಡಿಪಿಆರ್ ಇಲಾಖೆಗೆ ಸಂಬಂಧಿಸಿದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ಅವರ ಬಿಲ್‌ಗಳನ್ನು ಕ್ಲಿಯರ್ ಮಾಡಲು ಸಚಿವ ಈಶ್ವರಪ್ಪ ಭಾರಿ ಕಮಿಷನ್ ಕೇಳಿದ್ದರು ಎಂದು ಆರೋಪಿಸಿದ್ದಾರೆ.

ಸೋಮವಾರ ರಾತ್ರಿ ಸಂತೋಷ್ ಪಾಟೀಲ್ ಅವರು ಬೆಳಗಾವಿಯ ಹಲವಾರು ಪತ್ರಕರ್ತರಿಗೆ ವಾಟ್ಸಾಪ್‌ನಲ್ಲಿ ಸಂದೇಶ ಕಳುಹಿಸಿದ್ದು ಅದರಲ್ಲಿ ಅವರು, 'ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಕೆಎಸ್ ಈಶ್ವರಪ್ಪ ಅವರೇ ತಮ್ಮ ಸಾವಿಗೆ ನೇರ ಹೊಣೆಯಾಗಿದ್ದು, ಅವರಿಗೆ ಶಿಕ್ಷೆಯಾಗಬೇಕು. ನನ್ನ ಎಲ್ಲಾ ವೈಯಕ್ತಿಕ ಹಿತಾಸಕ್ತಿಗಳನ್ನು ಕಡೆಗಣಿಸಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಹೆಂಡತಿ ಮತ್ತು ಮಗುವಿಗೆ ಸಹಾಯ ಹಸ್ತ ಚಾಚುವಂತೆ ನಾನು ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಮಾಜಿ ಸಿಎಂ ಬಿ ಎಸ್ ಯಡಿಯೂರಪ್ಪ ಸೇರಿದಂತೆ ನನ್ನ ಲಿಂಗಾಯತ ಸಮುದಾಯದ ನಾಯಕರಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ ಎಂದಿದ್ದಾರೆ. ಅಲ್ಲದೆ ಮಾಧ್ಯಮ ಮಿತ್ರರಿಗೆ ತುಂಬಾ ಧನ್ಯವಾದಗಳು" ಎಂದು ಬರೆದಿದ್ದಾರೆ.

ವರ್ಕ್ ಆರ್ಡರ್ ಇಲ್ಲದೇ 4 ಕೋಟಿ ಕಾಮಗಾರಿ ಮಾಡಿದ್ದ ಸಂತೋಷ್

ಬೆಂಗಳೂರು: ನಾನು 14 ಲಕ್ಷ ರೂ. ಹಣವನ್ನು ಈಶ್ವರಪ್ಪನವರಿಗೆ ತಲುಪಿಸಿದ್ದೆ. ಆದರೂ ಬಿಲ್ ಪಾವತಿ ಆಗಿಲ್ಲ. ಹೀಗಾಗಿ ಸಾಯುವುದು ಮಾತ್ರ ಬಾಕಿ ಎಂದು ಸಂತೋಷ್ ಪಾಟೀಲ್ ಈ ಹಿಂದೆ ತಿಳಿಸಿದ್ದರು.

ದೆಹಲಿಯಲ್ಲಿ ಮಾರ್ಚ್ 9 ರಂದು ಖಾಸಗಿ ಸುದ್ದಿವಾಹಿನಿ ಜೊತೆ ಮಾತನಾಡಿದ್ದ ಅವರು ನಾನು ಮೋದಿಯ ಪರಮ ಭಕ್ತ. ಬಿಜೆಪಿ ಅಧಿಕಾರಕ್ಕೆ ಬರುವಲ್ಲಿ ನಾನು ಕೆಲಸ ಮಾಡಿದ್ದೇನೆ. ಗ್ರಾಮಗಳ ಅಭಿವೃದ್ಧಿ ಮಾಡುತ್ತೇವೆ ಎಂದು ಸರ್ಕಾರ ಹೇಳುತ್ತದೆ. ಆದರೆ ಕಾಮಗಾರಿ ಮಾಡಿದರೂ ಬಿಲ್ ಪಾವತಿ ಇನ್ನೂ ಮಾಡಿಲ್ಲ. ಹೀಗೆ ಆದರೆ ನಾನು ಸಾಯುವುದೇ ಲೇಸು. ಈ ಕಾರಣಕ್ಕೆ ನಾನು ದೆಹಲಿಯಲ್ಲಿರುವ ಬಿಜೆಪಿ ನಾಯಕರನ್ನು ಭೇಟಿಯಾಗಲು ಬಂದಿದ್ದೇನೆ ಎಂದು ಹೇಳಿದ್ದರು.

ವರ್ಕ್ ಆರ್ಡರ್ ಇಲ್ಲದೇ ಕಾಮಗಾರಿ: ಈಶ್ವರಪ್ಪ ಅವರಿಂದ ನಂಬಿಕೆ ದ್ರೋಹ ಆರೋಪವನ್ನು ಸಂತೋಷ್ ಮಾಡಿದ್ದರು. ಹಿಂಡಲಗಾದಲ್ಲಿ ವರ್ಕ್ ಆರ್ಡರ್ ಇಲ್ಲದೇ ಸಂತೋಷ್ ಕಾಮಗಾರಿ ಮಾಡಿದ್ದರು. ಈಶ್ವರಪ್ಪರಿಂದ ಮೌಖಿಕ ಆದೇಶ ಪಡೆದು 4 ಕೋಟಿ ರಸ್ತೆ ನಿರ್ಮಿಸಿದ್ದರು. ಕಾಮಗಾರಿ ಮುಗಿಸಿ ಬಿಲ್ ಕ್ಲೈಮ್ ಮಾಡಲು ವರ್ಕ್ ಆರ್ಡರ್ ಮುಖ್ಯವಾಗುತ್ತದೆ. ಕಾಮಗಾರಿ ಅಂತ್ಯವಾದ ಬಳಿಕ ವರ್ಕ್ ಆರ್ಡರ್ ನೀಡುವಂತೆ ಸಂತೋಷ್, ಈಶ್ವರಪ್ಪ ಬಳಿ ಮನವಿ ಮಾಡಿದ್ದರು. ಆದರೆ ವರ್ಕ್ ಆರ್ಡರ್ ಬಿಡುಗಡೆ ಆಗಿರಲ್ಲ. ಬಿಲ್ ಸಹ ಸರ್ಕಾರದಿಂದ ಬಿಡುಗಡೆ ಆಗಿರಲಿಲ್ಲ.

ಸಂತೋಷ್ ಹೇಳಿದ್ದೇನು?: ಬಿಲ್ ಬಿಡುಗಡೆಗೆ ಪಿಎಗಳ ಮೂಲಕ 40% ಕಮಿಷನ್‌ಗೆ ಈಶ್ವರಪ್ಪ ಬೇಡಿಕೆ ಇಟ್ಟಿದ್ದರು. ಈಗಾಗಲೇ 14 ಲಕ್ಷ ರೂ. ಹಣವನ್ನು ಲಂಚವಾಗಿ ನೀಡಿದ್ದೇನೆ. 4 ಕೋಟಿ ರೂ.ಗೆ ಬಡ್ಡಿ ಕಟ್ಟುತ್ತಿದ್ದೇನೆ. ಬಿಲ್ ಬಿಡುಗಡೆಯಾಗದಿದ್ದರೆ ವಿಷ ಸೇವಿಸುತ್ತೇನೆ. ಆತ್ಮಹತ್ಯೆ ಬಿಟ್ಟು ಬೇರೆ ಯಾವುದೇ ದಾರಿ ಇಲ್ಲ. ಕೇಂದ್ರ ನಾಯಕರನ್ನು ಭೇಟಿಯಾಗಲು ಬಂದಿದ್ದೇನೆ. ಪರಿಹಾರ ಸಿಗದಿದ್ದರೇ ಸಾವೊಂದೇ ದಾರಿ ಎಂದು ಸಂತೋಷ್ ಹೇಳಿದ್ದರು.

ಈಶ್ವರಪ್ಪ ಹೇಳೋದು ಏನು?: ಸಂತೋಷ್ ಪಾಟೀಲ್ ಯಾರೂ ಎಂಬುದು ಗೊತ್ತಿಲ್ಲ, ಯಾವತ್ತೂ ನೋಡಿರಲಿಲ್ಲ ನನ್ನ ಮೇಲೆ ಕಮಿಷನ್ ಆರೋಪ ಮಾಡಿದ್ದಕ್ಕೆ ಮಾನನಷ್ಟ ಮೊಕದ್ದಮೆ ಹೂಡಿದ್ದೆ. ಕೋರ್ಟ್‌ನಿಂದ ಲೀಗಲ್ ನೋಟಿಸ್ ಬಂದಿತ್ತು. ಆ ನೋಟಿಸ್‌ಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿರಬಹುದು. ಸಂತೋಷ್ ಪಾಟೀಲ್ ಆತ್ಮಹತ್ಯೆಗೂ ನನಗೂ ಸಂಬಂಧ ಇಲ್ಲ. ನನಗೆ ಯಾಕೆ ಶಿಕ್ಷೆ ಆಗ್ಬೇಕು? ಶಿಕ್ಷೆ ಆಗುವಂತಹ ತಪ್ಪನ್ನು ನಾನು ಮಾಡಿಲ್ಲ.

1,910 ಕಿಮೀ ದೂರವನ್ನು 7 ಗಂಟೆ 30 ನಿಮಿಷಗಳಲ್ಲಿ ಕ್ರಮಿಸಿ ಚಿನೂಕ್ ಹೆಲಿಕಾಪ್ಟರ್! ದಾಖಲೆ

ನವದೆಹಲಿ: ಭಾರತೀಯ ವಾಯುಪಡೆಯ ಚಿನೂಕ್ ಹೆಲಿಕಾಪ್ಟರ್ ಹೊಸ ದಾಖಲೆ ನಿರ್ಮಿಸಿದೆ. ಚಿನೂಕ್ ತನ್ನ ಹಾರಾಟದ ಮೂಲಕ ಎಲ್ಲರಿಗೂ ಅಚ್ಚರಿ ಮೂಡಿಸಿದೆ.

ಚಿನೂಕ್ ಹೆಲಿಕಾಪ್ಟರ್ ಎಲ್ಲೂ ನಿಲ್ಲದೆ 1,910 ಕಿ.ಮೀ ದೂರವನ್ನು ಕ್ರಮಿಸಿದೆ. ಚಿನೂಕ್ ಚಂಡೀಗಢದಿಂದ ಅಸ್ಸಾಂನ ಜೋರ್ಹತ್ ಗೆ 7 ಗಂಟೆ ಮೂವತ್ತು ನಿಮಿಷಗಳಲ್ಲಿ ತಲುಪಿದೆ ಎಂದು ರಕ್ಷಣಾ ಅಧಿಕಾರಿಗಳು ಈ ಮಾಹಿತಿ ನೀಡಿದ್ದಾರೆ. ಈ ಹಾರಾಟವು ಹೆಲಿಕಾಪ್ಟರ್‌ನ ಸುದೀರ್ಘ ಪ್ರಯಾಣವಾಗಿದೆ ಎಂದು ಅವರು ಹೇಳಿದರು.

ಹೆಲಿಕಾಪ್ಟರ್‌ನ ಸಾಮರ್ಥ್ಯದ ಜೊತೆಗೆ ವಾಯುಪಡೆಯ ಕಾರ್ಯಾಚರಣೆಯ ಯೋಜನೆ ಮತ್ತು ಅನುಷ್ಠಾನದಿಂದಾಗಿ ಇದು ಸಾಧ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರತವು ಅಮೆರಿಕದಿಂದ ಚಿನೂಕ್ ಹೆಲಿಕಾಪ್ಟರ್‌ಗಳನ್ನು ಖರೀದಿಸಿತ್ತು. ಪ್ರಸ್ತುತ, ಭಾರತದ ಬಳಿ 15 ಚಿನೂಕ್ ಹೆಲಿಕಾಪ್ಟರ್‌ಗಳಿವೆ. ಚಿನೂಕ್ ಹೆಲಿಕಾಪ್ಟರ್‌ಗಳನ್ನು ಹಲವು ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಈ ಹೆಲಿಕಾಪ್ಟರ್ ಮೂಲಕ ಸೈನಿಕರು, ಶಸ್ತ್ರಾಸ್ತ್ರಗಳು, ಇಂಧನ ಇತ್ಯಾದಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲಾಗುತ್ತದೆ. ಇದಲ್ಲದೇ, ಯಾವುದೇ ವಿಪತ್ತಿನ ಸಂದರ್ಭದಲ್ಲಿ ಪರಿಹಾರ ಮತ್ತು ರಕ್ಷಣಾ ಕಾರ್ಯಕ್ಕಾಗಿ ಈ ಹೆಲಿಕಾಪ್ಟರ್‌ನ ಸೇವೆಯನ್ನು ತೆಗೆದುಕೊಳ್ಳಲಾಗುತ್ತದೆ.

CH–47F(I) ಚಿನೂಕ್ ಅಡ್ವಾನ್ಸ್ ಮಲ್ಟಿ ಮಿಷನ್ ಹೆಲಿಕಾಪ್ಟರ್ ಆಗಿದೆ. ಈ ಹೆಲಿಕಾಪ್ಟರ್ ಭಾರತೀಯ ಸಶಸ್ತ್ರ ಪಡೆಗಳಿಗೆ ಯುದ್ಧ ಮತ್ತು ಮಾನವೀಯ ಕಾರ್ಯಾಚರಣೆಗಳಲ್ಲಿ ಸಾಟಿಯಿಲ್ಲದ ಯುದ್ಧತಂತ್ರದ ಏರ್‌ಲಿಫ್ಟ್ ಸಾಮರ್ಥ್ಯವನ್ನು ನೀಡುತ್ತದೆ.

9.6 ಟನ್ ಹೊತ್ತು ಸಾಗುವ ತಾಕತ್ತಿದೆ: ಚಿನೂಕ್ ಹೆಲಿಕಾಪ್ಟರ್ ಸುಮಾರು 9.6 ಟನ್ ತೂಕವನ್ನು ಸುಲಭವಾಗಿ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಈ ಹೆಲಿಕಾಪ್ಟರ್ ಮೂಲಕ ಭಾರೀ ಯಂತ್ರೋಪಕರಣಗಳು, ಫಿರಂಗಿ ಮತ್ತು ಶಸ್ತ್ರಸಜ್ಜಿತ ವಾಹನಗಳನ್ನು ಸಹ ಸಾಗಿಸಲಾಗುತ್ತದೆ.

ಮಳವಳ್ಳಿ ಕ್ಷೇತ್ರದಿಂದ ರಾಜಕೀಯ ವಿಜಯ ಯಾತ್ರೆ



ಮಳವಳ್ಳಿ,ಏ.12(ಮೋಹನ್‌ರಾಜ್)– ಮುಂದಿನ ದಿನಗಳಲ್ಲಿ ಮಳವಳ್ಳಿ ಕ್ಷೇತ್ರದಿಂದ ರಾಜಕೀಯ ವಿಜಯ ಯಾತ್ರೆ ಆರಂಭಿಸಿ. ಜಿಲ್ಲೆಯ ಎಲ್ಲ ಕ್ಷೇತ್ರಗಳಲ್ಲೂ ಪಕ್ಷದ ಗೆಲುವಿಗೆ ಶ್ರಮಿಸಿ ಜನರ ಆಶೀರ್ವಾದ ಪಡೆಯುವುದಾಗಿ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ತಾಲೂಕಿನ ರಾಗಿಬೊಮ್ಮನಹಳ್ಳಿ ಗ್ರಾಮದಲ್ಲಿ ಬಸವೇಶ್ವರ ಗೆಳೆಯರ ಬಳಗ ಹಾಗೂ ಬಿ.ವೈ.ವಿಜಯೇಂದ್ರ ಅಭಿಮಾನಿಗಳ ಬಳಗ ಆಯೋಜಿಸಿದ್ದ ಮೂರನೇ ವರ್ಷದ ರಾಜ್ಯ ಮಟ್ಟದ ಜೋಡಿ ಹಸುಗಳ ಎತ್ತಿನಗಾಡಿ ಓಟದ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು ಮುಂದಿನ ದಿನಗಳಲ್ಲಿ ಮಳವಳ್ಳಿ ಕ್ಷೇತ್ರದಿಂದ ರಾಜಕೀಯ ವಿಜಯಯಾತ್ರೆ ಆರಂಭಿಸುವೆ. ಬಿ.ಎಸ್.ಯಡಿಯೂರಪ್ಪ ಅಂತಹ ನಾಯಕರ ಮಗನಾಗಿರುವುದು ನನ್ನ ಪುಣ್ಯ. ಏಕೆಂದರೆ ತುಮಕೂರಿನಲ್ಲಿ ಈಚೆಗೆ ನಡೆದ ಸಿದ್ಧಗಂಗಾ ಶ್ರೀಗಳ ಜನ್ಮದಿನದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಹೆಸರು ಕೇಳುತ್ತಿದ್ದಂತೆಯೇ ಜನರ ಘೋಷಣೆ ರೋಮಾಂಚನಗೊಳಿಸಿತು ಎಂದರು.


ರಾಜಕೀಯದಲ್ಲಿ ನಡೆದ ಅನಿರೀಕ್ಷಿತ ಬೆಳವಣಿಗೆಯಲ್ಲಿ ಜಿಲ್ಲೆಯ ಕೆ.ಆರ್.ಪೇಟೆ ಕ್ಷೇತ್ರದ ಜವಾಬ್ದಾರಿ ತೆಗೆದುಕೊಂಡ ಸಂದರ್ಭದಲ್ಲಿ ಜನರು ನೀಡಿದ ಬೆಂಬಲ ನನ್ನ ರಾಜಕೀಯ ಬದುಕಿನ ದಾರಿಯನ್ನೇ ಬದಲಿಸಿತ್ತು. ಜೀವನದಲ್ಲಿ ಜಿಲ್ಲೆಯ ಜನರ ಋಣ ತೀರಿಸಲು ಸಾಧ್ಯವಿಲ್ಲ. ತಂದೆಯ ಕರ್ಮಭೂಮಿ ಕೆ.ಆರ್.ಪೇಟೆಯಲ್ಲಿ ನಿಮ್ಮ ವಿಜಯೇಂದ್ರನ ರಾಜಕೀಯ ಅಶ್ವಮೇಧದ ಕುದುರೆ ಸಂಚರಿಸಿರುವುದರಿಂದ ರಾಜಕೀಯ ಭವಿಷ್ಯ ಕಂಡುಕೊಳ್ಳಲು ಸಾಧ್ಯವಾಯಿತು ಎಂದರು.

ರಾಜ್ಯದ ವಿವಿಧ ಭಾಗಗಳಿಂದ 55 ಜೋಡಿ ಹಸುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಸ್ಪರ್ಧೆ ನೋಡಲು ಸಾವಿರಾರು ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಕೆ.ಆರ್.ಡಿ.ಎಲ್. ಅಧ್ಯಕ್ಷ ಎಂ.ರುದ್ರೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಜಿ.ಪಂ.ಸದಸ್ಯ ಆರ್.ಎನ್.ವಿಶ್ವಾಸ್, ಮುಖಂಡರಾದ ಯಮದೂರು ಸಿದ್ದರಾಜು, ಬಸವರಾಜು, ಕ್ಯಾತನಹಳ್ಳಿ ಅಶೋಕ್, ಬಿಜೆಪಿ ತಾಲೂಕು ಯುವ ಮೋರ್ಚಾ ಅಧ್ಯಕ್ಷ ಮೋಹನ್ ಸೇರಿದಂತೆ ಹಲವರು ಇದ್ದರು.

ಜನತಾ ಜಲಧಾರೆ ಕಾರ್ಯಕ್ರಮದ ಪೂರ್ವಭಾವಿ ಸಭೆ

ಏ.16ಕ್ಕೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಚಾಲನೆ



ಶ್ರೀರಂಗಪಟ್ಟಣ, ಏ.12(ವಿನಯ್‌ಕಾರೇಕುರ) –ಕೆಆರ್‌ಎಸ್ ಬೃಂದಾವನದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಜನತಾ ಜಲಧಾರೆ ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಿತು.

ಜೆಡಿಎಸ್ ಪಕ್ಷದ ವತಿಯಿಂದ ರಾಜ್ಯದಲ್ಲಿ ಆರಂಭಿಸಲಾಗುವ ಜನತಾ ಜಲಧಾರೆ ಕಾರ್ಯಕ್ರಮ ನಡೆಯಲಿದ್ದು, ಇದರ ಮೂಲಕ ಪಕ್ಷ ಸಂಘಟನೆಗೆ ಚಾಲನೆ ದೊರೆಯಲಿದೆ ಎಂದು ಪುಟ್ಟರಾಜು ತಿಳಿಸಿದರು.

ಜೆಡಿಎಸ್ ವರಿಷ್ಠ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಮತ್ತು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ನಡೆಯಲಿದೆ. ಜಿಲ್ಲೆಯ ಜೆಡಿಎಸ್ ಶಾಸಕರು, ಮಾಜಿ ಶಾಸಕರು, ಪಕ್ಷದ ಮುಖಂಡರು ಕಾರ್ಯಕರ್ತರು ಭಾಗವಹಿಸಲಿದ್ದು, ಅಂದು ಕೆಆರ್‌ಎಸ್ ಬೃಂದಾವನದಲ್ಲಿನ ಕಾವೇರಿ ಮಾತೆಯ ಪ್ರತಿಮೆಗೆ ಹೆಚ್.ಡಿ. ದೇವೇಗೌಡರು ಪೂಜೆ ಸಲ್ಲಿಸುವ ಮೂಲಕ ಜಲಧಾರೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಒಂದು ವಾರಗಳ ಕಾಲ ಜಿಲ್ಲೆಯಲ್ಲಿನ ಎಲ್ಲ ತಾಲೂಕಿನಲ್ಲಿ ಜನತಾ ಜಲಧಾರೆ ಕಾರ್ಯಕ್ರಮದ ಉತ್ಸವ ದೊಡ್ಡ ಮಟ್ಟದಲ್ಲಿ ಜನತೆಗೆ ಮುಟ್ಟಿಸುವ ಕಾರ್ಯಕ್ರಮವಾಗಲಿದೆ. ಎಲ್ಲಾ ಕ್ಷೇತ್ರದಲ್ಲೂ ಸ್ಥಳೀಯ ಜೆಡಿಎಸ್ ಶಾಸಕರು ಹಾಗೂ ಮುಖಂಡರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ನಂತರ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಮಾತನಾಡಿ, ಕರ್ನಾಟಕ ರಾಜ್ಯದ 15 ಕಡೆ ಏಕಕಾಲಕ್ಕೆ ಈ ಜಲಧಾರೆ ಕಾರ್ಯಕ್ರಮ ಚಾಲನೆಗೊಳ್ಳಲಿದೆ. ರಾಜ್ಯದ ಎಲ್ಲ ಜನತೆಗೆ ಕುಡಿಯುವ ಮತ್ತು ರೈತರ ಜಮೀನುಗಳಿಗೆ ನೀರು ಸಮರ್ಪಕವಾಗಿ ಸಿಗುವಂತೆ ಮಾಡುವ ಯೋಜನೆಯೆ ಜನತಾ ಜಲಧಾರೆ ಕಾರ್ಯಕ್ರಮವಾಗಿದೆ.

ಶ್ರೀರಂಗಪಟ್ಟಣ, ನಾಗಮಂಗಲ, ಮದ್ದೂರು ಕ್ಷೇತ್ರಗಳ ಶಾಸಕರು ಸಭೆಗೆ ಗೈರಾಗಿರುವ ಬಗ್ಗೆ ಮಾಧ್ಯಮದವರು ಪ್ರಶ್ನೆಗೆ ಉತ್ತರಿಸಿದ ಡಿ.ರಮೇಶ್, ಶ್ರೀರಂಗಪಟ್ಟಣ, ನಾಗಮಂಗಲ, ಮದ್ದೂರು ಕ್ಷೇತ್ರಗಳ ಶಾಸಕರು ತಮ್ಮ ಪೂರ್ವ ನಿಯೋಜಿತ ಕಾರ್ಯಕ್ರಮದಲ್ಲಿದ್ದದರಿಂದ ಈ ಸಭೆಯಲ್ಲಿ ಭಾಗವಹಿಸಿಲ್ಲ. ಎಲ್ಲರೂ ಈ ಸಭೆಯ ರೂಪುರೇಷೆಗಳಿಗೆ ಬೆಂಬಲ ನೀಡಿದ್ದು, ಮಂಡ್ಯ ಜಿಲ್ಲೆಯಲ್ಲಿ ಜಲಧಾರೆ ಕಾರ್ಯಕ್ರಮ ಯಶಸ್ವಿಗೊಳಿಸಲು ಸಹಕಾರ ನೀಡಲಿದ್ದು, ಅವರಗಳು ನೇತೃತ್ವವಹಿಸಲಿದ್ದಾರೆ ಎಂದು ತಿಳಿಸಿದರು.

ಶಾಸಕರಾದ ಎಂ.ಶ್ರೀನಿವಾಸ್, ಅನ್ನದಾನಿ, ಎಂ.ಎಲ್.ಸಿ ಕೆ.ಟಿ.ಶ್ರೀಕಂಠೇಗೌಡ, ಮುಖಂಡರಾದ ಕೆ.ಆರ್.ಪೇಟೆ ಬಿ.ಎಸ್‌ದೇವರಾಜು, ದಕ್ಷಿಣ ಪದವೀಧರ ಕ್ಷೇತ್ರದ ಸಂಭವನೀಯ ಅಭ್ಯರ್ಥಿ ಹೆಚ್.ಕೆ.ರಾಮು, ಮನ್‌ಮುಲ್ ನಿರ್ದೇಶಕ ಮಂಜುನಾಥ್ ಸೇರಿದಂತೆ ಇತರರು ಇದ್ದರು.

ಏ.16, ಶ್ರೀ ಲಕ್ಷ್ಮೀದೇವಿ ಬ್ರಹ್ಮ ರಥೋತ್ಸವ

ಕೆ.ಆರ್.ಪೇಟೆ,ಏ.12– ತಾಲೂಕಿನ ಅಗ್ರಹಾರಬಾಚಹಳ್ಳಿಯ ಗ್ರಾಮದೇವತೆ ಶ್ರೀ ಲಕ್ಷ್ಮೀದೇವಿ(ಬಾಚಳ್ಳಿಯಮ್ಮ) ಅಮ್ಮನವರ ಸಿಡಿಹಬ್ಬ ಮತ್ತು ಜಾತ್ರಾ ಮಹೋತ್ಸವವು ಏ.14ರಿಂದ ಏ.18ವರೆಗೆ ನಡೆಯಲಿದೆ.ಏ.14ರಂದು ಗುರುವಾರ ರಾತ್ರಿಯಿಡೀ ರಂಗಕುಣಿತ, ಏ.15.ಶುಕ್ರವಾರ ಬೆಳಗ್ಗೆ ಹೂವಿನ ರಥೋತ್ಸವ, ಸಂಜೆ ಬಾಯಿಬೀಗ, ಸಿಡಿ, ಮಡೆ ಉತ್ಸವ, ಕೊಂಡೋತ್ಸವ, ಕನ್ನಂಕಾಡಿ ಉತ್ಸವ, ಸಿಡಿಮದ್ದು ಪ್ರದರ್ಶನ, ಕೋಲಾಟ ನಡೆಯಲಿವೆ. ಏ.16.ರಂದು ಶನಿವಾರ ಮಧ್ಯಾಹ್ನ ಶ್ರೀ ಲಕ್ಷ್ಮೀದೇವಿ(ಬಾಚಳ್ಳಿಯಮ್ಮ) ಅಮ್ಮನವರ ಬ್ರಹ್ಮ ರಥೋತ್ಸವ, ಭಕ್ತಾದಿಗಳಿಗೆ ಅನ್ನದಾನ ಕಾರ್ಯಕ್ರಮ ನಡೆಯಲಿದೆ.

ಏ.17ರಂದು ಭಾನುವಾರ ಜಾತ್ರಾ ಮಹೋತ್ಸವ, ಓಕಳಿಯಾಟ ಹಾಗೂ ದೇವರಿಗೆ ವಿಶೇಷ ಪೂಜೆ ಮಹಾಮಂಗಳಾರತಿ ನಡೆಯಲಿವೆ. ಏ.18ರಂದು ಸೋಮವಾರ ಸೋಮದೇವರ ಕುಣಿತ, ಆಯ್ದ ಮನೆಗಳಿಗೆ ಸೋಮದೇವರ ಪ್ರವೇಶ, ವಿಶೇಷ ಪೂಜೆ, ಮಹಾಮಂಗಳಾರತಿ, ಸೋಮ ದೇವರೊಂದಿಗೆ ಆಗಮಿಸಿದ ಭಕ್ತಾದಿಗಳಿಗೆ ಮಜ್ಜಿಗೆ, ಪಾನಕ, ಕೋಸಂಬರಿ ಪ್ರಸಾದ ವಿತರಣೆ ನಡೆಯಲಿವೆ.

ಅದ್ದೂರಿ ಆಚರಣೆಗೆ ಸಿದ್ಧತೆ: ಎರಡು ವರ್ಷಗಳಿಂದ ಕೋವಿಡ್–19 ಹಿನ್ನೆಲೆಯಲ್ಲಿ ರಥೋತ್ಸವ ಮತ್ತು ಜಾತ್ರಾ ಮಹೋತ್ಸವವನ್ನು ನಿಲ್ಲಿಸುವ ಮೂಲಕ ಸರ್ಕಾರದ ನಿಯಮ ಗಳನ್ನು ಪಾಲಿಸಲಾಗಿತ್ತು. ಈ ಬಾರಿ ಕೋವಿಡ್ ಇಲ್ಲದಿರುವ ಕಾರಣ ಸಿಡಿಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಇದಕ್ಕಾಗಿ ದೇವಸ್ಥಾನಕ್ಕೆ ಹಾಗೂ ಮನೆಗಳಿಗೆ ಸುಣ್ಣ ಬಣ್ಣ ಬಳಿಯುವ ಕೆಲಸದಲ್ಲಿ ಗ್ರಾಮಸ್ಥರು ನಿರತರಾಗಿದ್ದಾರೆ.

ನವೋದಯ ವಿದ್ಯಾಲಯ 6ನೇ ತರಗತಿ ಪರೀಕ್ಷಾ ಪ್ರವೇಶ ಪತ್ರ ಪಡೆದುಕೊಳ್ಳಲು ಸೂಚನೆ

ಮಂಡ್ಯ,ಏ.12– ಶಿವಾರಗುಡ್ಡದ ಜವಹಾರ್ ನವೋದಯ ವಿದ್ಯಾಲಯದಲ್ಲಿ 2022–23ನೇ ಸಾಲಿನಲ್ಲಿ 6ನೇ ತರಗತಿಯ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿರುವವರು ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರವನ್ನು ಜವಹಾರ್ ನವೋದಯ ವಿದ್ಯಾಲಯ ಸಮಿತಿಯ ವೆಬ್‌ಸೈಟ್ https://navodaya.gov.in/ ಅಥವಾ https://cbseitms.nic.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಹಿಂದೆ ಸಲ್ಲಿಸಿದ ಅರ್ಜಿ ಸಂಖ್ಯೆ ಹಾಗೂ ಪಾಸ್ವರ್ಡ್‌ಅನ್ನು ನಮೂದಿಸಿ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಪರೀಕ್ಷಾ ಪ್ರವೇಶ ಪತ್ರಕ್ಕೆ ತಮ್ಮ ಶಾಲೆಯ ಮುಖ್ಯೋಪಾಧ್ಯಾಯರ ಸಹಿಯೊಂದಿಗೆ ಪರೀಕ್ಷೆಗೆ ಹಾಜರಾಗಬೇಕೆಂದು ಎಲ್ಲಾ ಪಾಲಕರು ಹಾಗೂ ಪೋಷಕರಿಗೆ ಶಿವಾರಗುಡ್ಡದ ಜವಹಾರ್ ನವೋದಯ ವಿದ್ಯಾಲಯ ಪ್ರಾಂಶುಪಾಲರು ತಿಳಿಸಿದ್ದಾರೆ.

ಗೌಡಹಳ್ಳಿ ಬಳಿ ಅಂಡರ್‌ಪಾಸ್ ನಿರ್ಮಾಣಕ್ಕೆ ಆಗ್ರಹಿಸಿ ಪ್ರತಿಭಟನೆ



ಶ್ರೀರಂಗಪಟ್ಟಣ,ಏ.12(ವಿನಯ್‌ಕಾರೇಕುರ)– ನೂತನವಾಗಿ ನಿರ್ಮಾಣವಾಗುತ್ತಿರುವ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಗೌಡಹಳ್ಳಿ ಗ್ರಾಮದ ಬಳಿ ಅಂಡರ್‌ಪಾಸ್ ನಿರ್ಮಾಣಕ್ಕೆ ಆಗ್ರಹಿಸಿ ಮಂಗಳವಾರ ಮೈ–ಬೆಂ. ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ಮಾಡಿದರು.

ಗೌಡಹಳ್ಳಿ ಗ್ರಾಮಸ್ಥರ ನೇತೃತ್ವದಲ್ಲಿ ಮೈಸೂರು ಬೆಂಗಳೂರು ಹೆದ್ದಾರಿಯಲ್ಲಿ ಜಮಾಯಿಸಿದ ಅಕ್ಕ ಪಕ್ಕದ ಗ್ರಾಮಗಳ ನೂರಾರು ಗ್ರಾಮಸ್ಥರು ಪ್ರತಿಭಟನೆ ಬೆಂಬಲಿಸಿ ಸರ್ಕಾರ ಹಾಗೂ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರು ಸ್ಥಳಕ್ಕೆ ಬರುವಂತೆ ಆಗ್ರಹಿಸಿದರು.

ಗೌಡಹಳ್ಳಿ, ಜಕ್ಕನಹಳ್ಳಿ, ಚನ್ನನಕೆರೆ, ಹಾಲುಗೂಡು ಸೇರಿದಂತೆ ಅರಕೆರೆ ಕೋಡಿಯಾಲ ಗ್ರಾಮಗಳ ಸಂಪರ್ಕಿಸುತ್ತದೆ. ಈ ಗೌಡಹಳ್ಳಿ ಗ್ರಾಮದ ಬಳಿ ರೈತರು ಪಾಂಡವಪುರ ಸಕ್ಕರೆ ಕಾರ್ಖಾನೆಗೆ ಕಬ್ಬು ಸಾಗಿಸಲು ಹಲವು ವರ್ಷಗಳಿಂದ ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ. ಆದರೆ ಈಗ ಗೌಡಹಳ್ಳಿ ಗ್ರಾಮದ ಬಳಿ ಅಂಡರ್‌ಪಾಸ್ ಇಲ್ಲದಿರುವುದು ಸಾವಿರಾರು ರೈತರಿಗೆ ಅನಾನುಕೂಲವಾಗುತ್ತಿದೆ. ಹಾಗೂ ಹೆದ್ದಾರಿಯಲ್ಲಿ ಪುರಾತನ ಕಾಲದಿಂದ ಬಸವೇಶ್ವರ ದೇವಸ್ಥಾನವಿದ್ದು, ಮದುವೆ ಸೇರಿದಂತೆ ಹಲವು ಶುಭ ಕಾರ್ಯಕ್ರಮಗಳು ಇಲ್ಲಿ ನೆರವೇರುತ್ತದೆ. ಈಗ ಅಂಡರ್‌ಪಾಸ್ ಇಲ್ಲದಿರುವುದರಿಂದ ನಿತ್ಯ ಸಾವಿರಾರು ಜನಕ್ಕೆ ಅನಾನುಕೂಲವಾಗುತ್ತಿರುವುದರಿಂದ ತಕ್ಷಣ ಗೌಡಹಳ್ಳಿ ಗ್ರಾಮದ ಬಳಿ ಅಂಡರ್ ಪಾಸ್ ನಿರ್ಮಾಣ ಮಾಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಈ ವೇಳೆ ಜೆಡಿಎಸ್ ಮುಖಂಡ ಗೌಡಹಳ್ಳಿ ಲೋಕೇಶ್ ಮಾತನಾಡಿ, ಈ ಸಮಸ್ಯೆಯನ್ನು ಶಾಸಕ ರವೀಂದ್ರ ಶ್ರೀಕಂಠಯ್ಯನವರ ಗಮನಕ್ಕೆ ತಂದಿದ್ದೆವು. ಅವರು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರಿಗೆ ಪತ್ರದ ಮೂಲಕ ಗಮನಕ್ಕೆ ತಂದಿದ್ದಾರೆ. ನಂತರ ಎಚ್.ಡಿ. ದೇವೇಗೌಡರು ಖುದ್ದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಇಲ್ಲಿ ಅಂಡರ್ ಪಾಸ್ ಅವಶ್ಯಕತೆ ಇದ್ದು, ತಕ್ಷಣ ಅಂಡರ್ ಪಾಸ್ ಕಾಮಗಾರಿ ಪ್ರಾರಂಭಿಸುವಂತೆ ಪತ್ರ ಬರೆದು ಒತ್ತಾಯ ಮಾಡಿದ್ದಾರೆ. ಆದ್ದರಿಂದ ಕೂಡಲೇ ಮೈ–ಬೆಂ ಹೆದ್ದಾರಿಯಲ್ಲಿ ರಸ್ತೆ ನಿರ್ಮಾಣ ಮಾಡುತ್ತಿರುವ ಗುತ್ತಿಗೆದಾರ ಇಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡ ಬೇಕೆಂದು ಆಗ್ರಹಿಸಿದರು.

ಇದೇ ವೇಳೆ ಪ್ರತಿಭಟನೆ ನಡೆಯುತ್ತಿದ್ದ ಸ್ಥಳಕ್ಕೆ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಭೇಟಿ ನೀಡಿ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು.

ಜೆಡಿಎಸ್ ಮುಖಂಡರಾದ ನೆಲಮನೆ ದಯಣ್ಣ, ಗೌಡಹಳ್ಳಿ ಲೋಕೇಶ್, ಬಿ.ಆರ್. ಕೊಪ್ಪಲು ತಿಲಕ್, ಗುತ್ತಿಗೆದಾರ ಲಕ್ಷ್ಮಣ, ಭಾಸ್ಕರ್, ವೈ.ಮುಕುಂದ, ಗ್ರಾಮಸ್ಥರಾದ ಪ್ರಕಾಶ್, ರಾಜಣ್ಣ, ಸಬ್ಬನಕುಪ್ಪೆ ಪ್ರವೀಣ್, ಕೃಷ್ಣೇಗೌಡ, ಜಕ್ಕನಹಳ್ಳಿ ಬಾಲು, ಜಕ್ಕನಹಳ್ಳಿ ಗ್ರಾ.ಪಂ ಸದಸ್ಯ ಶಿವ ಮೂರ್ತಿ, ಟಿ.ಎಂ ಹೊಸೂರು ಅರಕೇಗೌಡ, ಬಿಜೆಪಿ ಜಿಲ್ಲಾ ರೈತ ಮೋರ್ಚಾ ಉಪಾಧ್ಯಕ್ಷ ಚಂದಗಾಲು ಶಂಕರ್, ಜಿ.ಟಿ.ಕೃಷ್ಣ, ಗೌಡಹಳ್ಳಿ ಮಧು ರಾಮೇಗೌಡ ಸೇರಿದಂತೆ ವಿವಿಧ ಗ್ರಾಮಸ್ಥರು ಹಾಜರಿದ್ದರು.

ಶ್ರೀರಾಮನ ಆದರ್ಶ ಪಾಲಿಸಲು ಸಲಹೆ

ಮಂಡ್ಯ,ಏ.12(ಮೋಹನ್‌ರಾಜ್)– ಪ್ರಸ್ತುತ ದಿನಗಳಲ್ಲಿ ಶ್ರೀರಾಮನ ಆದರ್ಶಗಳನ್ನು ಎಲ್ಲರೂ ಪಾಲಿಸುವುದು ಅತ್ಯವಶ್ಯ ಎಂದು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಯುವ ಮುಖಂಡ ಇಂಡವಾಳು ಸಚ್ಚಿದಾನಂದ ಹೇಳಿದರು.

ನಗರದ ಮಹಾವೀರ ವೃತ್ತದಲ್ಲಿ ಸಾಮ್ರಾಟ್ ದರ್ಶನ್ ಅಭಿಮಾನಿಗಳ ಬಳಗ, ನಂದಿನಿ ಮಿಲ್ಕ್ ಪಾರ್ಲರ್ ಮಂಡ್ಯ ಆಯೋಜಿಸಿದ್ದ ಶ್ರೀರಾಮನವಮಿ ಆಚರಣೆ ಮತ್ತು ಮಜ್ಜಿಗೆ–ಪಾನಕ ಕೋಸಂಬರಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಪಂಚದಲ್ಲೇ ಉತ್ತಮವಾದ ಧರ್ಮ ಹಿಂದೂ ಧರ್ಮ, ಹಿಂದೂಗಳ ಬದುಕಿಗೆ ಮಾರ್ಗದರ್ಶನ ಹಾಕಿಕೊಟ್ಟ ಶ್ರೀರಾಮನ ಗುಣಗಾನ ಅತ್ಯಗತ್ಯ, ನಮ್ಮ ಜೀವನದಲ್ಲೂ ಶ್ರೀರಾಮನ ತತ್ವ ಮತ್ತು ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡು ಬೆಳೆಯೋಣ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಾಮ್ರಾಟ್ ದರ್ಶನ್ ಅಭಿಮಾನಿಗಳ ಬಳಗದ ಪದಾಧಿಕಾರಿಗಳಾದ ಅಜಿತ್, ಕಿಶನ್, ಮಂಜುನಾಥ್, ಅಭಿ, ಹರೀಶ್, ಅಭಿಷೇಕ್, ನಿತಿನ್, ಕಾರ್ತಿಕ್, ಪ್ರಶಾಂತ್, ಮನು, ರಾಜು, ಭೀಮಾ, ಮದನ್ ಮತ್ತಿತರರಿದ್ದರು.




ಮಾಚನಹಳ್ಳಿ ಬಳಿ ಅಪರಿಚಿತ ಪುರುಷನ ಶವ ಪತ್ತೆ

ಮಂಡ್ಯ,ಏ.12–ಮಾಚನಹಳ್ಳಿ ಕಡೆಗಾದಂತೆ ಜಮೀನಿನ ಪಕ್ಕದ ಪಾಂಡವಪುರ ರಸ್ತೆಯ ಬದಿಯಲ್ಲಿ 40–45 ವರ್ಷದ ಅಪರಿಚಿತ ಪುರುಷನ ಮೃತದೇಹ ಪತ್ತೆಯಾಗಿದ್ದು, ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಯು ಸುಮಾರು 5.6 ಅಡಿ ಎತ್ತರ, ಕೂದಲು ಕೊಳೆತು ಅಳಿದು ಹೋಗಿದೆ, ಸಾಧಾರಣ ಮೈಕಟ್ಟು, ದುಂಡು ಮುಖ ಹೊಂದಿರುತ್ತಾರೆ. ಬಲಗೈನಲ್ಲಿ ಅಮ್ಮ, ಬಿಂದು ಎಡಗೈಯಲ್ಲಿ ಅಪ್ಪ, ದಾಸಪ್ಪ, ಹರ್ಷ ಎಂದು ಹಚ್ಚೆಗಳು ಇರುತ್ತದೆ. ಮೃತ ವಾರಸುದಾರರು ಇದ್ದಲ್ಲಿ ಶಿವಳ್ಳಿ ಠಾಣೆಯನ್ನು ಸಂಪರ್ಕಿಸಬಹುದೆಂದು ಸಬ್ ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

ತಿ.ನರಸೀಪುರ: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



ತಿ.ನರಸೀಪುರ, ಏ.12(ಎಸ್‌ಕೆ)– ರೈತರ ಪಂಪ್ ಸೆಟ್‌ಗಳಿಗೆ ಹಗಲಿನ ವೇಳೆ ನಿರಂತರ 7 ಗಂಟೆ ವಿದ್ಯುತ್ ನೀಡಬೇಕು, ಉಪನೋಂದಣಾಧಿಕಾರಿ ಕಚೇರಿಯನ್ನು ಮೇಲಂತಸ್ತಿನಿಂದ ಕೆಳ ಅಂತಸ್ತಿಗೆ ವರ್ಗಾವಣೆ ಮಾಡಬೇಕು, ತಾಲೂಕಿನಲ್ಲಿ ನಡೆಯುತ್ತಿರುವ ನಕಲಿ ರಸಗೊಬ್ಬರ ಮಾರಾಟ ತಡೆಗಟ್ಟಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ಜಮಾಯಿಸಿದ ರೈತರು ತಾಲೂಕು ಆಡಳಿತ ಹಾಗೂ ಚೆಸ್ಕಾಂ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಪಡಿಸಿದರು. ಅಲ್ಲದೇ ಈ ವೇಳೆ ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಗಿರಿಜಾ ಅವರನ್ನು ಹಿಗ್ಗಾಮುಗ್ಗಾ ತರಾಟೆ ತೆಗೆದುಕೊಂಡ ರೈತ ಮುಖಂಡರು ಬೇಡಿಕೆ ಈಡೇರಿಸದಿದ್ದರೆ ತಾಲೂಕು ಕಚೇರಿಗೆ ಬೀಗ ಜಡಿಯುವ ಎಚ್ಚರಿಕೆ ನೀಡಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಉಪ ನೋಂದಣಾಧಿಕಾರಿ ಕಚೇರಿ ಮೇಲಂತಸ್ತಿನಲ್ಲಿದ್ದು, ವಯೋವೃದ್ಧರು, ಗರ್ಭಿಣಿಯರು, ಅನಾರೋಗ್ಯ ಪೀಡಿತರಿಗೆ ಆಸ್ತಿ ನೋಂದಣಿ, ಮಾರಾಟ ಮಾಡಲು, ಮತ್ತಿತರೆ ದಾಖಲಾತಿ ಪಡೆಯಲು ತೀವ್ರ ತೊಂದರೆಯಾಗಿದೆ. ಕಚೇರಿಯಲ್ಲಿ ಲಿಫ್ಟ್ ಇಲ್ಲದ ಪರಿಣಾಮ ಮಹಡಿ ಮೇಲಿನ ನೋಂದಣಾಧಿಕಾರಿ ಕಚೇರಿಗೆ ಮೆಟ್ಟಿಲುಗಳ ಮೂಲಕ ಹತ್ತಲು ತೀವ್ರ ತೊಂದರೆಯುಂಟಾಗಿದೆ. ಇದನ್ನು ಗಮನಿಸಿ ರೈತ ಸಂಘ ಕಚೇರಿಯನ್ನು ಕೆಳ ಮಹಡಿಗೆ ವರ್ಗಾಯಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ತಾಲೂಕು ಆಡಳಿತಕ್ಕೆ ಅನೇಕ ಬಾರಿ ಮನವಿ ಸಲ್ಲಿಸಿದ್ದರೂ, ತಹಸೀಲ್ದಾರ್ ಯಾವುದೇ ಕ್ರಮ ಕೈಗೊಳ್ಳದೇ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಕಚೇರಿ ವರ್ಗಾವಣೆಗೆ ಜಿಲ್ಲಾಧಿಕಾರಿಗಳ ಅನುಮತಿಗೆ ಪತ್ರ ವ್ಯವಹಾರ ಮಾಡಲಾಗಿದೆ ಎಂಬ ಸ್ಥಳದಲ್ಲಿದ್ದ ತಹಸೀಲ್ದಾರ್ ಗಿರಿಜಾ ಅವರ ಉತ್ತರಕ್ಕೆ ಗರಂ ಆದ ಮುಖಂಡ ದೇವರಾಜ್, 3 ತಿಂಗಳಿಂದ ಇದೇ ಉತ್ತರ ನೀಡುತ್ತಿದ್ದೀರಿ, ತಾಲೂಕಿನ ಎಲ್ಲಾ ಇಲಾಖೆಗೂ ಮುಖ್ಯಸ್ಥರಾಗಿರುವ ನೀವು ನಿಮ್ಮ ಅಧಿಕಾರ ಬಳಸಿ ನೋಂದಣಿ ಕಚೇರಿ ಬದಲಾಯಿಸಬೇಕು. ಅದನ್ನು ಬಿಟ್ಟು ಜಿಲ್ಲಾಧಿಕಾರಿ ಅನುಮತಿಗೆ ಕಾಯುತ್ತಿದ್ದೇನೆ ಎಂಬ ಬೇಜವಾಬ್ದಾರಿ ಉತ್ತರ ನೀಡಬಾರದು. ತಾಲೂಕಿನ ದಂಡಾಧಿಕಾರಿಯಾಗಿರುವ ನೀವು ಒಂದು ಸಣ್ಣ ಕೆಲಸ ಮಾಡಲಾಗದಿದ್ದ ಮೇಲೆ ತಹಸೀಲ್ದಾರ್ ಆಗಿ ಸರಿಯಾಗಿ ಜವಾಬ್ದಾರಿ ನಿರ್ವಹಿಸುತ್ತಿಲ್ಲ ಎಂದೇ ಅರ್ಥೈಸಬೇಕಾಗುತ್ತದೆ. ಕುಂಟು ನೆಪ ಹೇಳದೇ ಕೂಡಲೇ ಉಪ ನೋಂದಣಾಧಿಕಾರಿ ಕಚೇರಿ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಈ ವೇಳೆ ರೈತರ ಒತ್ತಾಯಕ್ಕೆ ಮಣಿದ ತಹಸೀಲ್ದಾರ್ ಕಚೇರಿ ವರ್ಗಾವಣೆಗೆ ಒಂದು ವಾರ ಸಮಯಾಕಾಶ ಕೊಡುವಂತೆ ಮನವಿ ಮಾಡಿದರು.

ತಾಲೂಕಿನಲ್ಲಿ ರೈತರಿಗೆ ಸಂಬಂಧಿಸಿದ ನೂರಾರು ಸಮಸ್ಯೆಗಳಿವೆ. ಆದರೆ ಅವುಗಳನ್ನು ಹೇಳಿಕೊಳ್ಳಲು ರೈತರ ಕುಂದು ಕೊರತೆ ಸಭೆಯನ್ನೇ ಕರೆಯದೇ ಕಾಲಹರಣ ಮಾಡುತ್ತಿದ್ದೀರಾ ಎಂಬ ರೈತರ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ತಹಸೀಲ್ದಾರ್ ಕೋವಿಡ್ ಹಿನ್ನೆಲೆಯಲ್ಲಿ ಸಭೆ ಕರೆಯಲಾಗಿರಲಿಲ್ಲ ಎಂದು ಅಸಮಂಜಸ ಉತ್ತರ ನೀಡುತ್ತಿದ್ದಂತೆ ಕೆರಳಿದ ದೇವರಾಜ್ ರಾಷ್ಟ್ರೀಯ ಹಬ್ಬಗಳನ್ನು ಸಾರ್ವಜನಿಕರೊಂದಿಗೆ ಆಚರಣೆ ಮಾಡಿದ್ದೀರಿ, ಅದಕ್ಕೆ ಸಂಬಂಧಿಸಿದ ಪೂರ್ವಭಾವಿ ಸಭೆ ನಡೆಸಿದ್ದೀರಿ. ಇದಕ್ಕೆಲ್ಲಾ ಕೋವಿಡ್ ಅಡ್ಡ ಬರಲಿಲ್ಲವೇ, ಇಲ್ಲಸಲ್ಲದ ನೆಪ ಹೇಳುವುದನ್ನು ಬಿಟ್ಟು ಮೊದಲು ರೈತರ ಕುಂದುಕೊರತೆ ಸಭೆ ಕರೆಯಿರಿ ಎಂದು ಆಗ್ರಹಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್ ಮಾತನಾಡಿ, ರೈತರ ಪಂಪ್ ಸೆಟ್‌ಗಳಿಗೆ ಹಗಲು ಹೊತ್ತು ನಿರಂತರವಾಗಿ 7 ಗಂಟೆ ವಿದ್ಯುತ್ ಪೂರೈಕೆ ಮಾಡಬೇಕು. ರಾತ್ರಿ ವೇಳೆ ವಿದ್ಯುತ್ ನೀಡಿದರೆ ಪ್ರಯೋಜನವಿಲ್ಲ. ಕಾಡಂಚಿನ ಜಮೀನಿನಲ್ಲಿ ಚಿರತೆ ಹಾವಳಿಯಿಂದಾಗಿ ರಾತ್ರಿ ವೇಳೆ ವ್ಯವಸಾಯ ಮಾಡಲು ಸಾಧ್ಯವಿಲ್ಲ ಎಂದರು.

ತಾಲೂಕಿನಲ್ಲಿ ನಕಲಿ ಗೊಬ್ಬರ ಮಾರಾಟ ಮಾಡಲಾಗುತ್ತಿದ್ದು, ಕೂಡಲೇ ನಕಲಿ ಮಾರಾಟಗಾರರನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಜರುಗಿಸಬೇಕು ಹಾಗೂ ಜಮೀನುಗಳ ಮೇಲೆ ವಿದ್ಯುತ್ ಕಂಬಗಳು ಹಾದು ಹೋಗಿದ್ದು, ವಿದ್ಯುತ್ ತಂತಿಗಳಿಂದ ಆಕಸ್ಮಿಕ ಬೆಂಕಿ ತಗುಲಿ ಬೆಳೆ ನಷ್ಟವಾಗುತ್ತಿದ್ದು, ಸೆಸ್ಕ್‌ನವರು ಕೂಡಲೇ ಜಮೀನಿನ ಮೇಲೆ ಹಾದು ಹೋಗಿರುವ ವಿದ್ಯುತ್ ತಂತಿಗಳನ್ನು ತೆರವುಗೊಳಿಸಿ ರೈತರ ಹಿತ ಕಾಯುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ಪ್ರಧಾನ ಕಾರ್ಯದರ್ಶಿ ಕಿರಗಸೂರು ಪ್ರಸಾದ್ ನಾಯಕ್, ಕಾರ್ಯದರ್ಶಿ ಗೌರಿಶಂಕರ್, ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ನಂಜನಗೂಡು ತಾಲೂಕು ಅಧ್ಯಕ್ಷ ಹಾಡ್ಯ ರವಿ, ಪ್ರಧಾನ ಕಾರ್ಯದರ್ಶಿ ಕಿರಗಸೂರು ಪ್ರಸಾದ್ ನಾಯಕ್, ಕಾರ್ಯದರ್ಶಿ ಗೌರಿಶಂಕರ್, ಯೋಗೇಶ್ ಮಂಜು, ಪಪ್ಪು, ಗುರುಸ್ವಾಮಿ, ನಿಂಗರಾಜು, ಬನ್ನಹಳ್ಳಿಹುಂಡಿ ರಾಜೇಂದ್ರ, ರವಿ, ಮಲ್ಲೇಶ್, ಸುರೇಶ್, ಗದ್ದೆಮೋಳೆ ಸಿದ್ದರಾಜು ಸುರೇಶ್, ನಿಂಗಣ್ಣ, ಅರುಣ್, ರೂಪ, ನಾಗರಾಜ, ಹಿರಿಯೂರು ನವೀನ್, ಲೋಕೇಶ್, ಸುರೇಶ್ ಮತ್ತಿತರರಿದ್ದರು.

ಕ್ಷಮೆ ಕೇಳಿದ ಬ್ಯಾಂಕ್ ವ್ಯವಸ್ಥಾಪಕ

ರೈತರು ಬ್ಯಾಂಕಿನಿಂದ ಪಡೆದ ಸಾಲದ ಹಣಕ್ಕೆ ಪ್ರಧಾನ್ ಮಂತ್ರಿ ಕಿಸಾನ್ ಯೋಜನೆ ಹಣ ಜಮಾ ಮಾಡಿಕೊಳ್ಳಲಾಗುತ್ತಿದ್ದು, ಇದನ್ನು ಪ್ರಶ್ನಿಸಿದರೆ ಮ್ಯಾನೇಜರ್ ರೈತರ ಬಗ್ಗೆ ಕೇವಲವಾಗಿ ಮಾತನಾಡುತ್ತಾರೆ ಎಂದು ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಬಂದ ವ್ಯವಸ್ಥಾಪಕನ ವಿರುದ್ಧ ಧಿಕ್ಕಾರ ಕೂಗಲಾಯಿತು. ಈ ವೇಳೆ ಆಗಿರುವ ಪ್ರಮಾದಕ್ಕೆ ಮ್ಯಾನೇಜರ್ ವಿಷಾದಿಸಿ ಕ್ಷಮೆಯಾಚಿಸಿದರು.

ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಒತ್ತು: ಶಾಸಕ ಬಿ.ಹರ್ಷವರ್ಧನ್



ಮಲ್ಕುಂಡಿ, ಏ.12(ಚನ್ನಪ್ಪ)– ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.


ನಂಜನಗೂಡು ತಾಲೂಕಿನ ಸಿಂಧುವಳ್ಳಿಯಿಂದ ಕುಂಬ್ರಳ್ಳಿವರೆಗೆ ಕೆಆರ್‌ಐಡಿಪಿಎಲ್‌ನಿಂದ 10 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಹಾಗೂ ಎನ್‌ಹೆಚ್ ರಸ್ತೆಯಿಂದ ನಾಗು ನಾಲೆ ಮಾರ್ಗವಾಗಿ ಸಿಂಧುವಳ್ಳಿಗೆ ಸಂಪರ್ಕ ಕಲ್ಪಿಸುವ 10 ಲಕ್ಷ ರೂ ವೆಚ್ಚದ ರಸ್ತೆ ಅಭಿವೃದ್ಧಿ ಹಾಗೂ ಮುದ್ದಹಳ್ಳಿ ಗ್ರಾಮದಲ್ಲಿ ನಿರ್ಮಿತಿ ಕೇಂದ್ರದಿಂದ 16 ಲಕ್ಷ ರೂ. ವೆಚ್ಚದ ಶಾಲಾ ಕೊಠಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಪಕ್ಷ ಬೇಧ ಮರೆತು ಜಾತ್ಯತೀತವಾಗಿ ಅನುದಾನ ತಂದು ಅಭಿವೃದ್ಧಿಗೆ ಚಾಲನೆ ನೀಡುತ್ತಿದ್ದೇನೆ. ಇನ್ನುಳಿದ ಕಾಮಗಾರಿಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸುತ್ತೇನೆ. ನಾನು ಶಾಸಕನಾದ ಮೇಲೆ ಪ್ರತಿ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇನೆ ಎಂದರು.

ಈ ವೇಳೆ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುಬ್ಬಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಸದಸ್ಯ ರಾಮು, ಮುಖಂಡರಾದ ಪುಟ್ಟಸ್ವಾಮಿ, ಎಸ್.ಬಸವರಾಜು, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಶಿವಣ್ಣ, ಬಸವರಾಜ್ ಸೇರಿದಂತೆ ಇತರರಿದ್ದರು.

ಏ.15ರಂದು ವಿದ್ಯುತ್ ವ್ಯತ್ಯಯ

ಬನ್ನೂರು, ಏ.12(ಪ್ರಭು)– ತುರ್ತು ಕಾರ್ಯ ನಿರ್ವಹಣೆ ಹಿನ್ನೆಲೆಯಲ್ಲಿ ಏ.15ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಬನ್ನೂರು, ಚಾಮನಹಳ್ಳಿ, ಸಂತೇಮಾಳ, ಚಾಮನಹಳ್ಳಿ ಕೊಪ್ಪಲು, ಹಿಟ್ಟುವಳ್ಳಿ, ರಂಗ ಸಮುದ್ರ, ಯಳವೇಗೌಡನ ಹುಂಡಿ, ಮಾದೇಗೌಡನಹುಂಡಿ, ಪಟ್ಟೆಹುಂಡಿ, ಲಕ್ಷ್ಮೀಪುರ, ಹುನುಗನಹಳ್ಳಿ, ರಂಗಚಾರಿಹುಂಡಿ, ರಂಗನಾಥಪುರ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹುಣಸೂರು: ನೀರಾವರಿ ಇಲಾಖೆಯ ವಿವಿಧ ಕಾಮಗಾರಿಗೆ ಶಾಸಕರಿಂದ ಚಾಲನೆ



ಹುಣಸೂರು, ಏ.12(ಕೆಕೆ)– ನೀರಾವರಿ ಇಲಾಖೆಯ 132.51 ಲಕ್ಷ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಉಳಿದ ಕಾಮಗಾರಿಗಳನ್ನು ಮುಂದಿನ ದಿನಗಳಲ್ಲಿ ಬೇರೆ ಮೂಲಗಳಿಂದ ಪೂರ್ಣಗೊಳಿಸಲಾಗುವುದು. ವಿವಿಧ ಇಲಾಖೆಗಳಿಂದ ತಾಲೂಕಿಗೆ ಸಾಕಷ್ಟು ಅನುದಾನ ಮಂಜೂರಾಗಿದ್ದು, ಗ್ರಾಮೀಣ ಜನರಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಸಾಕಷ್ಟು ಕೆಲಸ ಮಾಡಿರುವ ತೃಪ್ತಿ ನನಗಿದೆ. ಈ ದಿನ ಸಿದ್ದಲಿಂಗಪುರದಿಂದ ಕುಟ್ಟವಾಡಿ ಅಂಬೇಡ್ಕರ್ ನಗರಕ್ಕೆ 18 ಲಕ್ಷ, ಕಾಳೇನಹಳ್ಳಿಯಿಂದ ಹೊಸವಾರಂಚಿಗೆ ಡಾಂಬರ್ ರಸ್ತೆಗೆ 49 ಲಕ್ಷ, ಹುಣಸೂರು–ಹೆಚ್.ಡಿ.ಕೋಟೆ ರಸ್ತೆಯಿಂದ ಹುಣಸೇಕಟ್ಟೆ ಗ್ರಾಮದ ರಸ್ತೆಗಾಗಿ 19 ಲಕ್ಷ, ಚಿಕ್ಕಬಲ್ಲೇನಹಳ್ಳಿ ಗ್ರಾಮದ ಕಾಂಕ್ರೀಟ್ ರಸ್ತೆಗೆ 15 ಲಕ್ಷ, ಸಿದ್ದಲಿಂಗಪುರ ಗ್ರಾಮದಿಂದ ಹೆಬ್ಬಾಳ ಗ್ರಾಮದ ರಸ್ತೆಗೆ 16.51 ಲಕ್ಷ ಹಾಗೂ ದಾಸನಪುರ ಪಿಕಪ್ ನಾಲೆಯಿಂದ ತರಿಕಲ್ ಕಾವಲ್ ಅಚ್ಚುಕಟ್ಟು ಪ್ರದೇಶದ ರಸ್ತೆ ನಿರ್ಮಾಣಕ್ಕೆ 15 ಲಕ್ಷ ಸೇರಿದಂತೆ ಒಟ್ಟು 132.51 ಲಕ್ಷ ರೂ.ಗಳ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ವಿವರಿಸಿದರು.

ಜಿಲ್ಲಾ ರೈತ ಸಂಘದ ಅಧ್ಯಕ್ಷ ಕುಮಾರ್ ಮಾತನಾಡಿ, ಶಾಸಕರು ಕ್ಷೇತ್ರದ ಜನತೆಯ ಹಿತಾಸಕ್ತಿ ಅರಿತು ಕೆಲಸ ಮಾಡಿರುವುದು ಶ್ಲಾಘನೀಯ. ತಾಲೂಕಿನ 49 ಕೆರೆಗಳಿಗೆ ನದಿಯಿಂದ ನೀರು ತುಂಬಿಸುವ ಕೆಲಸವನ್ನು ಶ್ರದ್ಧೆ ವಹಿಸಿ ಪ್ರಾಮಾಣಿಕವಾಗಿ ಮಾಡುವ ಮೂಲಕ ಬೇಸಿಗೆ ದಿನಗಳಲ್ಲಿ ಜನ ಜಾನುವಾರುಗಳಿಗೆ ನೀರಿನ ಹಾಹಾಕಾರ ನೀಗಿಸಿದ್ದಾರೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ರಾಧಮ್ಮ, ಉಪಾಧ್ಯಕ್ಷ ಚಂದ್ರಶೇಖರ, ಮಾಜಿ ಅಧ್ಯಕ್ಷ ಪ್ರಶಾಂತ್, ಕಾಂಗ್ರೆಸ್ ಮುಖಂಡ ಮಹದೇವು, ನೀರಾವರಿ ಇಇ ಪ್ರಶಾಂತ್, ಪಿಡಿಓ ಮಂಜುಳಾ ಮತ್ತಿತರರಿದ್ದರು.

ಮಾಂಸ, ಮದ್ಯದಂಗಡಿ ಬಂದ್‌ಗೆ ಒತ್ತಾಯ

ಹೆಚ್.ಡಿ.ಕೋಟೆ, ಏ.12(ಮಂಜು)– ಅಂಬೇಡ್ಕರ್ ಜಯಂತಿಯಂದು ಮಾಂಸದಂಗಡಿ ಹಾಗೂ ಮದ್ಯದಂಗಡಿಗಳನ್ನು ಬಂದ್ ಮಾಡಿಸುವಂತೆ ಜಿಲ್ಲಾ ಸಂಘಟನಾ ಸಂಚಾಲಕ ಚಾ.ಶಿವಕುಮಾರ್ ಒತ್ತಾಯಿಸಿದರು.

ಪಟ್ಟಣದ ತಾಲೂಕು ಪತ್ರಕರ್ತರ ಸಂಘದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.14ರಂದು ನಡೆಯುವ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿಯನ್ನು ದೇಶ, ವಿದೇಶದಲ್ಲಿ ವಿಜೃಂಭಣೆಯಿಂದ ವಿಶ್ವಜ್ಞಾನ ದಿನವನ್ನಾಗಿ ಆಚರಿಸುತ್ತೇವೆ. ಆದ್ದರಿಂದ ಇಂತಹ ಸುದಿನದಂದು ಹೆಚ್.ಡಿ.ಕೋಟೆ ತಾಲೂಕಾದ್ಯಂತ ಒಂದು ದಿನದ ಮಟ್ಟಿಗೆ ಮಾಂಸದಂಗಡಿ ಹಾಗೂ ಮದ್ಯದಂಗಡಿಗಳನ್ನು ಬಂದ್ ಮಾಡಿಸುವ ಮೂಲಕ ಅವರ ಜಯಂತಿಗೆ ಅರ್ಥ ಬರುವಂತೆ ತಾಲೂಕು ಆಡಳಿತ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಹಸೀಲ್ದಾರ್ ರತ್ನಾಂಬಿಕ ಅವರಿಗೆ ಮನವಿ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಜ್ಞಾನಜ್ಯೋತಿ ಡಾ.ಬಿ.ಆರ್.ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ರಾಜಪ್ಪ, ನಂಜುಂಡಸ್ವಾಮಿ, ಉಪಾಧ್ಯಕ್ಷ ಕೆಂಪರಾಜು ಕಾರ್ಯದರ್ಶಿ, ಶಿವಮಲ್ಲು ಖಜಾಂಚಿ, ಗ್ರಾಪಂ ಸದಸ್ಯ ಸ್ವಾಮಿ ಉಪಸ್ಥಿತರಿದ್ದರು.

ಶ್ರೀರಾಮ ಸಕ್ಕರೆ ಕಾರ್ಖಾನೆಯಲ್ಲಿ ಸ್ಥಳೀಯ ನಿರುದ್ಯೋಗಿ ಯುವಕರಿಗೆ ಆದ್ಯತೆ ನೀಡುವಂತೆ ಮನವಿ



ಚುಂಚನಕಟ್ಟೆ, ಏ.12(ಮಧು)– ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ಪುನರಾರಂಭಿಸುತ್ತಿರುವ ನಿರಾಣಿ ಶುಗರ್ಸ್‌ನವರು ಸ್ಥಳೀಯ ನಿರುದ್ಯೋಗಿ ಯುವಕರನ್ನು ಕೆಲಸಕ್ಕೆ ತೆಗೆದುಕೊಳ್ಳು ವಂತೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ತಿಮ್ಮಪ್ಪ ಮನವಿ ಮಾಡಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ಆವರಣದಲ್ಲಿ ನಿರಾಣಿ ಶುಗರ್ಸ್ ವ್ಯವಸ್ಥಾಪಕ ಶಿವಾನಂದ ಯರಗಟ್ಟಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಮಾತನಾಡಿದ ಅವರು, ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನ ಜೀವನಾಡಿಯಾಗಿರುವ ಈ ಕಾರ್ಖಾನೆ ಆರಂಭವಾಗುತ್ತಿರುವುದು ಸಂತಸದ ವಿಚಾರ. ಸ್ಥಳೀಯ ಯುವಕರಿಗೆ ಅವರ ವಿದ್ಯಾರ್ಹತೆಗೆ ಅನುಗುಣವಾಗಿ ಕೆಲಸ ನೀಡಿದರೆ ಈ ಭಾಗದ ರೈತರ ಕುಟುಂಬಗಳಿಗೆ ಸಾಕಷ್ಟು ಸಹಾಯವಾಗಲಿದೆ ಎಂದರು.

ಮನವಿ ಸ್ವೀಕರಿಸಿದ ನಿರಾಣಿ ಶುಗರ್ಸ್‌ನ ಶಿವಾನಂದ ಯರಗಟ್ಟಿ ಮಾತನಾಡಿ, ನಮ್ಮ ಆದ್ಯತೆಯೂ ಇದೇ ಆಗಿದ್ದು, ಸ್ಥಳೀಯರಿಗೆ ಮೊದಲ ಆದ್ಯತೆಯಾಗಿದೆ. ಅವರಲ್ಲಿ ನುರಿತ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮಾತ್ರ ಹೊರಗಿನವರಿಗೆ ಕೆಲಸ ನೀಡಲಿದ್ದು ಸ್ಥಳೀಯರನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ ಎಂದು ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ರೈತ ಮುಖಂಡರು, ಸರ್ಕಾರ ಆದಷ್ಟು ಬೇಗ ನೋಂದಣಿ ಪ್ರಕ್ರಿಯೆ ಮುಗಿಸಿ ಕಾರ್ಖಾನೆ ಆರಂಭಿಸಲು ಅನುವು ಮಾಡಬೇಕು. ಅದರಂತೆ ತಾಲೂಕಿನಲ್ಲಿ ವಿದ್ಯುತ್ ವ್ಯತ್ಯಯ ಹೆಚ್ಚಾಗುತ್ತಿದ್ದು, ಸಂಘದಿಂದ ಪ್ರತಿಭಟನೆ ನಡೆದ ಸಮಯದಲ್ಲಿ ಮಾತ್ರ ಕೆಲದಿನಗಳು ಸರಿಯಾಗಿ ವಿದ್ಯುತ್ ನೀಡಿ ನಂತರ ಯಾಥಾಸ್ಥಿತಿ ಮುಂದುವರೆಯುತ್ತಿದ್ದು, ರೈತರು ಪಡಿಪಾಟಲು ಪಡುವಂತಾಗಿದೆ ಎಂದು ಆರೋಪಿಸಿದರು.

ಈ ಸಂದರ್ಭ ಜಿಲ್ಲಾ ಉಪಾಧ್ಯಕ್ಷ ವಿಶ್ವಾಸ್, ತಾಲೂಕು ಅಧ್ಯಕ್ಷ ಶಿವರಾಜ್, ಜಿಲ್ಲಾ ಗೌರವಾಧ್ಯಕ್ಷ ಜನಾರ್ಧನ್, ಸದಸ್ಯರಾದ ರಂಗಸ್ವಾಮಿ, ಮಂಜುನಾಥ್, ನಿರಾಣಿ ಶುಗರ್ಸ್‌ನ ಶ್ರೀನಿವಾಸ್ ಹಾಜರಿದ್ದರು.

ಸಂಯುಕ್ತ ಹೋರಾಟ-ಕರ್ನಾಟಕ ವಾರದ ಹೋರಾಟಕ್ಕೆ ವಿದ್ಯುಕ್ತ ಚಾಲನೆ

ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ಖಾತರಿ ಸಂಬಂಧ ಕಾಯ್ದೆ ತನ್ನಿ

ಸಂಯುಕ್ತ ಕಿಸಾನ್ ಮೋರ್ಚಾದ ಸಂಚಾಲಕ ಯೋಗೇಂದ್ರ ಯಾದವ್ ಒತ್ತಾಯ



ಮೈಸೂರಿನ ಕಲಾಮಂದಿರದಲ್ಲಿ ರೈತರ ವಾರದ ಹೋರಾಟಕ್ಕೆ ಮೊರದಲ್ಲಿ ರಾಗಿ ತೂರುವ ಮೂಲಕ ಸಂಯುಕ್ತ ಕಿಸಾನ್ ಮೋರ್ಚಾದ ಸಂಚಾಲಕ ಯೋಗೇಂದ್ರ ಯಾದವ್ ಮಂಗಳವಾರ ಚಾಲನೆ ನೀಡಿದರು.

ಮೈಸೂರು,ಏ.12(ಪಿಎಂ)-ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಪಡಿಸುವ ಸಂಬಂಧ ಕಾಯ್ದೆ ರೂಪಿಸಿ, ಜಾರಿಗೊಳಿಸಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಸಂಚಾಲಕ ಯೋಗೇಂದ್ರ ಯಾದವ್ ಒತ್ತಾಯಿಸಿದರು.

ಸಂಯುಕ್ತ ಹೋರಾಟ-ಕರ್ನಾಟಕ ವತಿಯಿಂದ ರೈತರ ಬೆಳೆಗಳಿಗೆ ಬೆಲೆ ಖಾತ್ರಿಗೊಳಿಸಲು ಒತ್ತಾಯಿಸಿ ರಾಜ್ಯದಲ್ಲಿ ಹಮ್ಮಿಕೊಂಡಿರುವ ವಾರದ ಹೋರಾಟ; ಪ್ರತಿಭಟನೆ-ವಿಚಾರ ಗೋಷ್ಠಿ'ಗೆ ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಧಾನ್ಯವನ್ನು ಮೊರದಲ್ಲಿ ತೂರುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಸರ್ಕಾರ ಘೋಷಣೆ ಮಾಡಿರುವ ಎಂಎಸ್‌ಪಿ ದರಕ್ಕಿಂತ ಕಡಿಮೆ ಬೆಲೆಗೆ ಧಾನ್ಯಗಳನ್ನು ಖರೀದಿಸಲಾಗುತ್ತಿದೆ. ಸರ್ಕಾರ ಕೇವಲ ಘೋಷಣೆಗೆ ಸೀಮಿತಗೊಂಡಿದೆ. ರೈತರು ಕನಿಷ್ಠ ಬೆಂಬಲ ಬೆಲೆ ಪಡೆಯುವುದನ್ನು ಖಾತ್ರಿಪಡಿಸಲು ಈ ಸಂಬಂಧ ಕಾಯ್ದೆ ರೂಪಿಸಿ, ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಎಂಎಸ್‌ಪಿಯನ್ನು 23 ಬೆಳೆಗಳಿಗೆ ವರ್ಷದಲ್ಲಿ ಎರಡು ಬಾರಿ ಪ್ರಕಟಿಸಲಾಗುತ್ತಿದ್ದು, ರೈತರ ಉತ್ಪನ್ನಗಳಿಗೆ ಘೋಷಿಸಿದ ಎಂಎಸ್‌ಪಿ ದರ ದೊರೆಯುವಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಆದರೆ ಇಂದು ದೇಶದಲ್ಲಿ ಎಲ್ಲಿಯೂ ಕನಿಷ್ಠ ಬೆಂಬಲ ಬೆಲೆ ದೊರೆಯುತ್ತಿಲ್ಲ. ಉದಾಹರಣೆಗೆ ಭತ್ತಕ್ಕೆ 1,940 ರೂ. ಎಂಎಸ್‌ಪಿ ದರ (ಕ್ವಿಂಟಾಲ್‌ಗೆ) ನಿಗದಿ ಮಾಡಲಾಗಿದೆ. ಆದರೆ ಈಗ ಕೇವಲ 1,400 ರೂ.ಗೆ ಖರೀದಿಸಲಾಗುತ್ತಿದೆ. ಅದೇ ರೀತಿ ರಾಗಿಗೆ ಎಂಎಸ್‌ಪಿ ದರ 3,377 ರೂ. ಇದೆ. ಆದರೆ 1,800 ರಿಂದ 1,900 ರೂ.ಗೆ ಖರೀದಿ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಎಂಎಸ್‌ಪಿ ನಿಗದಿ ವೈಜ್ಞಾನಿಕವಾಗಿರಬೇಕು: ಕೇವಲ 23 ಕೃಷಿ ಉತ್ಪನ್ನಗಳಿಗೆ ಮಾತ್ರ ಎಂಎಸ್‌ಪಿ ಸೀಮಿತಗೊಳಿಸದೇ ಹಣ್ಣು, ತರಕಾರಿ, ಹಾಲು ಸೇರಿದಂತೆ ರೈತರ ಎಲ್ಲಾ ಉತ್ಪನ್ನಗಳಿಗೂ ವಿಸ್ತರಣೆ ಮಾಡಬೇಕು. ಜೊತೆಗೆ ಎಂಎಸ್‌ಪಿ ದರವನ್ನು ಅವೈಜ್ಞಾನಿಕವಾಗಿ ನಿಗದಿ ಮಾಡಬಾರದು. ವೆಚ್ಚ ಆಯೋಗ ಪ್ರತಿ ಬೆಳೆ ಬೆಳೆಯಲು ವೆಚ್ಚವನ್ನು ಅಂದಾಜು ಮಾಡಿರುವುದನ್ನು ಈ ಸಂದರ್ಭದಲ್ಲಿ ಪರಿಗಣಿಸಬೇಕು. ಜೊತೆಗೆ ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸ್ಸುಗಳನ್ನು ಪರಿಗಣಿಸಿ, ಉತ್ಪಾದನಾ ವೆಚ್ಚಕ್ಕೆ ಒಂದೂವರೆ ಪಟ್ಟು ಹೆಚ್ಚು ಇರುವಂತೆ ಎಂಎಸ್‌ಪಿ ದರ ನಿಗದಿ ಮಾಡಬೇಕು ಎಂದು ಆಗ್ರಹಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು ಎಂಎಸ್‌ಪಿ ದರ ಹಿಂದೆಯೂ ಇತ್ತು, ಈಗಲೂ ಇದ್ದು, ಮುಂದೆಯೂ ಇರಲಿದೆ ಎಂದು ಹೇಳಿಕೆ ನೀಡಿದ್ದಾರೆ. ಆದರೆ ಅದು ಕೇವಲ ಪೇಪರ್‌ನಲ್ಲಿ ಉಳಿಯುವಂತಾಗಿದೆ. ಅದನ್ನು ವಾಸ್ತವಕ್ಕೆ ತರಬೇಕು ಎಂಬುದು ನಮ್ಮ ಆಗ್ರಹ. ಟ್ರ್ಯಾಕ್ಟರ್, ಟಿಲ್ಲರ್ ಸೇರಿದಂತೆ ಕೃಷಿ ಯಂತ್ರೋಪಕರಣ ಖರೀದಿಯಲ್ಲಿ ರೈತರಿಂದ ದುಪ್ಪಟ್ಟು ಹಣ ವಸೂಲಿ ಮಾಡಿ, ವಂಚಿಸಲಾಗುತ್ತಿದೆ. ಹೀಗಾಗಿ ಕೃಷಿ ಯಂತ್ರೋಪಕರಣ ಸಂಬಂಧ ಗರಿಷ್ಠ ಮಾರಾಟ ದರ ನಿಗದಿ ಮಾಡಿ, ಅದರಂತೆ ಮಾರಾಟ ಮಾಡಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ರಾಜಕೀಯ ಇಚ್ಛಾಶಕ್ತಿ ಬೇಕು: ನಾವು ಎಲ್ಲಾ ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ದರ ನಿಗದಿ ಮಾಡುವಂತೆ ಬೇಡಿಕೆ ಮುಂದಿಟ್ಟರೆ, ನೀತಿ ನಿರೂಪಕರು, ಸರ್ಕಾರದ ಪ್ರತಿನಿಧಿಗಳು ಅದು ಕಷ್ಟಸಾಧ್ಯ ಎಂದು ಹೇಳುವುದೇ ಹೆಚ್ಚಿದೆ. ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ದರವು ಹೆಚ್ಚು ಕಡಿಮೆಯಾಗಲಿದೆ ಎಂದು ಹೇಳುತ್ತಾರೆ. ಹಾಗಾದರೆ, ವಸ್ತುಗಳಿಗೆ ಎಂಆರ್‌ಪಿ ದರ ಏಕೆ ನಿಗದಿ ಮಾಡಬೇಕು? ಅವರ ಇಷ್ಟಬಂದಂತೆ ಬೆಲೆ ನಿಗದಿ ಮಾಡಲಿ ಎಂದು ಕೈಬಿಡಬಹುದಲ್ಲವೇ? ಎಂಎಸ್‌ಪಿ ದರ ನಿಗದಿ ಸಾಧ್ಯವಿಲ್ಲ ಎಂಬುದು ತಪ್ಪು ಕಲ್ಪನೆ. ರಾಜಕೀಯ ಇಚ್ಛಾಶಕ್ತಿ ಬೇಕಷ್ಟೇ ಎಂದರು.

ಖಾಸಗಿ ಸುದ್ದಿವಾಹಿನಿಯೊಂದರ ಚರ್ಚೆಯಲ್ಲಿ ರೈತರ ಎಲ್ಲಾ ಕೃಷಿ ಉತ್ಪನ್ನಗಳನ್ನು ಸರ್ಕಾರ ಖರೀದಿ ಮಾಡಲು 71 ಲಕ್ಷ ಕೋಟಿ ಹಣ ಬೇಕು. ಆದರೆ ಬಜೆಟ್‌ನಲ್ಲಿ ಇರುವುದು ಕೇವಲ 35 ಲಕ್ಷ ಕೋಟಿ ರೂ. ಎಂಬ ಪ್ರಶ್ನೆ ಮುಂದಿಡಲಾಯಿತು. ಆದರೆ ನಿಜಕ್ಕೂ 71 ಲಕ್ಷ ಕೋಟಿ ರೂ. ಬೇಕಿರುವುದು ಇಡೀ ದೇಶದ ಎಲ್ಲಾ ಕೃಷಿ ಉತ್ಪನ್ನಗಳನ್ನು ಖರೀದಿಸಿ ನಾಶ ಮಾಡಲಷ್ಟೇ. ನಾವೇನೂ ಹಾಗೇ ಮಾಡುವಂತೆ ಹೇಳುತ್ತಿಲ್ಲ ಎಂದರು.

ಜನಾಂದೋಲನ ಮಹಾಮೈತ್ರಿ ಮುಖ್ಯಸ್ಥ ಎಸ್.ಆರ್.ಹಿರೇಮಠ ಮಾತನಾಡಿ, ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ದೆಹಲಿ ರೈತರ ಹೋರಾಟ ಪ್ರೇರಣೆ ಆಗಬೇಕು. ಸಮಗ್ರ ಪರಿವರ್ತನೆ ನಮ್ಮಿಂದ ಆರಂಭವಾಗಬೇಕು. ಘನತೆಯ ಜೀವನ ಕಟ್ಟಿಕೊಡಲು ಪ್ರಯತ್ನಿಸಬೇಕು. ಇದಕ್ಕೆ ದೃಢ ಸಂಕಲ್ಪ ಮಾಡಬೇಕು ಎಂದರು.

ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಮಾತನಾಡಿ, ಬೆಂಬಲ ಬೆಲೆಗೆ ಶಾಸನ ಸ್ವರೂಪ ನೀಡಬೇಕು. ರೈತರಿಂದ ಖರೀದಿಸಿದ್ದನ್ನು ಸರ್ಕಾರವೇ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಬಳಕೆ ಹಾಗೂ ವಿತರಣೆ ಮಾಡಬಹುದು. ರಾಜ್ಯದಲ್ಲಿ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ರೈತರ ಆತ್ಮಹತ್ಯೆ ಸಂಖ್ಯೆಯಲ್ಲಿ ರಾಜ್ಯ ಮುಂದಿದೆ. ರೈತರಿಂದ ಉತ್ಪನ್ನ ಖರೀದಿಸಿ ವಿತರಣೆ ಮೂಲಕ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಈ ವಿಚಾರವಾಗಿ ಸರ್ಕಾರಕ್ಕೆ ವರದಿ ನೀಡಿದ್ದರೂ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ ಮುಖಂಡರಾದ ಗುರುಪ್ರಸಾದ್ ಕೆರಗೋಡು, ಬೆಟ್ಟಯ್ಯಕೋಟೆ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್, ಮುಖಂಡರಾದ ಪ. ಮಲ್ಲೇಶ್ ಮತ್ತಿತರರು ಹಾಜರಿದ್ದರು.

ಒಡೆದು ಆಳುವ ನೀತಿ ಬಗ್ಗೆ ರೈತರು, ಕಾರ್ಮಿಕರು ಎಚ್ಚರ ಹೊಂದಬೇಕು

ಮೈಸೂರು: ಬ್ರಿಟಿಷರ ಒಡೆದು ಆಳುವ ನೀತಿಯನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನುಸರಿಸುತ್ತಿದ್ದು, ರೈತರು ನ್ಯಾಯಯುತ ಬೇಡಿಕೆಗಳನ್ನು ಮುಂದಿಟ್ಟರೆ, ಅವರು ಹಿಜಾಬ್ ಸೇರಿದಂತೆ ಇನ್ನಿತರ ಮತೀಯ ವಿಷಯಗಳನ್ನು ಮುನ್ನೆಲೆಗೆ ತರುತ್ತಿದ್ದಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಸಂಚಾಲಕ ಯೋಗೇಂದ್ರ ಯಾದವ್ ಆರೋಪಿಸಿದರು.

ದೆಹಲಿಯ ರೈತರ ಬೃಹತ್ ಹೋರಾಟಕ್ಕೆ ಕಾರ್ಮಿಕ ಸಮುದಾಯದಿಂದಲೂ ಭಾರೀ ಬೆಂಬಲ ವ್ಯಕ್ತವಾಯಿತು. ಬಿಜೆಪಿ ಸರ್ಕಾರ ಬೇರೆ ದಾರಿ ಇಲ್ಲದೇ ಮಣಿಯಲೇಬೇಕಾಯಿತು. ಈಗ ಅವರು ರೈತರು ಮತ್ತು ಕಾರ್ಮಿಕರ ಒಗ್ಗಟ್ಟನ್ನು ಇಬ್ಭಾಗ ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಬ್ರಿಟಿಷರ ಒಡೆದು ಆಳುವ ನೀತಿಯನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನುಸರಿಸುತ್ತಿದ್ದು, ಅವರ ಒಡೆದು ಆಳುವ ನೀತಿ ಬಗ್ಗೆ ನಾವು ಎಚ್ಚರ ವಹಿಸಬೇಕು ಎಂದರು. ಕಳೆದ 48 ಗಂಟೆಗಳಲ್ಲಿ ದೇಶದಾದ್ಯಂತ ನಡೆದ ಕೆಲ ಘಟನೆಗಳು ನಾಚಿಕೆಯಿಂದ ತಲೆ ತಗ್ಗಿಸುವಂತಾಗಿದೆ. ಶ್ರೀರಾಮನವಮಿಯಂತಹ ಶ್ರೇಷ್ಠ ದಿನದಂದು ಮುಸ್ಲಿಂ ಬಾಂಧವರು ಮತ್ತು ಮಸೀದಿ ಮೇಲೆ ದಾಳಿ ನಡೆಸಲಾಗಿದೆ. ಕರ್ನಾಟಕದಲ್ಲಿ ಬೀದಿಬದಿ ಹಣ್ಣಿನ ವ್ಯಾಪಾರಿ ಮೇಲೆ ದಾಳಿ ನಡೆಸಲಾಗಿದೆ. ದೆಹಲಿಯ ಜೆಎನ್‌ಯು ವಿವಿಯಲ್ಲಿ ಈ ದಿನ ವಿದ್ಯಾರ್ಥಿಗಳು ಸಸ್ಯಾಹಾರ ಮಾತ್ರ ಸೇವಿಸಬೇಕೆಂದು ಗಲಾಟೆ ನಡೆಸಿ ಹಲ್ಲೆ ನಡೆಸಲಾಗಿದೆ. ಹೀಗೆ ಕೋಮು ದ್ವೇಷ ಹುಟ್ಟಿಸುವ ಮೂಲಕ ರೈತರು, ಸಾಮಾನ್ಯ ಜನತೆಯ ಬೇಡಿಕೆಗಳನ್ನು ಮರೆಮಾಚಲಾಗುತ್ತಿದೆ ಎಂದು ದೂರಿದರು.

ಸಂಸದರ ಕಚೇರಿ ಎದುರು ರೈತರ ಪ್ರತಿಭಟನೆ



ಮೈಸೂರು,ಏ.12(ಪಿಎಂ)- ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಖಾತರಿಗೊಳಿಸಲು ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾದ ಸಂಚಾಲಕ ಯೋಗೇಂದ್ರ ಯಾದವ್ ನೇತೃತ್ವದಲ್ಲಿ ರೈತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಆವರಣದಲ್ಲಿರುವ ಸಂಸದ ಪ್ರತಾಪ್ ಸಿಂಹ ಅವರ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

ಸಂಯುಕ್ತ ಹೋರಾಟ-ಕರ್ನಾಟಕ ಸಂಘಟನೆಯ ವಾರದ ಹೋರಾಟದ ಭಾಗವಾಗಿ ಪ್ರತಿಭಟನೆ ನಡೆಸಲಾಯಿತು. ಭತ್ತ ಮತ್ತು ರಾಗಿಯನ್ನು ಸಂಸದರ ಕಚೇರಿ ಎದುರು ಸುರಿದು ಎಂಎಸ್‌ಪಿ ದರ ಮತ್ತು ಖರೀದಿಸುತ್ತಿರುವ ದರ ನಮೂದಿಸಿ, ಆಕ್ರೋಶ ವ್ಯಕ್ತಪಡಿಸಿದರು.

ಸಂಸದ ಪ್ರತಾಪ್‌ಸಿಂಹ ಸ್ಥಳಕ್ಕೆ ಆಗಮಿಸಿ, ರೈತರು ಹಾಗೂ ಮುಖಂಡರ ಮನವಿ ಆಲಿಸಿ, ಕೇಂದ್ರ ಸರ್ಕಾರಕ್ಕೆ ತಮ್ಮ ಅಹವಾಲು ತಿಳಿಸಲಾಗುವುದು ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನೆ ಕೈಬಿಡಲಾಯಿತು. ಹಿರಿಯ ಸಾಹಿತಿ ದೇವನೂರ ಮಹಾದೇವ, ಜನಾಂದೋಲನ ಮಹಾಮೈತ್ರಿ ಮುಖ್ಯಸ್ಥ ಎಸ್.ಆರ್.ಹಿರೇಮಠ, ರಾಜ್ಯದ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮತ್ತಿತರರು ಪಾಲ್ಗೊಂಡಿದ್ದರು.

ಶೂದ್ರ ಸಮುದಾಯದಿಂದ ಭೂಮಿ ಕಸಿಯುವ ಕುತಂತ್ರ ನಡೆಯುತ್ತಿದೆ

ಮೈಸೂರು: ಮುಸ್ಲಿಂ ಸಮುದಾಯದ ವಿಚಾರದಲ್ಲಿ ಅಸ್ಪೃಶ್ಯತಾ ಆಚರಣೆ ಜಾರಿಗೊಳಿಸಲು ಷಡ್ಯಂತ್ರ ನಡೆಸಲಾಗುತ್ತಿದೆ. ಜೊತೆಗೆ ಶೂದ್ರ ಸಮುದಾಯವನ್ನು ಭೂಹೀನರಾಗಿ ಮಾಡುವ ಕುತಂತ್ರವೂ ನಡೆಯುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಆರೋಪಿಸಿದರು.

ರಾಜ್ಯ ಮತ್ತು ದೇಶದಲ್ಲಿ ಸಾಮರಸ್ಯ ಹಾಳು ಮಾಡಲಾಗುತ್ತಿದೆ. ಶೂದ್ರರ ಕೈಯಲ್ಲಿ ಭೂಮಿ ಇರಬಾರದು ಎಂಬ ಉದ್ದೇಶ ಹೊಂದಲಾಗಿದೆ ಎಂದು ದೂರಿದರು. ಸ್ವಾಮಿನಾಥನ್ ಆಯೋಗದ ವರದಿಯಂತೆ ರೈತರ ಬೆಳೆಗಳಿಗೆ ಎಂಎಸ್‌ಪಿ ದರ ಖಾತ್ರಿಗೊಳಿಸುವ ಕಾಯ್ದೆ ರೂಪಿಸಲು ರೈತರನ್ನೂ ಒಳಗೊಂಡಂತೆ ಸಮಿತಿ ರಚನೆ ಮಾಡುವುದಾಗಿ ಪ್ರಧಾನಿಗಳು ಆಶ್ವಾಸನೆ ನೀಡಿದ್ದರು. ಆದರೆ ಈವರೆಗೆ ಆ ಸಂಬಂಧ ಯಾವುದೇ ಪ್ರಕ್ರಿಯೆ ಆರಂಭಿಸಿಲ್ಲ ಎಂದು ಕಿಡಿಕಾರಿದರು.



ಮೈಸೂರು ತಾಲೂಕಿನ ಹುಯಿಲಾಳು ಗ್ರಾಮದ ಗ್ರಾಪಂ ಸದಸ್ಯ ರಮೇಶ್ ಹುಯಿಲಾಳು ಅವರ ಮನೆಗೆ ಭೇಟಿ ನೀಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ ನೇತೃತ್ವದಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ವೇಳೆ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿನಿಶಾಂತ್, ಯುವ ಮುಖಂಡರಾದ ಜೆ.ಗೋಪಿ, ಡಿ.ರವಿಶಂಕರ್, ಮನು ಹಿನಕಲ್, ಮಾಜಿ ಗ್ರಾಪಂ ಅಧ್ಯಕ್ಷ ಹೆಚ್.ಆರ್.ಮಲ್ಲಯ್ಯ, ಗ್ರಾಪಂ ಮಾಜಿ ಉಪಾಧ್ಯಕ್ಷ ಹೆಚ್.ಜೆ.ರಾಘವೇಂದ್ರ, ಅಂಗಡಿ ಮಹದೇವು, ಗ್ರಾಪಂ ಮಾಜಿ ಸದಸ್ಯರಾದ ಶಿವಣ್ಣ, ಹುಯಿಲಾಳು ಕುಮಾರ್, ಗ್ರಾಮದ ಯಜಮಾನರು ಇದ್ದರು.

ವಿಜ್ಞಾನ ಬೇಸಿಗೆ ಶಿಬಿರ

ಮೈಸೂರು,ಏ.12-ಮೈಸೂರು ಸೈನ್ಸ್ ಫೌಂಡೇಷನ್, ಜ್ಞಾನೋದಯ ಪದವಿಪೂರ್ವ ಕಾಲೇಜು ಸಹಯೋಗದಲ್ಲಿ ಮೇ 1 ರಿಂದ 8ರವರೆಗೆ 8 ದಿನಗಳ ವಿಜ್ಞಾನ ಬೇಸಿಗೆ ಶಿಬಿರವನ್ನು ಸರಸ್ವತಿಪುರಂನ ಜ್ಞಾನೋದಯ ಪದವಿಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ರಸಾಯನಶಾಸ್ತ್ರ, ಭೌತಶಾಸ್ತ್ರ ಮತ್ತು ಜೀವಶಾಸ್ತ್ರದ ಮೂಲ ಪರಿಕಲ್ಪನೆಗಳ ಪ್ರಯೋಗಗಳು ಮತ್ತು ಗಣಿತದ ಮಾದರಿಗಳನ್ನು ವಿಷಯ ತಜ್ಞರು ಮತ್ತು ಪರಿಣಿತರು ತಯಾರು ಮಾಡಿಸುತ್ತಾರೆ. ಶಿಬಿರದಲ್ಲಿ 7ನೇ ತರಗತಿ ಮೇಲ್ಪಟ್ಟ ವಿದ್ಯಾರ್ಥಿಗಳು ಭಾಗವಹಿಸಬಹುದು. ಹೆಸರು ನೋಂದಾಯಿಸಿಕೊಳ್ಳಲು ಏ.25 ಕಡೆ ದಿನ. ಮಾಹಿತಿಗೆ ಮೊ. 8105503863 ಸಂಪರ್ಕಿಸಬಹುದು.

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಉದ್ಘಾಟನಾ ಸಮಾರಂಭ

ಮೈಸೂರು,ಏ.12-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಉದ್ಘಾಟನಾ ಸಮಾರಂಭವನ್ನು ಏ.13ರಂದು ಬೆಳಗ್ಗೆ 10 ಗಂಟೆಗೆ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಹುಣಸೂರು ಉಪವಿಭಾಗಾಧಿಕಾರಿ ವರ್ಣಿತ್ ನೇಗಿ ತರಬೇತಿ ಉದ್ಘಾಟಿಸುವರು. ವಿವಿ ಕುಲಪತಿ ಪ್ರೊ. ವಿದ್ಯಾಶಂಕರ್, ಕುಲಸಚಿವ ಪ್ರೊ.ರಾಜಣ್ಣ ಉಪಸ್ಥಿತರಿರುವರು ಎಂದು ಸಂಯೋಜನಾಧಿಕಾರಿಗಳಾದ ಜೈನಹಳ್ಳಿ ಸತ್ಯನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಾಳಿ ವೇಳೆ ಸಿಸಿಬಿ ಅಧಿಕಾರಿಗಳು ಜಾಕೆಟ್, ಕ್ಯಾಪ್ ಧರಿಸಬೇಕು

ಬೆಂಗಳೂರು: ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಅಧಿಕಾರಿಗಳು ದಾಳಿ ಸಂದರ್ಭದಲ್ಲಿ ವಿಶೇಷ ವಿನ್ಯಾಸದ ಜಾಕೆಟ್‌ಗಳು ಮತ್ತು ಕ್ಯಾಪ್‌ಗಳನ್ನು ಧರಿಸುತ್ತಾರೆ. ಸಿಸಿಬಿ (ಅಪರಾಧ) ಜಂಟಿ ಆಯುಕ್ತರು ವಿನ್ಯಾಸಕಾರರಿಂದ ಟಿಪ್ಸ್ ಪಡೆದು, ಜಾಕೆಟ್ ಮತ್ತು ಕ್ಯಾಪ್ ವಿನ್ಯಾಸ ಮಾಡಲಾಗುತ್ತಿದೆ. ದಾಳಿಗಳು ಮತ್ತು ಇತರ ತನಿಖೆಗಳ ಸಮಯದಲ್ಲಿ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಶೂಗಳ ಜೊತೆಗೆ ಜಾಕೆಟ್ ಮತ್ತು ಕ್ಯಾಪ್ ಅನ್ನು ಧರಿಸಬೇಕಾಗುತ್ತದೆ ಎಂದು ಜಂಟಿ ಪೊಲೀಸ್ ಕಮಿಷನರ್ (ಅಪರಾಧ) ರಮಣ್ ಗುಪ್ತಾ ತಿಳಿಸಿದ್ದಾರೆ. ಯಾವ ವಿಭಾಗ ಕಾರ್ಯಾಚರಣೆ ನಡೆಸುತ್ತಿದೆ ಎಂಬುದನ್ನು ಸಾರ್ವಜನಿಕರಿಗೆ ತಿಳಿಯುವಂತೆ ಇದನ್ನು ಮಾಡಲಾಗುತ್ತಿದೆ. ಸಿಸಿಬಿಯ ಹಿರಿಯ ಅಧಿಕಾರಿಗಳು ಜಾಕೆಟ್‌ಗಳು ಮತ್ತು ಕ್ಯಾಪ್‌ಗಳಿಗೆ ಹಣ ನೀಡಿದ್ದಾರೆ. ಜಲನಿರೋಧಕ, ಪ್ರತಿಫಲಿತ ಜಾಕೆಟ್‌ಗಳು ಮತ್ತು ಕ್ಯಾಪ್‌ಗಳನ್ನು ಸಿಸಿಬಿ ಅಧಿಕಾರಿಗಳು ವಿನ್ಯಾಸಗೊಳಿಸಿದ್ದಾರೆ.

ಮನೆ ಮನೆಗೆ ಬಿಜೆಪಿ ಸರ್ಕಾರದ ಸಾಧನೆಗಳು ಏ.20ರವರೆಗೆ ವಿವಿಧ ಕಾರ್ಯಕ್ರಮಗಳು

ಮೈಸೂರು,ಏ.12(ಆರ್‌ಕೆಬಿ)-ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ಪಕ್ಷದ ವತಿಯಿಂದ ಏ.20ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಮಾಧ್ಯಮ ಸಂಚಾಲಕ ಎನ್.ರಾಜ್‌ಕುಮಾರ್ ತಿಳಿಸಿದರು.

ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಜನಪರ ಕಾರ್ಯಕ್ರಮಗಳ ಬಗ್ಗೆ ಜಿಲ್ಲೆಯ ಪ್ರತೀ ಮಂಡಲ ಮತ್ತು ಬೂತ್‌ಗಳಲ್ಲಿಯೂ ಮನೆ ಮನೆಗೆ ಸರ್ಕಾರದ ಸಾಧನೆ ತಲುಪಿಸಲಾಗುವುದು ಎಂದು ಹೇಳಿದರು.

ಪಕ್ಷದ ಜಿಲ್ಲಾ ವಕ್ತಾರ ಮಿರ್ಲೆ ಶ್ರೀನಿವಾಸಗೌಡ ಮಾತನಾಡಿ, ರೈತರ ಅಭ್ಯುದಯಕ್ಕಾಗಿ ಕಿಸಾನ್ ಸಮ್ಮಾನ್ ಯೋಜನೆಯಡಿ ರೈತರಿಗೆ ಸರ್ಕಾರ ನೆರವು ನೀಡಿದೆ. ಕೇಂದ್ರ ಸರ್ಕಾರ ಜನಪರ ಯೋಜನೆಗಳನ್ನು ಜಾರಿಗೊಳಿಸಿ, ನುಡಿದಂತೆ ನಡೆದಿದೆ ಎಂದರು.

ಜಿಲ್ಲಾ ಸಹ ವಕ್ತಾರ ಕೆ.ವಸಂತಕುಮಾರ್ ಮಾತನಾಡಿ, ಮನೆ ಮನೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವ ದೃಷ್ಟಿಯಿಂದ ಜಲಜೀವನ್ ಮಿಷನ್ ಯೋಜನೆಯನ್ನು ಪ್ರಾರಂಭಿಸಿ, ದೇಶದ 19.30 ಕೋಟಿ ಮನೆಗಳಿಗೆ ನಲ್ಲಿಗಳ ಮೂಲಕ ಕುಡಿಯುವ ನೀರು ಪೂರೈಸುವ ವ್ಯವಸ್ಥೆ ಐತಿಹಾಸಿಕ ಯೋಜನೆಯಾಗಿದೆ. ಸುಮಾರು 1,46,199 ಹಳ್ಳಿಗಳಿಗೆ ಈ ಯೋಜನೆ ತಲುಪಲಿದೆ. ಇಲ್ಲಿಯವರೆಗೆ 9.39 ಕೋಟಿ ಮನೆಗಳಿಗೆ ಸಂಪರ್ಕ ಕಲ್ಪಿಸಿದ್ದು, ವಿಶೇಷವಾಗಿ ಕರ್ನಾಟಕದಲ್ಲಿ 98 ಲಕ್ಷ ಮನೆಗಳಲ್ಲಿ ಈಗಾಗಲೇ 48.42ಲಕ್ಷ ಮನೆಗಳಿಗೆ ಸಂಪರ್ಕ ಕಲ್ಪಿಸಿದೆ ಎಂದು ತಿಳಿಸಿದರು.

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಕೇಂದ್ರ ಸರ್ಕಾರ ದೇಶದಲ್ಲಿ ಯಾವೊಬ್ಬ ವ್ಯಕ್ತಿಗೂ ಮನೆ ಇಲ್ಲ ಎನ್ನಬಾರದು ಎಂಬ ಉದ್ದೇಶದಿಂದ ಕೆಲಸ ನಿರ್ವಹಿಸುತ್ತಿದೆ. 2018ರಲ್ಲಿ 8 ಲಕ್ಷ ಮನೆಗಳ ನಿರ್ಮಾಣ ಮಾಡುವ ಮಹತ್ವದ ಯೋಜನೆಯನ್ನು ಪ್ರಾರಂಭಿಸಿತ್ತು. ಪ್ರಸ್ತುತ ಕೇಂದ್ರದಿಂದ ರಾಜ್ಯಕ್ಕೆ 8.2 ಲಕ್ಷ ಮನೆಗಳು ಮಂಜೂರಾಗಿದೆ. ನಗರ ಪ್ರದೇಶಗಳಲ್ಲಿ ಈಗಾಗಲೇ 2.62 ಲಕ್ಷ ಮನೆಗಳನ್ನು ನಿರ್ಮಿಸಿ, ಬೆಂಗಳೂರು ನಗರದಲ್ಲಿ 1 ಲಕ್ಷ ಮನೆಗಳನ್ನು ಸಾಂಕೇತಿಕವಾಗಿ ನೀಡಲಾಗುತ್ತಿದೆ. ಪುರಸಭೆ, ಪಟ್ಟಣ ಪಂಚಾಯಿತಿ, ನಗರಸಭೆ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 2,500 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಮನೆಗಳನ್ನು ನಿರ್ಮಿಸುವ ಕಾರ್ಯ ಪ್ರಾರಂಭವಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾಧ್ಯಮ ಸಹ ಪ್ರಮುಖ್ ಗಿರೀಶ್ ಇದ್ದರು.

ನಾಳೆಯಿಂದ ನಟನದಲ್ಲಿ ರಜಾಮಜಾ ಬೇಸಿಗೆ ಶಿಬಿರ

ಮೈಸೂರು,ಏ.12-ಮೈಸೂರಿನ ರಾಮಕೃಷ್ಣನಗರದಲ್ಲಿರುವ ನಟನ ರಂಗ ಶಾಲೆ ವತಿಯಿಂದ ಏ.14ರಿಂದ ಮೇ 8ರವರೆಗೆ ಜಯನಗರದಲ್ಲಿರುವ ಶ್ರೀ ವಿವೇಕ ಬಾಲೋದ್ಯಾನ ವಿದ್ಯಾಸಂಸ್ಥೆ ಆವರಣದಲ್ಲಿ 'ರಜಾ-ಮಜಾ' ಮಕ್ಕಳ ಬೇಸಿಗೆ ಶಿಬಿರವನ್ನು ಆಯೋಜಿಸಿದೆ. ವಿದುಷಿ ಲಕ್ಷ್ಮಿ ಗೋಪಾಲಸ್ವಾಮಿ ಶಿಬಿರ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪಾಲಿಕೆ ಸದಸ್ಯೆ ಶೋಭಾ ಮೋಹನ್, ಶ್ರೀ ವಿವೇಕ ಬಾಲೋದ್ಯಾನ ವಿದ್ಯಾಸಂಸ್ಥೆ ಕಾರ್ಯದರ್ಶಿ ನಾಗೇಶ್, ನಟನ ಸಂಸ್ಥೆ ಅಧ್ಯಕ್ಷ ಆನಂದಕುಮಾರ್ ಭಾಗವಹಿಸಲಿದ್ದಾರೆ. ಮಾಹಿತಿಗೆ ಮೊ.7259537777, 9480468327 ಸಂಪರ್ಕಿಸಬಹುದು.

ರೋಗಗಳನ್ನು ಪತ್ತೆ ಮಾಡುವ ಕೆ.ಆರ್.ಆಸ್ಪತ್ರೆ ರೇಡಿಯೋ ಡಯಗ್ನೋಸಿಸ್ ವಿಭಾಗಕ್ಕೆ ಕಾಯಕಲ್ಪ ಅಗತ್ಯ...!







ಮೈಸೂರು,ಏ.12-ರೋಗಗಳನ್ನು ಪತ್ತೆ ಮಾಡಿ ಚಿಕಿತ್ಸೆ ನೀಡಲು ಸಹಕಾರಿಯಾಗುವ ಕೆ.ಆರ್. ಆಸ್ಪತ್ರೆಯ ರೇಡಿಯೋಡಯಗ್ನೋಸಿಸ್ ವಿಭಾಗಕ್ಕೆ ಅಗತ್ಯ ಮೂಲ ಸೌಕರ್ಯದೊಂದಿಗೆ ಕಾಯಕಲ್ಪದ ಅಗತ್ಯವಿದೆ.

ಶತಮಾನದ ಹೊಸ್ತಿಲಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿ ಬರುವ ಕೆ.ಆರ್. ಚೆಲುವಾಂಬ, ಪಿಕೆಟಿಬಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಟ್ರಾಮಾ ಕೇರ್ ಸೆಂಟರ್‌ಗಳ ಹೊರ ಹಾಗೂ ಒಳರೋಗಿಗಳ ಡಯಗ್ನೈಸ್ ಮಾಡಿ ರೋಗಗಳಿರುವ ಬಗ್ಗೆ ವರದಿ ನೀಡುವ ಜವಾಬ್ದಾರಿ ನಿರ್ವಹಿಸುತ್ತಿದೆ.

ಲಭ್ಯವಿರುವ ಕೆ.ಆರ್.ಆಸ್ಪತ್ರೆಯ ಒಂದೇ ಒಂದು ಸಿಟಿ ಸ್ಕ್ಯಾನಿಂಗ್ ಉಪಕರಣದಲ್ಲಿ ದಿನಕ್ಕೆ 100ರಿಂದ 120 ರೋಗಿಗಳಿಗೆ ಸಿಟಿ ಸ್ಕ್ಯಾನಿಂಗ್ ಮಾಡಲಾಗುತ್ತಿದೆ. 7 ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಉಪಕರಣಗಳ ಮೂಲಕ ಕೆ.ಆರ್. ಆಸ್ಪತ್ರೆಯ ರೇಡಿಯಾಲಜಿ ಬ್ಲಾಕ್, ಐಪಿಡಿ-ಓಪಿಡಿ ಬ್ಲಾಕ್, ಸರ್ಜಿಕಲ್ ಬ್ಲಾಕ್ (ಕಲ್ಲು ಕಟ್ಟಡ) ಹಾಗೂ ಚೆಲುವಾಂಬ ಆಸ್ಪತ್ರೆಗಳಲ್ಲಿ ದಿನಕ್ಕೆ 150ರಿಂದ 200 ಸಿಟಿ ಸ್ಕ್ಯಾನಿಂಗ್ ಮಾಡಲಾಗುತ್ತಿದೆ.

ಜೊತೆಗೆ ಡಾಪ್ಲರ್ ಸ್ಕ್ಯಾನಿಂಗ್, ಎಲಾಸ್ಟೋಗ್ರಫಿ ಪ್ರೊಸೀಜರ್, ಬಯಾಪ್ಸಿ, FNACಗಳಂತಹ ಪರೀಕ್ಷೆಗಳನ್ನೂ ಲಭ್ಯವಿರುವ ಅಲ್ಪ ಉಪಕರಣಗಳಿಂದಲೇ ನಿರ್ವಹಿಸಲಾಗುತ್ತಿದೆ. ಆಸ್ಪತ್ರೆಯಲ್ಲಿರುವ ಎಕ್ಸ್-ರೇ ಯಂತ್ರ ಹಾಗೂ ಬೆಡ್‌ಸೈಡ್‌ನಲ್ಲಿರುವ 9 ಪೋರ್ಟಬಲ್ ಎಕ್ಸ್-ರೇ ಮೆಷಿನ್‌ಗಳಿಂದ ಪ್ರತೀದಿನ ಹೊರ ಹಾಗೂ ಒಳರೋಗಿಗಳೂ ಸೇರಿ ಒಟ್ಟು 400 ಎಕ್ಸ್-ರೇ ಮಾಡಲಾಗುತ್ತಿದೆ.

ಡಿಜಿಟಲ್ ರೇಡಿಯೋಗ್ರಫಿ ಅತ್ಯವಶ್ಯ: ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆಗನುಸಾರ, ಒತ್ತಡ ನಿರ್ವಹಿಸಲು ಡಿಜಿಟಲ್ ರೇಡಿಯೋಗ್ರಫಿ ಅಗತ್ಯವಿದೆ. ಪ್ರಸ್ತುತ ಇರುವ ಎಕ್ಸ್-ರೇ ಯಂತ್ರಗಳಲ್ಲಿ ಒಂದು ಎಕ್ಸ್-ರೇ ತೆಗೆದು ರಿಪೋರ್ಟ್ ನೀಡಲು ಕನಿಷ್ಠ 15 ನಿಮಿಷ ಬೇಕಾಗುತ್ತದೆ. ಆದರೆ ಡಿಜಿಟಲ್ ರೇಡಿಯೋಗ್ರಫಿಯಲ್ಲಿ ಕೇವಲ 15 ಸೆಕೆಂಡ್‌ಗಳಲ್ಲಿ ಪ್ರಕ್ರಿಯೆ ಮುಗಿಯುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸ್ವಂತ ಎಂಆರ್‌ಐ ವ್ಯವಸ್ಥೆ ಇಲ್ಲ: ಮಹಾರಾಜರು ಬಡರೋಗಿಗಳಿಗೆ ಉಚಿತ ಆರೋಗ್ಯ ಸೇವೆ ಒದಗಿಸಲೆಂದು ಸ್ಥಾಪಿಸಿದ 100 ವರ್ಷ ಇತಿಹಾಸವಿರುವ ಕೆ.ಆರ್. ಆಸ್ಪತ್ರೆಯಲ್ಲಿ ಸ್ವಂತ ಎಂಆರ್‌ಐ ಉಪಕರಣ ವಿಲ್ಲದ ಕಾರಣ, ಕಳೆದ 10 ವರ್ಷಗಳಿಂದ ಪಿಪಿಪಿ ಮಾದರಿಯಲ್ಲಿ ಮೆಡಾಲ್ ಸಂಸ್ಥೆಯಿಂದ ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯವನ್ನು ಹಣ ಪಾವತಿಸಿ ಪಡೆಯಲಾಗುತ್ತಿದೆ.

ಒಂದು ದಿನಕ್ಕೆ 25ರಿಂದ 30 ಎಂಆರ್‌ಐ ಸ್ಕ್ಯಾನ್ ಮಾಡುತ್ತಿದ್ದು, ಒಬ್ಬ ರೋಗಿಯಿಂದ ಸಂಸ್ಥೆಯು ಕನಿಷ್ಠ 2,500 ರೂ. ಶುಲ್ಕ ಪಡೆಯುತ್ತಿದೆ. ಒಪ್ಪಂದದ ಪ್ರಕಾರ 2021ರಲ್ಲೇ 10 ವರ್ಷದ ಅವಧಿ ಮುಗಿದಿದ್ದರೂ, ವೈದ್ಯಕೀಯ ಶಿಕ್ಷಣ ಇಲಾಖೆಯು ಎಂಆರ್‌ಐ ಉಪಕರಣ ಅಳವಡಿಸಲು ಕ್ರಮ ವಹಿಸದ ಕಾರಣ, ಖಾಸಗಿ ಸಂಸ್ಥೆಯನ್ನೇ ಆಸ್ಪತ್ರೆಯು ಅವಲಂಬಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ವೈದ್ಯರು, ಸಿಬ್ಬಂದಿ ಕೊರತೆ: ಕೆ.ಆರ್. ಆಸ್ಪತ್ರೆ, ಇನ್ನಿತರ ಆಸ್ಪತ್ರೆಗಳ ಹೊರರೋಗಿ ಹಾಗೂ ಒಳರೋಗಿಗಳ ಪೈಕಿ 800 ಮಂದಿ ರೋಗಿಗಳನ್ನು ಡಯಾಗ್ನೈಸ್‌ಗಾಗಿ ಪ್ರತೀದಿನ ರೇಡಿಯಾಲಜಿ ವಿಭಾಗಕ್ಕೆ ವೈದ್ಯರು ರೆಫರ್ ಮಾಡಿ ಕಳುಹಿಸಿಕೊಡುತ್ತಾರೆ. ಆದರೆ, ಅಷ್ಟೂ ಮಂದಿಗೆ ಎಕ್ಸ್-ರೇ, ಸ್ಕ್ಯಾನಿಂಗ್‌ನಂತಹ ವಿವಿಧ ಪರೀಕ್ಷೆ ನಡೆಸಿ ರೋಗ ಲಕ್ಷಣಗಳಿರುವ ಬಗ್ಗೆ ವರದಿ ಕೊಡಲು ವೈದ್ಯರು, ಟೆಕ್ನೀಷಿಯನ್‌ಗಳು, ಸಿಬ್ಬಂದಿ ಕೊರತೆ ಇದೆ.

ವಿಭಾಗದ ಮುಖ್ಯಸ್ಥ ಡಾ.ಸಿ.ಪಿ.ನಂಜರಾಜ್, ಪ್ರಾಧ್ಯಾಪಕ ಡಾ.ಪ್ರದೀಪ್, ಸಹ ಪ್ರಾಧ್ಯಾಪಕರಾದ ಡಾ. ಮನುಪ್ರತಾಪ್, ಡಾ.ಕೆ.ಬಿ.ಹೇಮಂತ್, ಡಾ.ಸಿ.ಎನ್. ಪ್ರದೀಪ್‌ಕುಮಾರ್, ಸಹಾಯಕ ಪ್ರಾಧ್ಯಾಪಕ ಡಾ. ಪಿ.ಸಂಜಯ್, ಸೀನಿಯರ್ ರೆಸಿಡೆಂಟ್‌ಗಳಾದ ಡಾ. ಆರ್.ಕೆ.ನಿಶಾಂತ್, ಡಾ. ಬಿ.ಜಿ.ಜಗತ್ ಅವರೊಟ್ಟಿಗೆ ವಿಭಾಗದಲ್ಲಿ ನಾಲ್ವರು ಖಾಯಂ ಹಾಗೂ 8 ಮಂದಿ ಹೊರಗುತ್ತಿಗೆ ಆಧಾರದ ಟೆಕ್ನೀಷಿಯನ್‌ಗಳು ಮಾತ್ರ ಕೆಲಸ ಮಾಡುತ್ತಿದ್ದಾರೆ. ರೋಗಿಗಳ ಸಂಖ್ಯೆಗನುಸಾರ ಇನ್ನೂ 30 ಮಂದಿ ಟೆಕ್ನೀಷಿಯನ್‌ಗಳು, ಸ್ಟಾಫ್ ನರ್ಸ್ ಹಾಗೂ 'ಡಿ' ಗ್ರೂಪ್ ನೌಕರರ ಅಗತ್ಯವಿದೆ. ಖಾಲಿ ಇರುವ ಹುದ್ದೆ ತುಂಬಿದರೂ ಉತ್ತಮ ಸೇವೆ ಒದಗಿಸಬಹುದು. ವಿಭಾಗದ ವೈದ್ಯರು ಕಾಲೇಜಿನ ಎಂಬಿಬಿಎಸ್, ಎಂಡಿ, ಪಿಜಿ, ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕು. ಇನ್ನಿತರ ವೈದ್ಯಕೀಯ ಕಾರ್ಯಕ್ರಮಗಳಲ್ಲೂ ಭಾಗವಹಿಸಬೇಕಾಗಿದೆ.

326 ಹುದ್ದೆ ಖಾಲಿ: ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಮಂಜೂರಾದ 708ರ ಪೈಕಿ ಕೇವಲ 382 ಮಂದಿ ಕೆಲಸ ನಿರ್ವಹಿಸುತ್ತಿದ್ದು, ಇನ್ನೂ 326 ಹುದ್ದೆ ಖಾಲಿ ಉಳಿದಿವೆ. ಮೃತಪಟ್ಟ, ನಿವೃತ್ತಿ ಹೊಂದಿದವರ ಸ್ಥಾನಗಳಿಗೆ ಕಳೆದ 10 ವರ್ಷಗಳಿಂದಲೂ ನೇಮಕವಾಗದಿರುವುದು ಸಿಬ್ಬಂದಿಗಳ ಕೊರತೆಗೆ ಮುಖ್ಯ ಕಾರಣವಾಗಿದೆ.

120 ಸ್ಟಾಫ್ ನರ್ಸ್, 13 ನರ್ಸಿಂಗ್ ಸೂಪರಿಂಟೆಂಡೆಂಟ್ ಗ್ರೇಡ್-2, 14 ನರ್ಸಿಂಗ್ ಟ್ಯೂಟರ್, 38 ದ್ವಿತೀಯ ದರ್ಜೆ ಸಹಾಯಕರು, 4 ರೆಡಿಯೋಗ್ರಾಫರ್ ಸೇರಿ ಒಟ್ಟು 326 ಹುದ್ದೆ ಖಾಲಿ ಇದ್ದರೂ ಭರ್ತಿ ಮಾಡದಿರುವುದರಿಂದ ಪ್ರಸ್ತುತ ಇರುವ ಸಿಬ್ಬಂದಿ ಮೇಲೆ ಒತ್ತಡ ಹೆಚ್ಚಾಗಿದೆ.

'ಸಿ' ಮತ್ತು 'ಡಿ' ಗ್ರೂಪ್ ಸಿಬ್ಬಂದಿಗಳನ್ನು ನೇಮಕ ಮಾಡಿದರೂ ಕೆ.ಆರ್. ಆಸ್ಪತ್ರೆಯಲ್ಲಿ ಶೇ. 50ರಷ್ಟು ಸಮಸ್ಯೆ ಬಗೆಹರಿದಂತಾಗುತ್ತದೆ. ರೋಗಿಗಳನ್ನು ಒಂದು ಬ್ಲಾಕ್‌ನಿಂದ ಇನ್ನೊಂದು ಬ್ಲಾಕ್‌ಗೆ ಕರೆದೊಯ್ಯಲು ಪ್ರತ್ಯೇಕ ಟ್ರಾಲಿ ಮಾರ್ಗ, ರೋಗಿಗಳ ಅಟೆಂಡರ್‌ಗಳು ಮಲಗಲು ಧರ್ಮಶಾಲೆ, ಕುಡಿಯುವ ನೀರು, ಶೌಚಾಲಯಗಳನ್ನು ಒದಗಿಸಿ ಸೌಕರ್ಯ ಒದಗಿಸುವುದು ಅತ್ಯವಶ್ಯವಾಗಿದೆ. ಸರ್ಕಾರ, ಜನಪ್ರತಿನಿಧಿಗಳು ಇತ್ತ ಗಮನಹರಿಸಿಲ್ಲ. ಶತಮಾನದ ಹೊಸ್ತಿಲಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಧೀನದಲ್ಲಿರುವ ಕೆಆರ್. ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆಗಳಿಗೆ ಮೂಲ ಸೌಕರ್ಯ ಒದಗಿಸಿ ರೋಗಿಗಳಿಗೆ ಖಾಸಗಿ ಆಸ್ಪತ್ರೆಗಳಿಗೆ ಸರಿಸಮನಾಗಿ ಆರೋಗ್ಯ ಸೇವೆ ಒದಗಿಸಬಹುದಾಗಿದೆ.

ಇಂಧನ, ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ

ಎಸ್‌ಡಿಪಿಐ ವಿನೂತನ ಪ್ರತಿಭಟನೆ



ಚಾಮರಾಜನಗರ, ಏ.12(ಎಸ್‌ಎಸ್)– ಪೆಟ್ರೋಲ್ ಉತ್ಪನ್ನಗಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ)ದ ಜಿಲ್ಲಾ ಘಟಕದ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಸಿಲಿಂಡರ್, ಹಳೆ ಸ್ಟೌ, ಹಳೇ ದ್ವಿಚಕ್ರ ವಾಹನದೊಂದಿಗೆ ಮೆರವಣಿಗೆ ನಡೆಸಿ, ಗುಜರಿಗೆ ಹಾಕುವ ಮೂಲಕ ವಿನೂತನವಾಗಿ ಪ್ರತಿಭಟಿಸಿದರು.

ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು, ಸಿಲಿಂಡರ್‌ಗಳು, ಸ್ಟೌಗಳು ಹಾಗೂ ಹಳೇ ಸ್ಕೂಟರ್ ಅನ್ನು ಪ್ರದರ್ಶಿಸುತ್ತಾ ಪ್ರತಿಭಟನೆ ಆರಂಭಿಸಿದರು. ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಎತ್ತಿನ ಗಾಡಿಯಲ್ಲಿ ಅವುಗಳನ್ನು ತುಂಬಿಕೊಂಡು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮೂಲಕ ಸುಲ್ತಾನ್ ಷರೀಫ್ ವೃತ್ತದವರೆಗೂ ಮೆರವಣಿಗೆ ನಡೆಸಿ ನಂತರ ಗುಜರಿ ಅಂಗಡಿಯೊಂದಕ್ಕೆ ಹಾಕಿ ಅಸಮಾಧಾನ ವ್ಯಕ್ತಪಡಿಸಿದರು.

ಕೋವಿಡ್‌ನಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಚೇತರಿಸಿಕೊಳ್ಳುತ್ತಿರುವ ಬಡಜನತೆ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ದವಸ–ಧಾನ್ಯ ಪದಾರ್ಥ, ಔಷಧಗಳ ಬೆಲೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ. ಹಾಗಿದ್ದರೂ ಕೇಂದ್ರ ಸರ್ಕಾರ ಬೆಲೆ ಏರಿಕೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುತ್ತಿಲ್ಲ ಪ್ರತಿಭಟನಾಕಾರರು ಆರೋಪಿಸಿದರು.

ಬಿಜೆಪಿ ನೇತೃತ್ವದ ಸರ್ಕಾರಗಳು ಅಧಿಕಾರ ಹಿಡಿದ ದಿನದಿಂದಲೂ ಅಭಿವೃದ್ಧಿ ಕಾರ್ಯ ಮಾಡದೆ ತನ್ನ ವೈಫಲ್ಯ ಮರೆಮಾಚಲು ಸಾಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿವೆ. ಆರ್ಥಿಕ ಸಂಕಷ್ಟದಿಂದ ದೇಶವು ದಿವಾಳಿಯಾಗುವ ಮುಂಚೆ ಸರ್ಕಾರ ಎಚ್ಚೆತ್ತು ಅಗತ್ಯ ವಸ್ತುಗಳ ಬೆಲೆ ನಿಯಂತ್ರಿಸಬೇಕು ಎಂದು ಆಗ್ರಹಿಸಿದರು. ಎಸ್‌ಡಿಪಿಐ ಜಿಲ್ಲಾ ಘಟಕದ ಅಧ್ಯಕ್ಷ ಅಬ್ರಾರ್ ಅಹಮದ್, ಜಿಲ್ಲಾ ಉಪಾಧ್ಯಕ್ಷ ಸೈಯದ್ ಆರೀಫ್, ಕಾರ್ಯದರ್ಶಿ ಜಬೀನೂರ್, ಖಜಾಂಚಿ ನಯಾಜ್‌ವುಲ್ಲಾ, ನಗರಸಭಾ ಸದಸ್ಯ ಖಲೀಲ್ ಉಲ್ಲಾ, ಮುಖಂಡರಾದ ಮೊಮಹಮದ್ ಅಮೀಕ್, ಅಪ್ಸರ್ ಪಾಷ, ರಫೀಕ್, ಜಾಕೀರ್ ಇತರರು ಇದ್ದರು.

ಸಂತೇಮರಹಳ್ಳಿ ಬಳಿ ಕಾರು-ಬೈಕ್ ಡಿಕ್ಕಿ

ಕಾನ್‌ಸ್ಟೇಬಲ್ ಸಾವು, ಎಎಸ್‌ಐಗೆ ಗಂಭೀರ ಗಾಯ


ಪ್ರಸಾದ್

ಚಾಮರಾಜನಗರ, ಏ.12(ಎಸ್‌ಎಸ್)– ಬೈಕ್‌ಗೆ ಕಾರು ಡಿಕ್ಕಿಹೊಡೆದ ಪರಿಣಾಮ ಸಂತೇಮರಹಳ್ಳಿ ಪೊಲೀಸ್ ಕಾನ್‌ಸ್ಟೇಬಲ್ ಮೃತಪಟ್ಟಿದ್ದು, ಎಎಸ್‌ಐ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಹಲ್ಲೇಮರ ಕ್ರಾಸ್ ಬಳಿ ಸೋಮವಾರ ರಾತ್ರಿ ಸಂಭವಿಸಿದೆ.

ಸಂತೇಮರಹಳ್ಳಿ ಠಾಣೆಯಲ್ಲಿ ಕಾನ್‌ಸ್ಟೇಬಲ್ ಇರಸವಾಡಿ ಗ್ರಾಮದ ಪ್ರಸಾದ್(34) ಅಪಘಾತದಿಂದ ಮೃತಪಟ್ಟಿದ್ದಾರೆ. ಅದೇ ಠಾಣೆಯಲ್ಲಿ ಎಎಸ್‌ಐ ರಾಜು(58) ಗಂಭೀರವಾಗಿ ಗಾಯಗೊಂಡಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆ ವಿವರ: ರಾಜು ಹಾಗೂ ಪ್ರಸಾದ್ ಅವರು ಸೋಮವಾರ ರಾತ್ರಿ ಗಸ್ತಿನ ಕರ್ತವ್ಯದಲ್ಲಿದ್ದರು. ರಾಷ್ಟ್ರೀಯ ಹೆದ್ದಾರಿ–209ರ ಹಲ್ಲೇಮರ ಕ್ರಾಸ್ ಬಳಿ ಇವರಿಬ್ಬರು ಬೈಕ್ ನಲ್ಲಿ ಸಂಚರಿಸುತ್ತಿದ್ದ ವೇಳೆ ಹಿಂಬದಿಯಿಂದ ಬಂದ ಕಾರು ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಪರಿಣಾಮ ಬೈಕ್ ಹಿಂಬದಿ ಕುಳಿತಿದ್ದ ಪ್ರಸಾದ್ ಅವರಿಗೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತ ಪಟ್ಟಿದ್ದಾರೆ. ಬೈಕ್ ಚಲಾಯಿಸುತ್ತಿದ್ದ ಎಎಸ್‌ಐ ರಾಜು ತೀವ್ರವಾಗಿ ಗಾಯಗೊಂಡರು. ತಕ್ಷಣ ಅವರಿಗೆ ನಗರದ ಜಿಲ್ಲಾಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಲಾಯಿತು ಎಂದು ಸಂತೇಮರಹಳ್ಳಿ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಮಹೇಶ್ ತಿಳಿಸಿದ್ದಾರೆ.

ಕಾರು ಚಾಲಕ ಸತೀಶ್‌ಕುಮಾರ್‌ನನ್ನು ಬಂಧಿಸಿರುವ ನಗರ ಠಾಣೆ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಒಂದು ತಿಂಗಳ ಮಗು: ಅಪಘಾತದಲ್ಲಿ ಮೃತಪಟ್ಟಿರುವ ಪ್ರಸಾದ್ ಅವರಿಗೆ ಒಂದು ತಿಂಗಳ ಗಂಡು ಮಗು ಇದೆ. ಇವರಿಗೆ ಕೆಲ ವರ್ಷಗಳ ಹಿಂದೆ ನಾಗವಳ್ಳಿ ಗ್ರಾಮದ ಯುವತಿಯೊಂದಿಗೆ ವಿವಾಹವಾಗಿತ್ತು. ಪಿಎಸ್‌ಐ ಆಗಬೇಕೆಂಬ ನಿಟ್ಟಿನಲ್ಲಿ ಪ್ರಸಾದ್ ನಿರಂತರ ಅಭ್ಯಾಸದಲ್ಲಿ ನಿರತರಾಗಿದ್ದರು ಎನ್ನಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರ್‌ರಾಜ್ ಸೇರಿದಂತೆ ಇಲಾಖೆಯ ಅಧಿಕಾರಿಗಳು ಪ್ರಸಾದ್ ಅವರ ಅಂತಿಮ ದರ್ಶನ ಪಡೆದರು. ಮಂಗಳವಾರ ಅವರ ಸ್ವಗ್ರಾಮ ಇರಸವಾಡಿಯಲ್ಲಿ ಪೊಲೀಸ್ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು.

ಬೈಕ್ ಕಳವು ಆರೋಪಿ ಬಂಧನ


ಆರೋಪಿ ಧನುಷ್

ಕೊಳ್ಳೇಗಾಲ, ಏ.12(ನಾಗೇಂದ್ರಸ್ವಾಮಿ)–ಮನೆ ಮುಂದೆ ನಿಂತಿದ್ದ ಬೈಕ್ ಕದ್ದು ಪರಾರಿಯಾಗಿದ್ದ ಆರೋಪಿ ಗಸ್ತಿನಲ್ಲಿದ್ದ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

ಕೊಳ್ಳೇಗಾಲ ನಗರದ ಮಠದ ಬೀದಿಯ ನಿವಾಸಿ ಧನುಷ್(21) ಬಂಧಿತ ಆರೋಪಿ. ಕಳೆದ ಏ.8ರಂದು ಪಟ್ಟಣದ ಚಿಕ್ಕನಾಯಕರ ಬೀದಿಯಲ್ಲಿ ತನ್ನ ಅಕ್ಕನ ಮನೆಗೆ ಬಂದಿದ್ದ ಮಹೇಂದ್ರ ಎಂಬಾತ ಅಂದು ರಾತ್ರಿ ಮನೆ ಆಚೆ ಬೈಕ್ ನಿಲ್ಲಿಸಿದ್ದರು. ಈ ವೇಳೆ ಹೊಂಚು ಹಾಕಿದ್ದ ಆರೋಪಿ ಧನುಷ್ ಬೈಕ್ ಕದ್ದು ಪರಾರಿಯಾಗಿದ್ದ. ಬೈಕ್ ಕಳುವಾಗಿರುವ ಬಗ್ಗೆ ಮಹೇಂದ್ರ ನಗರ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಅಪರಾಧ ವಿಭಾಗದ ಪೊಲೀಸರು ಆರೋಪಿ ಪತ್ತೆಗೆ ಬಲೆ ಬೀಸಿದ್ದರು. ಏ.12ರಂದು ನಗರದ ಬಸ್ತಿಪುರ ಬಡಾವಣೆಯಲ್ಲಿ ಗಸ್ತಿನಲ್ಲಿದ್ದ ಪೊಲೀಸರು ಆರೋಪಿಯ ವಾಹನ ತಡೆದು ತಪಾಸಣೆ ನಡೆಸಿದ್ದಾರೆ. ಈ ವೇಳೆ ಬೈಕ್ ನಂಬರ್ ಪರಿಶೀಲಿಸಿದಾಗ ಆರೋಪಿ ಸಿಕ್ಕಿ ಬಿದ್ದಿದ್ದು, ಬೈಕ್ ಅನ್ನು ವಶಕ್ಕೆ ಪಡೆದ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ಪಿಎಸ್‌ಐ ಉಮಾವತಿ, ಪೇದೆಗಳಾದ ಪ್ರಕಾಶ್, ರಘು, ಬಿಳಿಗೌಡ, ಶಿವಕುಮಾರ ಸಿಬ್ಬಂದಿ ಇದ್ದರು. ಸದ್ಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನಾಳೆ ಉಸ್ತುವಾರಿ ಸಚಿವರ ಜಿಲ್ಲಾ ಭೇಟಿ



ಚಾಮರಾಜನಗರ, ಏ.12– ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಏ.14ರಂದು ಜಿಲ್ಲೆಗೆ ಭೇಟಿ ನೀಡುವರು.

ಅಂದು ಬೆಳಗ್ಗೆ 9 ಗಂಟೆಗೆ ಸಚಿವರು ನಗರಕ್ಕೆ ಆಗಮಿಸುವರು. ನಗರದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿರುವ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸುವರು. ಬಳಿಕ ಬೆಳಗ್ಗೆ 11 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಮಾಂಸ ಮಾರಾಟ ನಿಷೇಧ

ಚಾಮರಾಜನಗರ, ಏ. 12–ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಏ.14 ರಂದು ಮಹಾವೀರ ಜಯಂತಿ ಪ್ರಯುಕ್ತ ಮೀನು–ಮಾಂಸ ಮಾರಾಟ ಹಾಗೂ ಪ್ರಾಣಿವಧೆ ನಿಷೇಧಿಸಲಾಗಿದೆ.

ಅಂದು ಮಾಂಸ ಮಾರಾಟ, ಪ್ರಾಣಿವಧೆ ಮಾಡುವುದು ಕಂಡು ಬಂದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ನಗರ ಸಭಾ ಅಧ್ಯಕ್ಷೆ ಸಿ.ಎಂ.ಆಶಾ, ಉಪಾಧ್ಯಕ್ಷ ಪಿ.ಸುಧಾ ಹಾಗೂ ಪೌರಾಯುಕ್ತ ಕರಿಬಸವಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವ ವಿ.ಸೋಮಣ್ಣನವರ ತೇಜೋವಧೆ ಖಂಡನೀಯ



ಗುಂಡ್ಲುಪೇಟೆ, ಏ.12(ಸೋಮ್.ಜಿ)–ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣನವರ ಬಗ್ಗೆ ವೀರಶೈವ ನಿಗಮದ ಅಧ್ಯಕ್ಷ ಪರಮಶಿವಯ್ಯ ಸಭೆಗಳಲ್ಲಿ ತೇಜೋವಧೆ ಮಾಡಿ ಮಾತನಾಡುತ್ತಿರುವುದು ಖಂಡನೀಯ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ಹಂಗಳ ನಂಜಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದ ಸೋಮೇಶ್ವರ ಹಾಸ್ಟೆಲ್‌ನಲ್ಲಿರುವ ವೀರಶೈವ ಮಹಾಸಭಾ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಪಕ್ಷಾತೀತ ವ್ಯಕ್ತಿಯಾಗಿದ್ದು, ಸಮಾಜದ ಒಳಿತಿಗೆ ಶ್ರಮಿಸುತ್ತಿದ್ದಾರೆ. ಸಚಿವ ವಿ.ಸೋಮಣ್ಣನವರ ಬಗ್ಗೆ ವೀರಶೈವ ನಿಗಮದ ಅಧ್ಯಕ್ಷ ಪರಮಶಿವಯ್ಯ ಹಲವು ಸಭೆಗಳಲ್ಲಿ ತೇಜೋವಧೆ ಮಾಡಿ ಮಾತನಾಡುತಿದ್ದಾರೆ. ಇದು ಖಂಡನೀಯ. ಇನ್ನಾದರೂ ಈ ಸಂಸ್ಕೃತಿ ಬಿಡಬೇಕು. ದುರುದ್ದೇಶದಿಂದ ಅವರ ಬಗ್ಗೆ ಸಲ್ಲದ ಆರೋಪ ಮಾಡುತ್ತಿರುವುದನ್ನು ಘಟಕ ಖಂಡಿಸುತ್ತದೆ ಹಾಗೂ ಪರಮಶಿವಯ್ಯ ರಾಜೀನಾಮೆಗೆ ಒತ್ತಾಯಿಸುತ್ತದೆ ಎಂದು ಆಗ್ರಹಿಸಿದರು.

ಮೇ 17ರಂದು ಚಾಮರಾಜನಗರದಲ್ಲಿ ವೀರಶೈವ ಭವನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಮಿಸಲಿದ್ದಾರೆ ಎಂದು ಇದೇ ವೇಳೆ ತಿಳಿಸಿದರು. ಈ ಸಂದರ್ಭದಲ್ಲಿ ಮಹಾಸಭಾ ಉಪಾಧ್ಯಕ್ಷ ಹೆಚ್.ಕೆ.ಗಂಗಪ್ಪ, ಪ್ರಧಾನ ಕಾರ್ಯದರ್ಶಿ ಬಿ.ಕುಮಾರಸ್ವಾಮಿ ಮತ್ತು ಪದಾಧಿಕಾರಿಗಳಿದ್ದರು.

ಇಂದು ಡಾ.ಬಿ.ಆರ್.ಅಂಬೇಡ್ಕರ್ ವಿಚಾರ ಧಾರೆಗಳ ಕುರಿತು ವಿಚಾರ ಸಂಕಿರಣ



ಚಾಮರಾಜನಗರ, ಏ.12–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆ ಅಂಗವಾಗಿ ವಿಚಾರ ಸಂಕಿರಣ ವನ್ನು ಏ.13ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಮೈಸೂರಿನ ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಬಂತೇಜಿ ಅವರು ಸಾನ್ನಿಧ್ಯ ವಹಿಸುವರು. ಚಾಮರಾಜನಗರ ವಿರಕ್ತ ಮಠದ ಚೆನ್ನಬಸವ ಸ್ವಾಮೀಜಿ ವಿಚಾರ ಸಂಕಿರಣ ಉದ್ಘಾಟಿಸುವರು. ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಕೆ.ಎಂ.ಗಾಯತ್ರಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಮೈಸೂರಿನ ಹಿರಿಯ ಪತ್ರಕರ್ತರು ಹಾಗೂ ಲೇಖಕ ಡಾ.ಜಗದೀಶ್ ಕೊಪ್ಪಅವರು ಡಾ. ಬಿ.ಆರ್.ಅಂಬೇಡ್ಕರ್ ಸರ್ವಕಾಲಿಕ ಚಿಂತನೆಗಳ ಕುರಿತು ಮತ್ತು ಮೈಸೂರಿನ ಮಹಾರಾಜ ಕಾಲೇಜಿನ ಜಾನಪದ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಮನಾಪುರ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಿಳಾಪರ ಚಿಂತನೆಗಳ ಕುರಿತು ವಿಚಾರ ಮಂಡಿಸುವರು.

ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆ

ಚಾಮರಾಜನಗರ,ಏ.12– ಜಿಲ್ಲೆಯಲ್ಲಿ ಪೂರ್ವ ಮುಂಗಾರು ಬೆಳೆಗಳಾದ ಹೆಸರು, ಉದ್ದು, ಅಲಸಂದೆ ಮತ್ತು ಸೂರ್ಯಕಾಂತಿ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. ಸಾಮಾನ್ಯ ವರ್ಗಕ್ಕೆ ಶೇ.50ರಷ್ಟು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗಕ್ಕೆ ಶೇ.75ರಷ್ಟು ಸಹಾಯಧನ ದರದಲ್ಲಿ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಪೂರ್ವ ಮುಂಗಾರು ಹಂಗಾಮಿಗೆ ವಾಡಿಕೆ ಮಳೆ 168.0 ಮಿ.ಮೀ ಇದ್ದು ಪ್ರಸ್ತುತ 8.8 ಮಿ.ಮೀ. ಮಳೆಯಾಗಿದೆ. ಪೂರ್ವ ಮುಂಗಾರು ಹಂಗಾಮಿನಲ್ಲಿ 56.215 ಹೆಕ್ಟೇರ್ ಬಿತ್ತನೆ ಗುರಿಯಿದ್ದು, ಬಿತ್ತನೆ ಕಾರ್ಯ ಪ್ರಗತಿಯಲ್ಲಿದೆ.

ಜಿಲ್ಲೆಯ ಪ್ರತಿ ಹೋಬಳಿ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬೀಜಗಳ ದಾಸ್ತಾನು ಇದ್ದು, ರೈತ ಬಾಂಧವರು ಅಗತ್ಯ ದಾಖಲಾತಿಗಳೊಂದಿಗೆ ಸೌಲಭ್ಯ ಪಡೆಯುವಂತೆ ಜಂಟಿ ಕೃಷಿ ನಿರ್ದೇಶಕಿ ಹೆಚ್.ಟಿ. ಚಂದ್ರಕಲಾ ಕೋರಿದ್ದಾರೆ.

ಚರಂಡಿಗೆ ಬಿದ್ದು ವ್ಯಕ್ತಿ ಸಾವು

ಚಾಮರಾಜನಗರ, ಏ.12–ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿ ಭ್ರಮರಾಂಬ ಚಿತ್ರಮಂದಿರದ ಎದುರಿನ ಚರಂಡಿಗೆ ಬಿದ್ದು ವ್ಯಕಿಯೊಬ್ಬರು ಮೃತಪಟ್ಟಿದ್ದಾರೆ.

ನಗರದ ಸೋಮಣ್ಣ ಲೇಔಟ್‌ನ ರವಿ(55) ಮೃತಪಟ್ಟವರು. ಕಬ್ಬಿಣದ ಕೆಲಸ ಮಾಡುತ್ತಿದ್ದ ಇವರು ಮದ್ಯ ವ್ಯಸನಿಯಾಗಿದ್ದರು. ಮೂರು ತಿಂಗಳಿಂದ ಮನೆಗೆ ಹೋಗುತ್ತಿರಲಿಲ್ಲ. ರಾಚಯ್ಯ ಜೋಡಿ ರಸ್ತೆಯ ಪಾದಚಾರಿ ಮಾರ್ಗದಲ್ಲೇ ವಾಸವಿದ್ದರು. ಕುಟುಂಬಸ್ಥರೇ ಅವರಿಗೆ ಆಹಾರ ತಂದು ಕೊಡುತ್ತಿದ್ದರು. ಭಾನುವಾರದಿಂದ ಅವರು ಎಲ್ಲೂ ಕಾಣಿಸುತ್ತಿರಲಿಲ್ಲ. ಮಂಗಳವಾರ ಬೆಳಗ್ಗೆ ಚರಂಡಿಯಲ್ಲಿ ದೇಹ ಪತ್ತೆಯಾಗಿದೆ. ಮದ್ಯ ಸೇವಿಸಿ ಮಲಗಿದ್ದವರು ಆಯ ತಪ್ಪಿ ಚರಂಡಿಗೆ ಬಿದ್ದು ಮೃತಪಟ್ಟಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಚಾಮರಾಜನಗರ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಡಿಯಿಂದ ಬಿದ್ದು ಮಗು ಸಾವು



ವಿರಾಜಪೇಟೆ, ಏ.12– ಮಹಡಿ ಮೇಲಿಂದ 4 ವರ್ಷದ ಗಂಡು ಮಗು ಬಿದ್ದು ಸಾವನ್ನಪ್ಪಿರುವ ಘಟನೆ ಪಟ್ಟಣದ ಗೌರಿಕೆರೆ ಬಳಿಯ ಮನೆಯೊಂದರಲ್ಲಿ ಮಂಗಳವಾರ ನಡೆದಿದೆ. ಇಲ್ಲಿನ ನಿವಾಸಿ ಮುನೀರ್ ಹಾಗೂ ಫೌಜಿಯಾ ದಂಪತಿಯ ಪುತ್ರ ತಸ್ಲೀನ್ ಉರುಫ್ ಜಲ್ಸನ್(4) ಮೃತಪಟ್ಟ ಮಗು. ಮುನೀರ್ ಹಾಗೂ ಫೌಜಿಯಾ ದಂಪತಿ ಮನೆಯ ಮೊದಲ ಮಹಡಿಯಲ್ಲಿ ವಾಸವಾಗಿದ್ದರು. ಮಂಗಳವಾರ ಬೆಳಗ್ಗೆ ಎಂದಿನಂತೆ ಇವರ ಪುತ್ರ ತಸ್ಲೀನ್ ಮಹಡಿಯ ಬಾಲ್ಕನಿಯಲ್ಲಿ ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಬಿದ್ದಿದೆ. ಪರಿಣಾಮ ಮಗುವಿನ ತಲೆಗೆ ತೀವ್ರ ಸ್ವರೂಪದ ಗಾಯವಾಗಿ ಸ್ಥಳದಲ್ಲಿಯೇ ಸಾವನ್ನಪ್ಪಿದೆ. ಮಗು ಬೀಳುವ ಸಂದರ್ಭದಲ್ಲಿ ಮಗುವಿನ ತಂದೆ ಸ್ಥಳದಲ್ಲಿಯೇ ಇದ್ದು, ಮಗು ರಕ್ಷಣೆ ಮಾಡಲು ಮುಂದಾಗ ಅವರು ಕೂಡ ಬಿದ್ದು ಕಾಲಿಗೆ ಗಾಯವಾಗಿದೆ ಎಂದು ತಿಳಿದು ಬಂದಿದೆ. ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕ್ಷತ್ರ ಆಮೆ ಮಾರಾಟಕ್ಕೆ ಯತ್ನ: ಇಬ್ಬರ ಬಂಧನ



ಮಡಿಕೇರಿ, ಏ.12– ನಕ್ಷತ್ರ ಆಮೆಯನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಅಧಿಕಾರಿಗಳು ಮಾಲು ಸಹಿತ ಬಂಧಿಸಿದ್ದಾರೆ.

ಮಡಿಕೇರಿಯ ನಟೇಶ್ ಹಾಗೂ ಮಹಾದೇವ ಪ್ರಸಾದ್ ಬಂಧಿತ ಆರೋಪಿಗಳು. ಇವರು ಮಡಿಕೇರಿ ಸಮೀಪ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಜೀವಂತ ಒಂದು ನಕ್ಷತ್ರ ಆಮೆಯನ್ನು ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಅಧಿಕಾರಿಗಳು ಆರೋಪಿಗಳನ್ನು ಮಾಲು ಸಹಿತ ಬಂಧಿಸುವಲ್ಲಿ ಯಶಸ್ವಿ ಯಾಗಿದ್ದಾರೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಕೆ.ವಿ.ಶರತ್‌ಚಂದ್ರ ಅವರ ನಿರ್ದೇಶನದ ಮೇರೆಗೆ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕದ ಪ್ರಭಾರ ಪೊಲೀಸ್ ಅಧೀಕ್ಷಕ ಶ್ರೀನಿವಾಸ್ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ಸಿ.ಯು.ಸವಿ, ಸಿಬ್ಬಂದಿಗಳಾದ ಹೆಚ್.ಎಸ್.ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಸ್ವಾಮಿ ಹಾಗೂ ಮಂಜುನಾಥ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ನಾಪೋಕ್ಲು, ಏ.11– ಸಮೀಪದ ಬೇತು ಗ್ರಾಮ ಮಕ್ಕಿ ದೇವಸ್ಥಾನ ರಸ್ತೆ ಜಂಕ್ಷನ್‌ನಿಂದ ತೋಟಗಾರಿಕೆ ಇಲಾಖೆಯ ಸಂಪರ್ಕ ಕಲ್ಪಿಸುವ ರಸ್ತೆ ವರೆಗೆ 9 ಲಕ್ಷ ರೂ. ವೆಚ್ಚದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮಂಗಳವಾರ ಚಾಲನೆ ನೀಡಲಾಯಿತು.

ಕಲಿಯಂಡ ಕಾಳಪ್ಪ, ಡಾ.ರಾಜೇಂದ್ರ, ಭಾಜಪಾ ನಾಪೋಕ್ಲು ಶಕ್ತಿ ಕೇಂದ್ರ ಸಂಚಾಲಕ ಅಂಬಿ ಕಾರ್ಯಪ್ಪ, ಸಹ ಸಂಚಾಲಕ ಕೇಲೇಟ್ಟಿರ ದೀಪು ದೇವಯ್ಯ, ತಾಲೂಕು ಕೃಷಿ ಮೋರ್ಚಾ ಅಧ್ಯಕ್ಷ ಶಿವಚಾಳಿಯಂಡ ಜಗದೀಶ್, ತಾಲೂಕು ಕಾರ್ಯದರ್ಶಿ ಮನುಮಹೇಶ್, ಕೊಂಡಿರ ಮೋಹನ್, ಜಾಲಿ ಪೂವಪ್ಪ ಇದ್ದರು.

ಸಂವಿಧಾನ, ಪ್ರಜಾಪ್ರಭುತ್ವದ ರಕ್ಷಣೆ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ



ಸೋಮವಾರಪೇಟೆ, ಏ.12– ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ಮಾಜಿ ಸಚಿವ ಬಿ.ಎ.ಜೀವಿಜಯ ಹೇಳಿದರು.

ಪಟ್ಟಣದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೆಲ್ಲಲೇಬೇಕೆಂಬ ಹುಚ್ಚು ಸಾಹಸಕ್ಕೆ ಕೈ ಹಾಕಿರುವ ಬಿಜೆಪಿ, ದೇಶಾದ್ಯಂತ ಕೋಮು ಘರ್ಷಣೆಗೆ ಕುಮ್ಮಕ್ಕು ನೀಡಿ, ಅಶಾಂತಿ ವಾತಾವರಣ ಸೃಷ್ಟಿ ಮಾಡುತ್ತಿದೆ. ಕರ್ನಾಟಕದಲ್ಲಿ ಪ್ರತಿನಿತ್ಯ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಸುವುದಕ್ಕೆ ಪರೋಕ್ಷವಾಗಿ ಸಹಕಾರ ನೀಡುತ್ತಿದೆ ಎಂದು ದೂರಿದರು.

ಕಾಂಗ್ರೆಸ್ ಆಡಳಿತದಲ್ಲಿ ಸರ್ವ ಧರ್ಮಗಳ ಶಾಂತಿಯ ರಾಷ್ಟ್ರ ಭಾರತ ವಾಗಿತ್ತು ಎರಡು ಲೋಕಸಭಾ ಸದಸ್ಯರನ್ನು ಹೊಂದಿದ್ದ ಬಿಜೆಪಿ, ಜನರಲ್ಲಿ ಕೋಮು ಭಾವನೆಯನ್ನು ಕೆರಳಿಸಿ, ಇಂದು ಅಧಿಕಾರ ಹಿಡಿದಿದೆ. ಅಧಿಕಾರ ದಾಹದಿಂದ ಈಗ ದೇಶದೆಲ್ಲಡೆ ಅಶಾಂತಿಯನ್ನು ಸೃಷ್ಟಿ ಸುತ್ತಿದೆ. ದೇಶದ ಪ್ರಜೆಗಳು ನೆಮ್ಮದಿಯಿಂದ ಬದುಕಬೇಕಾದರೆ ಕಾಂಗ್ರೆಸ್ ದೇಶ ಹಾಗೂ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿಯಬೇಕು ಎಂದು ಹೇಳಿದರು.

ಕೇಂದ್ರ ಸರ್ಕಾರದ ರೈತ ವಿರೋಧಿ, ಕಾರ್ಮಿಕ ವಿರೋಧಿ ಹಾಗೂ ಬಡವರ ವಿರೋಧಿ ನೀತಿಯಿಂದ ಜನರು ಬೇಸತ್ತಿದ್ದಾರೆ. ಬಿಜೆಪಿಯ ದುರಾಳಿತದಿಂದ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಇಂಧನ, ಅಡುಗೆ ಅನಿಲ ಬೆಲೆ ದುಪ್ಪಟ್ಟಾಗಿದೆ. ದೇಶದ ಬಹುತೇಕ ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗಿದೆ ಎಂದು ದೂರಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಪಿ. ಚಂದ್ರಕಲಾ ಮಾತನಾಡಿ, ಕಳೆದ 25 ವರ್ಷಗಳಿಂದ ಕೊಡಗಿನ ಅಭಿವೃದ್ಧಿ ಆಗಿಲ್ಲ. ಯಾವುದೇ ವಿಶೇಷ ಅನುದಾನಗಳು ಸಿಗುತ್ತಿಲ್ಲ. ಕೆಲವು ವರ್ಷಗಳ ಬಿಜೆಪಿ ಆಡಳಿತದಿಂದ ಜನರು ಬೇಸತ್ತಿದ್ದಾರೆ. ಈ ಬಾರಿ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಬಿ. ಸತೀಶ್, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮಿಥುನ್‌ಗೌಡ, ಕೆಪಿಸಿಸಿ ಎಸ್‌ಸಿ ಘಟಕದ ರಾಜ್ಯ ಸಂಚಾಲಕ ಬಿ.ಇ.ಜಯೇಂದ್ರ ಇದ್ದರು.

ಏ. 16ರಂದು ಸಾಮೂಹಿಕ ಸತ್ಯನಾರಾಯಣ ಪೂಜೆ



ಮಡಿಕೇರಿ, ಏ.12– ಭಾಗಮಂಡಲದ ಶ್ರೀಭಗಂಡೇಶ್ವರ ದೇವಾಲಯಗಳಲ್ಲಿ ಏ.16ರಂದು ಸಂಜೆ 4 ಗಂಟೆಯಿಂದ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ನಡೆಯಲಿದೆ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು ದೇವಾಲಯಗಳಲ್ಲಿ ನಡೆಯುವ ಸಾಮೂಹಿಕ ಸತ್ಯ ನಾರಾಯಣ ಪೂಜೆಯಲ್ಲಿ ಭಾಗವಹಿಸಿ ಪೂಜೆಯನ್ನು ಯಶಸ್ವಿಗೊಳಿಸಬೇಕಾಗಿ ಭಾಗಮಂಡಲದ ಶ್ರೀ ಭಗಂಡೇಶ್ವರ–ತಲಕಾವೇರಿ ಮತ್ತು ಸಮೂಹ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿ ಬಿ.ಎಂ.ಕೃಷ್ಣಪ್ಪ ಕೋರಿದ್ದಾರೆ.



ಮಡಿಕೇರಿಯ ಖಾಸಗಿ ರೆಸಾರ್ಟ್‌ನಲ್ಲಿ ಹೊಸ್ಕೇರಿ ಅರೆಕಾಡು ಕೊಡವ ವೆಲ್‌ಫೇರ್ ಮತ್ತು ರಿಕ್ರಿಯೇಷನ್ ಅಸೋಸಿಯೇಷನ್‌ನ ಮೊದಲ ಸ್ಥಾಪಕ ವರ್ಷಾಚರಣೆ ಅರೆಕಾಡಿನ ನಡೆಯಿತು. ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಶಾಂತೆಯಂಡ ವೀಣಾ ಅಚ್ಚಯ್ಯ ಹಾಗೂ ಮಂಡೇಪಂಡ ಪಿ.ಸುಜಾ ಕುಶಾಲಪ್ಪ ಹಾಗೂ ಅಣ್ಣಾರ್ಕಂಡ ಪ್ರೇಮ್ ಅಯ್ಯಪ್ಪ, ಮಂಡೇಪಂಡ ಪೊನ್ನಪ್ಪ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಅಸೋಸಿಯೇಷನ್ ಅಧ್ಯಕ್ಷ ಕುಕ್ಕೇರ ಜಯ ಚಿಣ್ಣಪ್ಪ, ಕಾರ್ಯಕಾರಿ ಮಂಡಳಿ ನಿರ್ದೇಶಕರು ಹಾಗೂ 200ಕ್ಕೂ ಅಧಿಕ ಸದಸ್ಯರು ಉಪಸ್ಥಿತರಿದ್ದರು.

ಅಕ್ರಮವಾಗಿ ಸಾಗಿಸುತ್ತಿದ್ದ 300 ಚೀಲ ಯೂರಿಯಾ ರಸಗೊಬ್ಬರ ಲಾರಿ ಸಹಿತ ಜಪ್ತಿ



ಮಡಿಕೇರಿ, ಏ.12– ಯೂರಿಯಾ ರಸಗೊಬ್ಬರವನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಪ್ರಕರಣವನ್ನು ಕೃಷಿ ಇಲಾಖೆ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. 300 ಚೀಲ ಗೊಬ್ಬರ ಹಾಗೂ ಲಾರಿಯನ್ನು ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರೆದಿದೆ.

ಘಟನೆ ವಿವರ: ಕುಶಾಲನಗರದ ಕೈಗಾರಿಕಾ ಬಡಾವಣೆಯ ಮರದ ಮಿಲ್ ಒಂದರ ಆವರಣದಲ್ಲಿ ಸೋಮವಾರ ರಾತ್ರಿ ಲಾರಿಯೊಂದಕ್ಕೆ ಬೇರೆ ಎರಡು ವಾಹನಗಳಲ್ಲಿ ತಂದಿದ್ದ ಯೂರಿಯಾ ರಸಗೊಬ್ಬರವನ್ನು ತುಂಬಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಕೃಷಿ ಅಧಿಕಾರಿಗಳು ಕಾರ್ಯಾಚರಣೆಗೆ ಮುಂದಾದರು.

ಬಳಿಕ, ಮಡಿಕೇರಿ ಕಡೆಗೆ ಹೊರಟ ಲಾರಿಯನ್ನು ಹಿಂಬಾಲಿಸಿದ ಅಧಿಕಾರಿಗಳು ನಗರ ಠಾಣಾ ಪೊಲೀಸರಿಗೆ ಮಾಹಿತ ರವಾನಿಸಿದರು. ನಗರದ ಫೀ.ಮಾ.ಕಾರ್ಯಪ್ಪ ವೃತ್ತದ ಬಳಿ ಬಂದ ಲಾರಿಯನ್ನು ಪೊಲೀಸರು ತಡೆದು ಪರಿಶೀಲಿಸಿದಾಗ ಯೂರಿಯಾ ರಸಗೊಬ್ಬರ ಇರುವುದು ಕಂಡು ಬಂದಿದೆ. ಚಾಲಕ ನೀಡಿದ ಬೆಂಗಳೂರು ಬೈಯಪ್ಪನ ಹಳ್ಳಿಯ ಖಾಸಗಿ ಟ್ರೇಡರ್ಸ್‌ನ ಬಿಲ್‌ನಲ್ಲಿ ಯೂರಿಯಾ ಬದಲು 'ನೈಟ್ರೋಜಿಯಸ್ ಕೆಮಿಕಲ್ ಕಾಂಪೌಂಡ್' 10ಟನ್ ಎಂದು ಸರಬರಾಜು ಮಾಡುವ ಕುರಿತು ನಮೂದಿಸಲಾಗಿತ್ತು. ಇದರಿಂದ ಯೂರಿಯಾ ರಸಗೊಬ್ಬರ ಅಕ್ರಮವಾಗಿ ಸಾಗಾಟವಾಗುತ್ತಿರುವುದು ಖಾತ್ರಿಗೊಂಡು ಗೊಬ್ಬರ ಸಹಿತ ಲಾರಿಯನ್ನು ನಗರ ಠಾಣಾ ಪೊಲೀಸರ ವಶಕ್ಕೆ ಒಪ್ಪಿಸಲಾಯಿತು.

ಲಾರಿಯಲ್ಲಿ ಸುಮಾರು 300 ಚೀಲ ಯೂರಿಯಾ ರಸಗೊಬ್ಬರ ಇರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಸಹಾಯಕ ಕೃಷಿ ನಿರ್ದೇಶಕರಾದ ರಿಯಾಜ್ ಅಹಮ್ಮದ್ ಷರೀಫ್ ಅವರು ನಗರ ವೃತ್ತ ನಿರೀಕ್ಷಕರಿಗೆ ದೂರು ನೀಡಿದ್ದು, ಪ್ರಕರಣದ ಕುರಿತು ತನಿಖೆ ನಡೆಸುವಂತೆ ಕೋರಿದ್ದಾರೆ.

ಸುಟ್ಟತ್ ಮಲೆ ರಕ್ಷಿತಾರಣ್ಯದಲ್ಲಿ ಅಕ್ರಮವಾಗಿ ಕೆಂಪು ಹರಳು ಕಲ್ಲು ಗಣಿಗಾರಿಕೆ: ದೂರು

ಪಶ್ಚಿಮ ಘಟ್ಟ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ ಪರಿಶೀಲನೆ



ಮಡಿಕೇರಿ, ಏ.12– ಕೊಡಗು ಸುಳ್ಯ ಗಡಿ ಭಾಗದ ಸುಬ್ರಹ್ಮಣ್ಯ ಅರಣ್ಯ ವಲಯದ ಸುಟ್ಟತ್ ಮಲೆ ರಕ್ಷಿತಾರಣ್ಯದಲ್ಲಿ ಅಕ್ರಮವಾಗಿ ಕೆಂಪು ಹರಳು ಕಲ್ಲು ಗಣಿಗಾರಿಕೆ ನಡೆಯುತ್ತಿದೆ ಎಂದು ಸಾರ್ವಜನಿಕರಿಂದ ವ್ಯಾಪಕ ದೂರು ಬಂದ ಹಿನ್ನೆಲೆಯಲ್ಲಿ ಮಂಗಳವಾರ ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ ಸ್ಥಳಕ್ಕೆ ತೆರಳಿ, ಪರಿಶೀಲಿಸಿದರು.

ಸ್ಥಳೀಯ ಗ್ರಾಮಸ್ಥರು, ಅರಣ್ಯ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಸುಮಾರು 7 ಕಿ.ಮೀ. ಕಾಲ್ನಡಿಗೆಯಲ್ಲಿ ತೆರಳಿ ಸ್ಥಳ ಪರಿಶೀಲಿಸಿದಾಗ ಕಳೆದ 15 ವರ್ಷಗಳಿಂದ ನಿರಂತರವಾಗಿ ಕೆಂಪು ಹರಳು ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಬೆಳಕಿಗೆ ಬಂದಿದೆ. ಮಾತ್ರವಲ್ಲದೇ, ಕೆಲವು ದಿನಗಳ ಹಿಂದೆ ಏಳೆಂಟು ಕಡೆ ಸುರಂಗ ತೋಡಿ ಕಲ್ಲು ಸಂಗ್ರಹಿಸಿರುವುದು ಕಂಡು ಬಂದಿದೆ. ಶೀಘ್ರವೇ ಅರಣ್ಯ ಸಚಿವರು ಹಾಗೂ ಮುಖ್ಯಮಂತ್ರಿಗಳನ್ನು ಭೇಟಿ ಪ್ರಕರಣ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಲಾಗುವುದು ಎಂದು ರವಿ ಕುಶಾಲಪ್ಪ ತಿಳಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಏ.12– ಮೂರ್ನಾಡು 33/11 ಕೆವಿ ವಿದ್ಯುತ್ ಉಪ–ಕೇಂದ್ರದಿಂದ ಹೊರ ಹೋಗುವ ಮೂರ್ನಾಡು ಹಾಗೂ ನಾಪೋಕ್ಲು ಶಾಖಾ ವ್ಯಾಪ್ತಿಯ ಎಲ್ಲಾ ಫೀಡರ್‌ಗಳಲ್ಲಿ ತುರ್ತು ನಿರ್ವಹಣೆ ಕಾರ್ಯ ನಡೆಸಬೇಕಿರುವುದರಿಂದ ಏ. 13ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು.

ಏ.16 ಹನುಮ ಜಯಂತಿ

ವಿರಾಜಪೇಟೆ, ಏ.12– ಪಟ್ಟಣದ ಛತ್ರಕೆರೆ ಬಳಿಯ ಶ್ರೀವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಏ. 16ರಂದು ಶನಿವಾರ ಶ್ರೀಹನುಮ ಜಯಂತಿ ಆಚರಿಸಲಾಗುವುದು. ಅಂದು ದೇವಾಲಯದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆಗಳು ನಡೆದು ಮಧ್ಯಾಹ್ನ 12.30ಕ್ಕೆ ಮಹಾಪೂಜೆ ನಡೆಯಲಿದೆ. ಬಳಿಕ, ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಾಲಯ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಒಂದನೇ ಪುಟದಿಂದ

ಮತ್ತೆ ಸರ್ಕಾರ ರಚಿಸುತ್ತೇವೆ

ಮೈಸೂರು ಸೇರಿದಂತೆ ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಅತೀ ಹೆಚ್ಚು ಸ್ಥಾನದಲ್ಲಿ ಗೆಲ್ಲಲಿದೆ. ಬಹುಮತದೊಂದಿಗೆ ಸರ್ಕಾರ ರಚನೆ ಮಾಡಿದಾಗ ಸಚಿವ ಸ್ಥಾನ ಹಂಚಿಕೆಯಲ್ಲಿ ವ್ಯತ್ಯಾಸ ವಾಗುವುದು ಸಹಜ. ಆದರೆ ಖಂಡಿತವಾಗಿ ಮೈಸೂರಿಗೂ ನ್ಯಾಯ ಸಿಗಲಿದೆ ಎಂದರು.

3 ತಂಡಗಳ ರಾಜ್ಯ ಪ್ರವಾಸ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಮಂಗಳೂರು ವಿಭಾಗ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹಾಗೂ ರಾಜ್ಯಸಭಾ ಸದಸ್ಯ ಅರುಣ್ ಸಿಂಗ್ ನೇತೃತ್ವದಲ್ಲಿ ಬೆಳಗಾವಿ ವಿಭಾಗ ಮತ್ತು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಚಿವರಾದ ವಿ.ಸೋಮಣ್ಣ, ಗೋಪಾಲಯ್ಯ, ನಾರಾಯಣಗೌಡ ಇನ್ನಿತರ ನಾಯಕರ ನೇತೃತ್ವದಲ್ಲಿ ಮೈಸೂರು ವಿಭಾಗದಲ್ಲಿ ಇಂದಿನಿಂದ ರಾಜ್ಯ ಪ್ರವಾಸ ಆರಂಭವಾಗಿದೆ. ಈ ಮೂರು ತಂಡಗಳು ಏ.24ರವರೆಗೆ ಆಯಾಯ ವಿಭಾಗಗಳ ಕೇಂದ್ರಗಳು, ವ್ಯಾಪ್ತಿಗೆ ಒಳಪಡುವ ನಾಲ್ಕೈದು ಜಿಲ್ಲಾ ಕೇಂದ್ರಗಳಲ್ಲಿ ಪಕ್ಷದ ಪ್ರಮುಖರು, ಕೋರ್ ಕಮಿಟಿ ಸಭೆ ನಡೆಸಿ, ಪ್ರಸ್ತುತ ಸ್ಥಿತಿಗತಿ ಅವಲೋಕಿಸಲಿವೆ. ವಿಭಾಗ ಮಟ್ಟದಿಂದ ಬೂತ್‌ವರೆಗೂ ಸಂಪರ್ಕಿಸಿ, ಸಂವಾದ ನಡೆಸಿ ಪಕ್ಷ ಹಾಗೂ ಸರ್ಕಾರದ ಬಗ್ಗೆ ಜನರ ಅಭಿಪ್ರಾಯ, ನಿರೀಕ್ಷೆ ಸೇರಿದಂತೆ ಸಮಗ್ರ ಮಾಹಿತಿ ಕ್ರೋಢೀಕರಿಸಲಾಗುವುದು. ಮುಂದಿನ ಚುನಾವಣೆ ನೀಲನಕ್ಷೆ ಆಧಾರದಲ್ಲಿ ಯಾತ್ರೆ ರೂಪಿಸಲಾಗುವುದು ಎಂದರು.

ರಾಜಕೀಯ ಸಂಘಟನೆ ತಯಾರಿ: ಈವರೆಗೆ ಪೇಜ್ ಪ್ರಮುಖ್ ಎಂದಿತ್ತು. ಇನ್ನು ಮುಂದೆ ಮತದಾರರ ಪಟ್ಟಿಯ ಒಂದು ಪೇಜ್ ಜವಾಬ್ದಾರಿಯನ್ನು 6 ಮಂದಿಯುಳ್ಳ ಪೇಜ್ ಕಮಿಟಿಗೆ ವಹಿಸಲಾಗುವುದು. ಈಗಾಗಲೇ ಶೇ.60ರಷ್ಟು ಪೇಜ್ ಕಮಿಟಿ ರಚನೆಯಾಗಿದ್ದು, ಈ ಕಮಿಟಿಗಳ ಮೇಲ್ವಿಚಾರಣೆಯನ್ನು ವಿಸ್ತಾರ್ ಕಮಿಟಿಗೆ ವಹಿಸಲಾಗುವುದು. ಶಾಸಕ ಎಸ್.ಎ.ರಾಮದಾಸ್ ತಮ್ಮ ಕ್ಷೇತ್ರದಲ್ಲಿ ಪರಿಚಯಿಸಿದ ಬೂತ್ ಅಧ್ಯಕ್ಷರ ಮನೆಗೆ ನಾಮಫಲಕ ಅಳವಡಿಸುವ ಕಾರ್ಯಕ್ರಮವನ್ನು ರಾಜ್ಯಾದ್ಯಂತ ವಿಸ್ತರಿಸಿದ್ದು, ಅದು ಯಶಸ್ವಿಯಾಗಿದೆ. ಹೀಗೆ ಸಂಘಟನಾತ್ಮವಾಗಿ ಸಾಕಷ್ಟು ಚಟುವಟಿಕೆ ನಡೆದಿದ್ದು, ಇನ್ನು ಮುಂದೆ ರಾಜಕೀಯ ಸಂಘಟನೆಯನ್ನು ಚುರುಕುಗೊಳಿಸಲಾಗುವುದು. ಈ ಹಿಂದೆ ಕೈಗೊಂಡಿದ್ದ ಯಾತ್ರೆಗಳಿಂದ ಚುನಾವಣೆಗಳಿಗೆ ಸಹಕಾರಿಯಾಗಿರುವ ಅನುಭವದೊಂದಿಗೆ ಅಚ್ಚುಕಟ್ಟಾದ ಕಾರ್ಯಕ್ರಮಗಳಿಗೆ ತಯಾರಿ ಮಾಡಿಕೊಳ್ಳಲಾಗುತ್ತಿದೆ ಎಂದರು.

ಜನರ ನಂಬಿಕೆ ಹೆಚ್ಚಿದೆ: ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಯಕ್ರಮಗಳು, ಜಗತ್ತನ್ನೇ ತಲ್ಲಣಗೊಳಿಸಿದ ಕೋವಿಡ್ ನಿರ್ವಹಣೆಯಲ್ಲಿನ ಯಶಸ್ಸು, ಉಕ್ರೇನ್‌ನಲ್ಲಿ ಸಿಲುಕಿದ್ದ 22 ಸಾವಿರ ಭಾರತೀಯರನ್ನು ಯುದ್ಧದ ನಡುವೆಯೇ ಸುರಕ್ಷಿತವಾಗಿ ಕರೆತಂದದ್ದು, ಕೊರೊನಾ ಸಂಕಷ್ಟದಲ್ಲೂ ಆರ್ಥಿಕ ಪರಿಸ್ಥಿತಿ ಕುಸಿಯದಂತೆ ಕಾಯ್ದುಕೊಂಡಿದ್ದು, ಭಾರತಕ್ಕೆ ದೊರಕುತ್ತಿರುವ ಜಾಗತಿಕ ಗೌರವ, ಹೀಗೆ ಹಲವು ಕಾರಣಗಳಿಂದ ಜನರಲ್ಲಿ ಬಿಜೆಪಿ ಮೇಲೆ ನಂಬಿಕೆ, ವಿಶ್ವಾಸ ಹಾಗೂ ನಿರೀಕ್ಷೆ ಹೆಚ್ಚಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿಯತ್ತ ಕಾಂಗ್ರೆಸ್, ಜೆಡಿಎಸ್ ಪ್ರಮುಖರು: ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳ ಕಾರ್ಯಕರ್ತರು ಭ್ರಮನಿರಸರಾಗಿದ್ದಾರೆ. ಜಿಲ್ಲೆ, ತಾಲೂಕು, ಮಂಡಲ ಮಟ್ಟದ ಅಪಾರ ಪ್ರಮುಖರಲ್ಲಿ ಬಿಜೆಪಿ ಸೇರುವ ಆಕಾಂಕ್ಷೆಯಿದೆ. ಆದರೆ ಏಕಾಏಕಿ ಸೇರ್ಪಡೆ ಮಾಡಿಕೊಳ್ಳುವುದಕ್ಕಿಂತ ಆಯಾಯ ಭಾಗದ ಕಾರ್ಯಕರ್ತರ ಅಭಿಪ್ರಾಯ, ಸೇರ್ಪಡೆಯಿಂದಾಗುವ ಪರಿಣಾಮದ ಬಗ್ಗೆ ಪರಾಮರ್ಶಿಸಿ ಮುಂದುವರೆಯಲು ನಿರ್ಧರಿಸಲಾಗಿದೆ.

ಯಾರೊಂದಿಗೂ ಹೊಂದಾಣಿಕೆ ಇಲ್ಲ: ಬಿಜೆಪಿ ಅಭಿವೃದ್ಧಿ ಮೇಲೆ ನಂಬಿಕೆ ಇಟ್ಟಿದೆ. ಆಡಳಿತ ಪಕ್ಷಕ್ಕೆ ಹತ್ತಾರು ಸಮಸ್ಯೆಗಳು, ವಿಚಾರಗಳು ಎದುರಾಗುವುದು ಸಹಜ. ಆದರೆ ಎಲ್ಲದರಲ್ಲೂ ಲಾಭ ನೀಡುವ ಪಕ್ಷ ನಮ್ಮದಲ್ಲ. ಪರಿಸ್ಥಿತಿಯನ್ನು ಸಮರ್ಥವಾಗಿ ನಿಬಾಯಿಸಿಕೊಂಡು ಜವಾಬ್ದಾರಿಯುತವಾಗಿ ಸರ್ಕಾರ ನಡೆಯುತ್ತದೆ. ಅಭಿವೃದ್ಧಿ ಹಾಗೂ ಸಂಘಟನೆ ಮಾತ್ರ ನಮ್ಮ ಪಕ್ಷದ ತಂತ್ರಗಳು. ಬಿಜೆಪಿ ಚುನಾವಣೆಯಲ್ಲಿ ಯಾವ ಸಂಘಟನೆ ಅಥವಾ ಪಕ್ಷದೊಂದಿಗೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಬಿಜೆಪಿ ಸ್ವಂತ ಬಲದಲ್ಲೇ ಸ್ಪರ್ಧೆ ಮಾಡುತ್ತದೆ ಎಂದು ಸ್ಪಷ್ಟಪಡಿಸಿದರು. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಚಿವರಾದ ವಿ.ಸೋಮಣ್ಣ, ಕೆ.ಸಿ.ನಾರಾಯಣಗೌಡ, ಕೆ.ಎಸ್.ಈಶ್ವರಪ್ಪ, ಗೋಪಾಲಯ್ಯ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಪಕ್ಷದ ಉಪಾಧ್ಯಕ್ಷ ಎಂ.ರಾಜೇಂದ್ರ, ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ವಕ್ತಾರ ಮಹೇಶ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಜನತಾ ಜಲಧಾರೆ ಯಾತ್ರಾ ರಥಕ್ಕೆ ಪೂಜೆ

ಮುಂಬರುವ ಚುನಾವಣೆಗಾಗಿ ಸಿದ್ಧತೆ ಮಾಡಿಕೊಳ್ಳಲು ಜಲಧಾರೆ ಯಾತ್ರೆ ನಡೆಸಲಾಗುತ್ತಿದೆ. ಈ ಯಾತ್ರೆಯೊಂದಿಗೆ ರಾಜ್ಯದಲ್ಲಿ ಅಧಿಕೃತ ಚುನಾವಣಾ ಪ್ರಚಾರ ಆರಂಭಿಸುತ್ತಿದ್ದೇವೆ. ಪ್ರಚಾರ ನಡೆಸುವ ಬಗ್ಗೆ ನೇರವಾಗಿ ಹೇಳುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಈ ಬಾರಿ ಕನ್ನಡಿಗರ ಬಹುಮತದ ಸರ್ಕಾರ ಬರಬೇಕು. ಯಾವ ಪಕ್ಷದೊಂದಿಗೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಅಲ್ಲದೆ, ಕೇವಲ 30 ಅಥವಾ 40 ಸ್ಥಾನ ಪಡೆಯುವುದಕ್ಕಾಗಿ ಈ ಹೋರಾಟ ಮಾಡುತ್ತಿಲ್ಲ. ಪೂರ್ಣ ಪ್ರಮಾಣದಲ್ಲಿ ಬಹುಮತದ ಸರ್ಕಾರ ತರಲು ಈ ಹೋರಾಟ ನಡೆಸಲಾಗುತ್ತಿದೆ. ನಮ್ಮದು ವಿಚಾರ ಆಧರಿತ ಹೋರಾಟ. ಧರ್ಮ-ಧರ್ಮಗಳ ನಡುವೆ ಬೆಂಕಿ ಇಟ್ಟು ಮತ ಕೇಳುತ್ತಿಲ್ಲ. ರಾಜ್ಯದ ಅಭಿವೃದ್ಧಿಗಾಗಿ ನಮ್ಮ ಹೋರಾಟ ಎಂದು ತಿಳಿಸಿದರು.

ನನ್ನ ಮಾತಲ್ಲ; ನನ್ನ ಕೆಲಸಗಳು ಮಾತನಾಡುತ್ತವೆ ಎಂದು ಹೇಳಿದ್ದ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಅವರಿಗೆ ತಿರುಗೇಟು ನೀಡಿದ ಹೆಚ್‌ಡಿಕೆ, ನಿಮ್ಮ ಯಾವ ಕೆಲಸ ಮಾತನಾಡುತ್ತಿದೆ? ರಾಯಚೂರಿನಲ್ಲಿ ಯಾವ ಕಾರಣಕ್ಕೆ ತಲವಾರ್ ಹಂಚಿದ್ದಾರೆ? ಅವರನ್ನು ನೀವು ಬಂಧಿಸಿದ್ದೀರಾ? ಮೌನಿ ಬಸವರಾಜ ಬೊಮ್ಮಾಯಿ ಅವರೇ. ರಾಯಚೂರಿನಲ್ಲಿ ಲವ್ ಕೇಸರಿ ವಿಚಾರ ಪ್ರಸ್ತಾಪವಾಗಿದೆ. ಯಾವುದೇ ಪ್ರೀತಿಯಲ್ಲಿ ಬಾಂಧವ್ಯ ಮುಖ್ಯ. ಪರಸ್ಪರ ಪ್ರೀತಿಸುವವರಿಗೆ ತೊಂದರೆ ಕೊಡಬಾರದು. ಅವರು ಯಾವ ಧರ್ಮದವರೇ ಆಗಿರಲಿ. ಅವರನ್ನು ನಿಯಂತ್ರಿಸುವ ಕೆಲಸ ಮಾಡಬಾರದು ಎಂದು ಹೇಳಿದರು.

ತಲೆ ಒಡೆಯಲು ಕಾಯುತ್ತಿದ್ದೀರಾ: ಕಲ್ಲಂಗಡಿ ಒಡೆದಾಗ ತೋರಿದ ಅನುಕಂಪ, ತಲೆ ಒಡೆದಾಗಲೂ ತೋರಿಸಿ ಎಂದು ಹೇಳಿಕೆ ನೀಡಿರುವ ಬಿಜೆಪಿ ಶಾಸಕ ಸಿ.ಟಿ.ರವಿ ವಿರುದ್ಧ ಹರಿಹಾಯ್ದ ಅವರು, ನಿಮ್ಮ ಮಾತಿನ ಅರ್ಥ ಏನು?, ತಲೆ ಒಡೆಯಲು ಕಾಯುತ್ತಿದ್ದೀರಾ ನೀವು? ರಾಜ್ಯದಲ್ಲಿ ತಲೆ ಒಡೆಯುತ್ತಾ ಇರುತ್ತೇವೆ ಅಂತಾನಾ? ನೀವು ತಲೆ ಒಡೆಯುತ್ತಿರಿ. ನಾವು ಸಾಂತ್ವನ ಹೇಳಬೇಕಾ ಎಂದು ಪ್ರಶ್ನಿಸಿದರು.

ಹಾಸನದಲ್ಲಿ ನಿರ್ಬಂಧ ಹೇರಲ್ಲ: ಹಾಸನ ಜಿಲ್ಲೆಯಲ್ಲಿ ಯಾವ ಜಾತ್ರೆಯಲ್ಲೂ ಮುಸ್ಲಿಂಮರಿಗೆ ನಿರ್ಬಂಧ ಹೇರುವುದಕ್ಕೆ ಅವಕಾಶ ಕೊಡುವುದಿಲ್ಲ. ಚೆನ್ನಕೇಶವ ಜಾತ್ರೆಯಲ್ಲಿ ಸಮಸ್ಯೆ ಆಗಿರುವುದು ಗಮನಕ್ಕೆ ಬಂದಿದೆ. ಖುದ್ದು ಶಾಸಕ ಹೆಚ್.ಡಿ.ರೇವಣ್ಣ ಅವರಿಗೆ ಸಮಸ್ಯೆ ಬಗೆಹರಿಸುವಂತೆ ಹೇಳಿದ್ದೇನೆ. ನಿರ್ಬಂಧ ತೆರವು ಮಾಡಿಸಿ ಅವರಿಗೆ ವ್ಯಾಪಾರಕ್ಕೆ ಅವಕಾಶ ಕೊಡಿಸುತ್ತೇನೆ. ಹಾಸನ ಜಿಲ್ಲೆ ಮಾತ್ರ ಅಲ್ಲ, ಎಲ್ಲ ಜಿಲ್ಲೆಗಳಲ್ಲೂ ನಿರ್ಬಂಧ ತೆರವಿಗೆ ನನ್ನ ಹೋರಾಟ ಇರುತ್ತದೆ ಎಂದು ಸ್ಪಷ್ಟಪಡಿಸಿದರು.

ಕಾರ್ಯಕ್ರಮವೊಂದರಲ್ಲಿ ಕಾಂಗ್ರೆಸ್ ಸರ್ಕಾರ ಕಿತ್ತೊಗೆಯಿರಿ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಅದು ಬಾಯಿ ತಪ್ಪಿ ಆಡಿದ ಮಾತಲ್ಲ. ಅದು ಸಿದ್ದರಾಮಯ್ಯ ತಮ್ಮ ಮನಸ್ಸಿನ ಮಾತನ್ನು ನೇರವಾಗಿ ಹೇಳಿದ್ದಾರೆ ಎಂದು ಲೇವಡಿ ಮಾಡಿದರು.

ಈ ಸಂದರ್ಭದಲ್ಲಿ ಶಾಸಕರಾದ ಸಾ.ರಾ.ಮಹೇಶ್, ಕೆ.ಮಹದೇವ್, ಅಶ್ವಿನ್‌ಕುಮಾರ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಮೇಯರ್‌ಗಳಾದ ಎಂ.ಜೆ.ರವಿ ಕುಮಾರ್, ಲಿಂಗಪ್ಪ, ಜಿ.ಪಂ ಮಾಜಿ ಸದಸ್ಯ ಸಿ.ಜೆ.ದ್ವಾರಕೀಶ್, ಪಾಲಿಕೆ ಸದಸ್ಯರಾದ ಶೋಭಾ ಮೋಹನ್, ಎಸ್‌ಬಿಎಂ ಮಂಜು, ಪ್ರೇಮಾಶಂಕರೇಗೌಡ, ಮುಖಂಡರಾದ ಕೆ.ವಿ.ಮಲ್ಲೇಶ್, ಎಂ.ಎನ್.ರಾಮು, ಸೋಮು ಹಾಗೂ ಇನ್ನಿತರರು ಇದ್ದರು.



ಹೆಚ್‌ಡಿಕೆ-ಈಶ್ವರಪ್ಪ ಭೇಟಿ

ರಾಜಕೀಯ ವಿಚಾರ ಬಂದಾಗ ಪರಸ್ಪರ ಕಿಡಿಕಾರುವ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಸಚಿವ ಕೆ.ಎಸ್.ಈಶ್ವರಪ್ಪ ಇಂದು ಇಬ್ಬರು ಹಸನ್ಮುಖಿಯಾಗಿ ಕುಶಲೋಪರಿ ವಿಚಾರಿಸಿ, ಎರಡು ಪಕ್ಷದ ಕಾರ್ಯಕರ್ತರಲ್ಲಿ ಅಚ್ಚರಿ ಮೂಡಿಸಿದರು. ಕುಮಾರಸ್ವಾಮಿ ಜನತಾ ಜಲಧಾರೆ ಯಾತ್ರೆಗೆ ಚಾಲನೆ ನೀಡಲು ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ ದೇವಾಲಯದಿಂದ ಹೊರಗೆ ಬರುತ್ತಿದ್ದಂತೆ, ಸಚಿವ ಕೆ.ಎಸ್.ಈಶ್ವರಪ್ಪ ತಮ್ಮ ಬೆಂಬಲಿಗರೊಂದಿಗೆ ದೇವಿಯ ದರ್ಶನಕ್ಕೆ ದೇವಾಲಯದ ಒಳಗೆ ತೆರಳು ಆಗಮಿಸಿದರು. ಆಗ ಉಭಯ ನಾಯಕರು ಪರಸ್ಪರ ಎದುರಾದರು. ಈ ವೇಳೆ ಇಬ್ಬರು ಕುಶಲೋಪರಿ ವಿಚಾರಿಸಿ ಹಸ್ತಲಾಘವ ಮಾಡಿದರು.

ಈ ವೇಳೆ ಸಚಿವ ಈಶ್ವರಪ್ಪ ನಾನೂ ಚಾಮುಂಡೇಶ್ವರಿ ಭಕ್ತ, ಕುಮಾರಸ್ವಾಮಿಯೂ ಚಾಮುಂಡೇಶ್ವರಿ ಭಕ್ತರಾಗಿದ್ದಾರೆ. ಹಾಗಾಗಿ ಇಬ್ಬರೂ ದೇವಾಲಯಕ್ಕೆ ಆಗಾಗ ಬರುತ್ತಿರುತ್ತೇವೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಹೆಚ್.ಡಿ.ಕುಮಾರಸ್ವಾಮಿ ನಮ್ಮಿಬ್ಬರ ಭೇಟಿ ಆಕಸ್ಮಿಕ. ಇದಕ್ಕೆ ವಿಶೇಷ ಅರ್ಥ ಕಲ್ಪಿಸಬೇಡಿ ಎಂದರು.

ಶಾಸಕ ಜಿಟಿಡಿ ವಿರುದ್ಧ ಕಿಡಿ

'ನಮ್ಮ ಪಕ್ಷ ಬಿಟ್ಟುಹೋಗುವ ಮನಸ್ಸು ಮಾಡಿದವರಿಗೆ ಈಗ ಜ್ಞಾನೋದಯ ವಾಗುತ್ತಿದೆ. ಜ್ಞಾನೋದಯವಾಗಿ ಅವರು ಪಕ್ಷದಲ್ಲೇ ಉಳಿದರೆ ನನಗೇನು ಸಮಸ್ಯೆ ಇಲ್ಲ. ಪಕ್ಷ ಬಿಟ್ಟವರೂ ಕೂಡಾ ಪಕ್ಷಕ್ಕೆ ಬರುವ ಮಾತಾಡುತ್ತಿದ್ದಾರೆ. ಅವರು ಬಂದರೂ ಸಂತೋಷ. ಯಾವುದೇ ಪಕ್ಷದಿಂದ ಯಾರೇ ನಮ್ಮ ಪಕ್ಷಕ್ಕೆ ಬಂದರೂ ಸ್ವಾಗತ. ಆದರೆ, ಅಧಿಕಾರಕ್ಕಾಗಿ ಪಕ್ಷಕ್ಕೆ ಬಂದರೆ ಅಂತವರಿಗೆ ನಮ್ಮಲ್ಲಿ ಅವಕಾಶ ಇಲ್ಲ. ಈ ಮಾತು ಜಿ.ಟಿ.ದೇವೇಗೌಡರಿಗೂ ಕೂಡ ಅನ್ವಯ' **-ಹೆಚ್.ಡಿ.ಕುಮಾರಸ್ವಾಮಿ**

ಮುಂಬರುವ ಚುನಾವಣೆಯಲ್ಲಿ ಹೊಸ ಮುಖಗಳಿಗೆ ಅವಕಾಶ ಕೊಡಬೇಕೆಂಬುದು ನನ್ನ ಆಸೆ. ಅದಕ್ಕಾಗಿ ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ಗೆ ಬಹುಮತ ಕೊಡಿ. 5 ವರ್ಷದಲ್ಲಿ ರಾಜ್ಯದ ನೀರಾವರಿ ಯೋಜನೆ ಅನುಷ್ಠಾನ ಮಾಡುತ್ತೇನೆ. ಸಾಧ್ಯವಾಗದಿದ್ದರೆ ಜೆಡಿಎಸ್ ವಿಸರ್ಜನೆ ಮಾಡುತ್ತೇನೆ. ಈ ಮಾತನ್ನು ಈಗಾಗಲೇ ಹೇಳಿದ್ದೇನೆ. ಚಾಮುಂಡೇಶ್ವರಿ ದೇವಿಯ ಸನ್ನಿಧಿಯಲ್ಲಿ ಪ್ರಮಾಣ ಮಾಡಿ, ನನ್ನ ಮಾತಿಗೆ ಬದ್ಧನಾಗಿರುತ್ತೇನೆ. **-ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ**

ದಿಬ್ಬಣ ನೆನಪಿಸಿದ ನೈಪುಣ್ಯ ಬೇಸಿಗೆ ಬಂಡಿ

ಬೇಸಿಗೆ ಶಿಬಿರಗಳು ಮಕ್ಕಳ ನೈಪುಣ್ಯತೆಯ ಕನ್ನಡಿಯಾಗಬೇಕು: ಅಡ್ಡಂಡ ಕಾರ್ಯಪ್ಪ





ಮೈಸೂರು, ಏ.12- ಬೇಸಿಗೆ ಶಿಬಿರಗಳು ನಮ್ಮ ದೇಸೀಯ ಸಂಸ್ಕೃತಿ ಹಾಗೂ ಕ್ರೀಡೆಗಳನ್ನು ಪರಿಚಯಿಸುವುದರ ಜತೆಗೆ ಮಕ್ಕಳ ಪ್ರತಿಭಾ ಸಾಮರ್ಥ್ಯದ ನೈಪುಣ್ಯತೆಗೆ ಕನ್ನಡಿಯಾಗಬೇಕು ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಹೇಳಿದರು.

ಮೈಸೂರಿನ ಆರ್.ಟಿ.ನಗರದಲ್ಲಿ ನೂತನವಾಗಿ ಆರಂಭವಾಗಿರುವ 'ನೈಪುಣ್ಯ ಸ್ಕೂಲ್ ಆಫ್ ಎಕ್ಸೆಲೆನ್ಸ್' ಶಾಲೆ ಹಮ್ಮಿಕೊಂಡಿರುವ 'ಬೇಸಿಗೆ ಬಂಡಿ'ಹೆಸರಿನ ಬೇಸಿಗೆ ಶಿಬಿರಕ್ಕೆ ಇಂದು ಮಕ್ಕಳ ಜಾನಪದ ಮೆರವಣಿಗೆ ಉದ್ಘಾಟಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಪಟ್ಟಣ ಪ್ರದೇಶಗಳಲ್ಲಿ ಬೇಸಿಗೆ ಶಿಬಿರಗಳೂ ವಾಣಿಜ್ಯ ಸ್ಪರ್ಶ ಪಡೆಯುತ್ತಿದ್ದು, ಸಂಸ್ಕೃತಿ, ಸಂಪ್ರದಾಯ ಉತ್ತೇಜಿಸುವ ಕಾರ್ಯಕ್ರಮಗಳಿಗೆ ಒತ್ತು ನೀಡುವ ಚಟುವಟಿಕೆಗಳಿಗೆ ಹೆಚ್ಚು ಆಸ್ಪದ ನೀಡಬೇಕಿದೆ. ಈ ನಿಟ್ಟಿನಲ್ಲಿ ನೈಪುಣ್ಯ ವಿದ್ಯಾಸಂಸ್ಥೆ ಯಾವುದೇ ಶುಲ್ಕ ಪಡೆಯದೇ ಈ ಬಾರಿ ಉಚಿತವಾಗಿ ಬೇಸಿಗೆ ಬಂಡಿ ಹೆಸರಿನಲ್ಲಿ 20 ದಿನಗಳ ಶಿಬಿರ ಏರ್ಪಡಿಸಿರುವುದು ಅಭಿನಂದನೀಯ ಎಂದು ಹೇಳಿದರು. ಶಿಬಿರದಲ್ಲಿ ನಮ್ಮ ಜನಪದ ಕಲೆ, ಸಂಸ್ಕೃತಿ, ರಂಗಕಲೆ, ಗ್ರಾಮೀಣ ಬದುಕಿನ ಪರಿಚಯ, ಸಾಹಸ ಕ್ರೀಡೆಗಳು ಹಾಗೂ ಮಕ್ಕಳ ಪ್ರತಿಭೆ ಅನಾವರಣಕ್ಕೆ ರೂಪಿಸಿರುವ ಕಾರ್ಯಕ್ರಮಗಳು ನಿಜಕ್ಕೂ ಅರ್ಥಪೂರ್ಣವಾಗಿದೆ ಎಂದು ಕಾರ್ಯಪ್ಪ ಶ್ಲಾಘಿಸಿದರು.

ಕುವೆಂಪುನಗರದ ಕುವೆಂಪು ಪ್ರತಿಮೆ ಬಳಿಯಿಂದ ಆರಂಭವಾದ ಇಂದಿನ ಮೆರವಣಿಗೆ ಜನಪದ ದಿಬ್ಬಣವನ್ನು ನೆನಪಿಸುವ ರೀತಿಯಲ್ಲಿ ಎತ್ತಿನ ಗಾಡಿಗಳಲ್ಲಿ ಮಕ್ಕಳು ವಿವಿಧ ಗ್ರಾಮೀಣ ಪ್ರದೇಶದ ಉಡುಗೆ-ತೊಡುಗೆ ತೊಟ್ಟು ಪ್ರಯಾಣಿಸಿದರು. ವಿವಿಧ ಜನಪದ ತಂಡಗಳು ಹಾಗೂ ವಾದ್ಯಮೇಳಗಳೊಂದಿಗೆ ಮೆರವಣಿಯು ಕುವೆಂಪುನಗರ ಹಾಗೂ ರಾಮಕೃಷ್ಣನಗರ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರವೀಂದ್ರನಾಥ ಟ್ಯಾಗೂರ್ ನಗರ ತಲುಪಿತು. ಶಿಬಿರದ ಮೊದಲ ದಿನ ಮಕ್ಕಳಿಗಾಗಿ ಕೆಲವು ಮನರಂಜನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಆರ್.ರಘು ವಹಿಸಿದ್ದರು. ಪ್ರಾಂಶುಪಾಲೆ ಶ್ರೀಮತಿ ಶಿಲ್ಪ ಹಾಗೂ ಆರ್ಥಿಕ ಸಲಹೆಗಾರ ಬಿ.ಎಸ್. ನಾರಾಯಣಗೌಡ ಉಪಸ್ಥಿತರಿದ್ದರು.

ಎಂಎಂಸಿಗೆ ಶತಮಾನೋತ್ಸವ ಸಂಭ್ರಮ: ಸಮಗ್ರ ಅಭಿವೃದ್ಧಿಗೆ ತಯಾರಿ

ಮೈಸೂರು, ಏ. 12(ಆರ್‌ಕೆ)- ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC & RI)ಯ ಶತಮಾನೋತ್ಸವ ಆಚರಣೆ ಪ್ರಯುಕ್ತ ಕೆ.ಆರ್.ಆಸ್ಪತ್ರೆ ಸೇರಿದಂತೆ ಅಧೀನ ಆಸ್ಪತ್ರೆಗಳ ಸಮಗ್ರ ಅಭಿವೃದ್ಧಿಗೆ ಸಕಲ ಸಿದ್ಧತೆ ನಡೆಸಲಾಗುತ್ತಿದೆ ಎಂದು ಸಂಸ್ಥೆಯ ಡೀನ್ ಮತ್ತು ಡೈರೆಕ್ಟರ್ ಡಾ. ಹೆಚ್.ಎನ್. ದಿನೇಶ್ ತಿಳಿಸಿದ್ದಾರೆ.



ಕೆ.ಆರ್. ಆಸ್ಪತ್ರೆಗೆ ಮೂಲ ಸೌಲಭ್ಯದೊಂದಿಗೆ ಅಭಿವೃದ್ಧಿಪಡಿಸಲು ಸರ್ಕಾರ ಬಜೆಟ್‌ನಲ್ಲಿ ಅನುದಾನ ಮೀಸಲಿರಿಸಿದ್ದು, ಅದರಲ್ಲಿ ರೇಡಿಯೋಡಯಗ್ನೋಸಿಸ್ ವಿಭಾಗದ ಅಭಿವೃದ್ಧಿಗೂ ಕ್ರಮ ವಹಿಸಲಾಗುವುದು. ಎಂಆರ್‌ಐ ಉಪಕರಣವನ್ನು ಆಸ್ಪತ್ರೆಯಿಂದಲೇ ಅಳವಡಿಸಲು ಸರ್ಕಾರವೇ ಟೆಂಡರ್ ಪ್ರಕ್ರಿಯೆ ನಡೆಸುತ್ತಿದೆ. ಉಪಕರಣ ಪೂರೈಸುವ ಕಂಪನಿಗಳಲ್ಲಿ ಉಂಟಾಗಿರುವ ಕೆಲ ಗೊಂದಲದಿಂದಾಗಿ ಪ್ರಕ್ರಿಯೆ ವಿಳಂಬವಾಗಿದೆ. ಈ ಸಮಸ್ಯೆ ಇತ್ಯರ್ಥವಾದಲ್ಲಿ ನಾವೇ ಎಂಆರ್‌ಐ ಸ್ಕ್ಯಾನಿಂಗ್ ಮಾಡುವ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ಅವರು ತಿಳಿಸಿದರು.

ಆಸ್ಪತ್ರೆ ಶಿಥಿಲ ಕಟ್ಟಡಗಳ ರಿಪೇರಿ, ವೈದ್ಯಕೀಯ ಉಪಕರಣ, ನೂತನ ಓಪಿಡಿ ಬ್ಲಾಕ್ ಕಟ್ಟಡ ನಿರ್ಮಾಣ ಸೇರಿದಂತೆ ಹಲವು ಕಾಮಗಾರಿಗಳಿಗಾಗಿ ಡಿಪಿಆರ್ ತಯಾರಿಸಲಾಗುತ್ತಿದ್ದು, ಸರ್ಕಾರದಿಂದ ಅನುಮೋದನೆ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದು ಡಾ. ದಿನೇಶ್ ತಿಳಿಸಿದರು.

ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸೇರಿದಂತೆ ಮೈಸೂರು ಭಾಗದ ಎಲ್ಲಾ ಜನಪ್ರತಿನಿಧಿಗಳೂ ಸಹ ಮೆಡಿಕಲ್ ಕಾಲೇಜು ಮತ್ತು ಅದರ ಬೋಧಕ ಆಸ್ಪತ್ರೆಗಳ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ಖಾಲಿ ಹುದ್ದೆ ಭರ್ತಿ ಮಾಡಿದಲ್ಲಿ ಸೂಪರ್ ಸ್ಪೆಷಾಲಿಟಿ ಮತ್ತು ಟ್ರಾಮಾ ಕೇರ್ ಸೆಂಟರ್ ಅನ್ನೂ ನಾವು ಯಶಸ್ವಿಯಾಗಿ ನಿರ್ವಹಿಸಬಹುದು ಎಂದು ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾಳೆ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ವಿನಯ್ ಗುರೂಜಿ ಪ್ರವಚನ

ಮೈಸೂರು,ಏ.12(ಎಂಟಿವೈ)- ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಏ.14ರಂದು ಸಂಜೆ 5.30ಕ್ಕೆ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ 'ಮಾನವ ಧರ್ಮ - ಶ್ರೇಷ್ಠ ಧರ್ಮ' ಕುರಿತು ಅವಧೂತ ಶ್ರೀ ವಿನಯ್ ಗುರೂಜಿ ಅವರಿಂದ ಪ್ರವಚನ ಏರ್ಪಡಿಸಲಾಗಿದೆ.



ಏ.14ರಂದು ಬೆಳಗ್ಗೆ 9ಕ್ಕೆ ಅಶೋಕಪುರಂ ಕಾಲೋನಿಯ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನದಲ್ಲಿ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ, 11ಕ್ಕೆ ಮೃಗಾಲಯದಲ್ಲಿ ಹುಲಿ ದತ್ತು ಸ್ವೀಕಾರ, ಮಧ್ಯಾಹ್ನ 2ಕ್ಕೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಭೇಟಿ ಮಾಡಲಿದ್ದಾರೆ. ಸಂಜೆ 5.30ಕ್ಕೆ ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ಅವಧೂತರು ಮಾನವ ಧರ್ಮ ಶ್ರೇಷ್ಠ ಧರ್ಮ ವಿಷಯ ಕುರಿತ ವಿಶೇಷ ಪ್ರವಚನ ನೀಡಲಿದ್ದಾರೆ. ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಹಾತ್ಮ ಗಾಂಧಿ ಸೇವಾ ಟ್ರಸ್ಟ್‌ನ ರಾಣಿ ಪ್ರಭಾ, ವಿನಯ್ ಗುರೂಜಿ ಭಕ್ತರಾದ ಸುಮಿತ್ರಾ, ಷಣ್ಮುಖ, ಅನಿರೀತ್ ಈ ಸಂಬಂಧ ಮಾಹಿತಿ ನೀಡಿದರು.

ಹರಿಹರಪುರ ಮಠದಲ್ಲಿ ಮಹಾ ಕುಂಭಾಭಿಷೇಕ

ಮೈಸೂರು,ಏ.12(ಎಂಟಿವೈ)- ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಹರಿಹರಪುರ ಮಠದಲ್ಲಿ ಏ.10ರಿಂದ 24 ರವರೆಗೆ ಆದಿಶಂಕರ ಭಗವತ್ಪಾದರು ಪ್ರತಿಷ್ಠಾಪಿಸಿರುವ ಶಾರದಾ ಪರಮೇಶ್ವರಿ ದೇವಿಗೆ ಮಹಾ ಕುಂಭಾಭಿಷೇಕ ಮಹೋತ್ಸವ ನಡೆಸಲಾಗುತ್ತಿದೆ ಎಂದು ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷ ಡಿ.ಟಿ. ಪ್ರಕಾಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಮಠ ಹರಿಹರಪುರದಲ್ಲಿ ಅಗಸ್ತ್ಯ ಮಹರ್ಷಿ ಕರಾರ್ಚಿತ ಶ್ರೀ ಲಕ್ಷ್ಮೀನರಸಿಂಹಸ್ವಾಮಿಗೆ ಜಗದ್ಗುರು ಆದಿಶಂಕರ ಭಗವತ್ಪಾದರು ಶ್ರೀ ಶಾರದಾ ಪರಮೇಶ್ವರಿ ದೇವಿಗೆ ಮಹಾಕುಂಭಾಭಿಷೇಕ ಮಹೋತ್ಸವ ನಡೆಸಲಾಗುತ್ತಿದೆ. ಈಗಾಗಲೇ ಏ.10ರಿಂದಲೇ ಧಾರ್ಮಿಕ ಕಾರ್ಯಕ್ರಮ ಆರಂಭಿಸಲಾಗಿದೆ. ಏ.15ರಂದು ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಧಾರ್ಮಿಕ ಕಾರ್ಯಕ್ರಮ ನೆರವೇರಿಸಿಕೊಡಲಿದ್ದಾರೆ. ಐತಿಹಾಸಿಕ ಧಾರ್ಮಿಕ ಕಾರ್ಯಕ್ರಮದಲ್ಲಿ ರಾಷ್ಟ್ರದ ವಿವಿಧ ರಾಜ್ಯಗಳಿಂದ ಅನೇಕ ಗಣ್ಯರು ಹಾಗೂ ಲಕ್ಷಾಂತರ ಮಂದಿ ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದರು.

ಏ.16ರಂದು ಕೋಟಿ ತುಳಸಿ ಅರ್ಚನೆ, ಏ.17ರಂದು ಲಕ್ಷಮೋದಕ ಗಣಪತಿ ಮಹಾಯಾಗ, ಏ.18ರಂದು ಸಹಸ್ರ ಚಂಡಿಕಾ ಮಹಾಯಾಗ ಸಂಕಲ್ಪ, ಕೋಟಿ ಕುಂಕುಮಾರ್ಚನೆ, ಮಹಾಮೃತ್ಯುಂಜಯ ಯಾಗ, ಸಹಸ್ರ ಚಂಡಿಕಾ ಮಹಾಯಾಗದ ಪಾರಾಯಣ, ಏ.19ರಂದು ಆಂಜನೇಯ ಮಹಾಯಾಗ, ಏ.20ರಂದು ಶ್ರೀ ಲಕ್ಷ್ಮೀನಾರಾಯಣ ಹೃದಯ ಹೋಮ, ಏ.21ರಂದು ಧನ್ವಂತರೀ ಮಹಾಯಾಗ, ಧಾರ್ಮಿಕ ಸಭೆ, ಏ.22ರಂದು ಬೆಳಗ್ಗೆ 10ಕ್ಕೆ ನಡೆಯುವ ಧಾರ್ಮಿಕ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪಾಲ್ಗೊಳ್ಳಲಿದ್ದಾರೆ.

ಅಂದು 12 ಗಂಟೆಗೆ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿಗಳ ಸಮ್ಮುಖದಲ್ಲಿ ಕುಂಕುಮಾರ್ಚನೆಯ ಮಂಗಲೋತ್ಸವ ನೆರವೇರಲಿದೆ. ಏ.23ರಂದು ರುದ್ರಹೋಮ, ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕಲ್ಯಾಣೋತ್ಸವ, ಏ.24ರಂದು ಬೆಳಗ್ಗೆ 10ಕ್ಕೆ ಮಹಾರಥೋತ್ಸವ, ಸಂಜೆ 7ಕ್ಕೆ ತುಂಗಾನದಿಯಲ್ಲಿ ದೀಪೋತ್ಸವ ಮತ್ತು ತೆಪ್ಪೋತ್ಸವ ನೆರವೇರಲಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಮೇಲುಕೋಟೆಯ ವಂಗೀಪುರದ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ಶಾಖಾ ಮಠದ ವ್ಯವಸ್ಥಾಪಕ ಶ್ರೀನಿವಾಸ್, ಬ್ರಾಹ್ಮಣ ಧರ್ಮ ಸಹಾಯ ಸಭಾ ಅಧ್ಯಕ್ಷ ಎನ್.ಶ್ರೀನಿವಾಸ್ ಇದ್ದರು.

ಭ್ರಷ್ಟಾಚಾರಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಪ್ರೋತ್ಸಾಹ

● ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪ ● ದಿನನಿತ್ಯ ರಾಜ್ಯದಲ್ಲಿ ಭಯಭೀತಿ ವಾತಾವರಣ ಸೃಷ್ಟಿ

ಬೆಂಗಳೂರು, ಏ.12 (ಕೆಎಂಶಿ)- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿಯ ಗೂಂಡಾಗಳು ಅಲ್ಪಸಂಖ್ಯಾತರ ವಿರುದ್ಧ ನಿತ್ಯ ದಾಳಿ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಉಸ್ತುವಾರಿ ಹೊಣೆ ಹೊತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಹಾಗೂ ಬಜರಂಗದಳದವರು, ಪಿಎಫ್ಐ, ಸಿಎಫ್ಐ ಹಾಗೂ ಎಸ್‌ಡಿಪಿಐ ಜತೆ ಸೇರಿಕೊಂಡು ರಾಜ್ಯದಲ್ಲಿ ದಿನನಿತ್ಯ ಬಿಗುವಿನ ವಾತಾವರಣ ಸೃಷ್ಟಿಸುತ್ತಿದೆ. ಆದರೆ ಬೊಮ್ಮಾಯಿ ಅವರು ತಮ್ಮ ಸರ್ಕಾರದ ಮೇಲಿನ ಭ್ರಷ್ಟಾಚಾರದ ಆರೋಪದ ಬಗ್ಗೆ ಸ್ಪಷ್ಟ ಉತ್ತರ ನೀಡಿಲ್ಲ.

ಈ 40% ಕಮಿಷನ್ ಸರ್ಕಾರದ ವಿರುದ್ಧ ರಾಜ್ಯದ 50 ಸಾವಿರ ಗುತ್ತಿಗೆದಾರರು ಪ್ರತಿಭಟನೆಗೆ ಮುಂದಾಗಿದ್ದಾರೆ. ಇನ್ನು ರಾಜ್ಯ ಸರ್ಕಾರದ ಸಚಿವರ ಮೇಲೆ 40% ಕಮಿಷನ್ ಪಡೆದ ಆರೋಪ ಕೇಳಿ ಬಂದಿದೆ. ಮುಖ್ಯಮಂತ್ರಿಗಳು ದುರ್ಬಲವಾಗಿದ್ದು, ಸಚಿವರ ವಿರುದ್ಧ ಕ್ರಮಕೈಗೊಳ್ಳಲು ಮುಂದಾಗುತ್ತಿಲ್ಲ. ಬಿಜೆಪಿ ಸದಸ್ಯರೇ ಸಚಿವರ ವಿರುದ್ಧ 40% ಕಮಿಷನ್ ಆರೋಪ ಮಾಡಿದ್ದು, ಈ ಆರೋಪವನ್ನು ಕಾಂಗ್ರೆಸ್ ಪಕ್ಷದ ಸದಸ್ಯರಾಗಲೀ, ಗುತ್ತಿಗೆದಾರರ ಸಂಘದವರಾಗಲೀ ಮಾಡಿಲ್ಲ.



ಇನ್ನು ಸಚಿವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದ ಪರಿಣಾಮ ತನಗೆ ಬೆದರಿಕೆ ಕರೆಗಳು ಬರುತ್ತಿವೆ ಎಂದು ಭಯಭೀತವಾಗಿರುವ ಬಿಜೆಪಿ ಕಾರ್ಯಕರ್ತ ಆತ್ಮಹತ್ಯೆ ಪತ್ರ ಬರೆದಿದ್ದಾನೆ. ಇದು ಬೊಮ್ಮಾಯಿ ಅವರು ಭ್ರಷ್ಟಾಚಾರವನ್ನು ನಿಯಂತ್ರಿಸುತ್ತಿದ್ದಾರೆಯೇ ಅಥವಾ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆಯೇ ಎಂಬುದಕ್ಕೆ ಈ ಬೆಳವಣಿಗೆ ಸಾಕ್ಷಿಯಾಗಿದೆ. ಈ 40% ಸರ್ಕಾರ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಿ ತನ್ನ ವೈಫಲ್ಯಗಳನ್ನು, ದುರಾಡಳಿತವನ್ನು ಮುಚ್ಚಿಕೊಳ್ಳಲು ಸಾಧ್ಯವಿಲ್ಲ. ಈ ಸರ್ಕಾರ ತೊಲಗಲೇಬೇಕು. ಈ ಸರ್ಕಾರದಲ್ಲಿ ಬಹುತೇಕ ಸಚಿವರು ಕಳಂಕಿತರು. ಕೆಲವರು ಜಾಮೀನಿನ ಮೇಲೆ ಹೊರಗಿದ್ದರೆ, ಮತ್ತೆ ಕೆಲವರು ಜಾಮೀನಿನ ನಿರೀಕ್ಷೆಯಲ್ಲಿದ್ದಾರೆ. ಅವರನ್ನು ವಜಾಗೊಳಿಸಬೇಕು. ಒಂದು ವೇಳೆ ವಜಾಗೊಳಿಸದಿದ್ದರೆ ಬೊಮ್ಮಾಯಿ ಅವರು ರಾಜೀನಾಮೆ ಕೊಡಬೇಕು ಎಂದರು.

ಹೆಬ್ಬಾಳಿನಲ್ಲಿ ಇಂದು 'ಕುರುಕ್ಷೇತ್ರ' ನಾಟಕ ಪ್ರದರ್ಶನ

ಮೈಸೂರು, ಏ. 12(ಆರ್‌ಕೆ)- ಮೈಸೂರಿನ ಹೆಬ್ಬಾಳು 1ನೇ ಹಂತದ ಬಸವನಗುಡಿ ಬಳಿ ಬಸವೇಶ್ವರ ವೃತ್ತದಲ್ಲಿ ನಾಳೆ (ಏ. 13) ರಾತ್ರಿ 7.30 ಗಂಟೆಗೆ 'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಹೆಬ್ಬಾಳು ಸಾಂಸ್ಕೃತಿಕ ವೇದಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಾಮನವಮಿ ಪ್ರಯುಕ್ತ ಏರ್ಪಡಿಸಿರುವ ನಾಟಕ ಅಭಿನಯ ಮತ್ತು ಪ್ರದರ್ಶನವನ್ನು ಶಾಸಕ ಎಲ್. ನಾಗೇಂದ್ರ ಉದ್ಘಾಟಿಸುವರು. ಕಾರ್ಪೊರೇಟರ್ ಪೈ. ಶ್ರೀನಿವಾಸ್, ವಿಧಾನಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡ, ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ. ರಾಮು ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವರು.



ನಾಳೆ ಶಾರದಾವಿಲಾಸ ವಿದ್ಯಾಸಂಸ್ಥೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ

ಮೈಸೂರು, ಏ.12-ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ವಿದ್ಯಾಸಂಸ್ಥೆಯ ಆವರಣದಲ್ಲಿ ಏ.14ರಂದು ಗುರುವಾರ ಬೆಳಗ್ಗೆ 10.30ಕ್ಕೆ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎನ್.ಬಹದ್ದೂರ್ ವ್ಯವಹಾರಿಕ ವಿಜ್ಞಾನ ಸಂಸ್ಥೆಯ ಅಧ್ಯಕ್ಷರಾದ ಡಾ.ಡಿ.ಆನಂದ್ ಭಾಗವಹಿಸಲಿದ್ದು, ಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ. ಶಾರದಾವಿಲಾಸ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸೈಬರ್ ಭದ್ರತೆ, ಕೃತಕ ಬುದ್ಧಿಮತ್ತೆ ವಿಚಾರದಲ್ಲಿ ಸರ್ಕಾರಕ್ಕೆ ನೆರವು

● ಐಬಿಎಂ ಕಂಪನಿ ನಿಯೋಗ ಭರವಸೆ ● ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣರ ಭೇಟಿ ● ಸೈಬರ್ ಭದ್ರತಾ ನೀತಿಯನ್ನು ರೂಪಿಸಲು ಅಗತ್ಯ ನೆರವು

ಬೆಂಗಳೂರು, ಏ.12 (ಕೆಎಂಶಿ)- ಸೈಬರ್ ಭದ್ರತೆ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರಗಳಲ್ಲಿ ತಾನು ಗಳಿಸಿರುವ ಪರಿಣತಿಯನ್ನು ಕರ್ನಾಟಕ ಸರಕಾರದೊಂದಿಗೆ ಹಂಚಿಕೊಳ್ಳಲು ಸಿದ್ಧವಿದ್ದು, ಸೈಬರ್ ಭದ್ರತಾ ನೀತಿಯನ್ನು ರೂಪಿಸಲು ಅಗತ್ಯ ನೆರವು ನೀಡಲು ಮುಕ್ತ ಮನಸ್ಸು ಹೊಂದಿರುವುದಾಗಿ ಪ್ರತಿಷ್ಠಿತ ಐಬಿಎಂ ಕಂಪನಿ ಹೇಳಿದೆ.

ಐಟಿ ಮತ್ತು ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ವಿಕಾಸಸೌಧದಲ್ಲಿ ಭೇಟಿ ಮಾಡಿ ಹಲವು ವಿಚಾರಗಳನ್ನು ಚರ್ಚಿಸಿದ ಮೂವರು ಸದಸ್ಯರ ಐಬಿಎಂ ನಿಯೋಗವು ಈ ಭರವಸೆ ನೀಡಿದೆ.

ಸಚಿವರು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಸರಕಾರವು ಅಗತ್ಯ ವಿಷಯಗಳಲ್ಲಿ ಐಬಿಎಂನ ನೆರವು ಪಡೆದುಕೊಳ್ಳುವುದಾಗಿ ತಿಳಿಸಿದ್ದಾರೆ. ನಿಯೋಗದಲ್ಲಿ ಕಂಪನಿಯ ದಕ್ಷಿಣ ಏಷ್ಯಾ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಸಂದೀಪ್ ಪಟೇಲ್, ಐಬಿಎಂ ಕ್ಲೌಡ್ ಮತ್ತು ಕಾಗ್ನಿಟೀವ್ ಸಾಫ್ಟ್‌ವೇರ್ ಲ್ಯಾಬ್ಸ್ ವಿಭಾಗದ ಉಪಾಧ್ಯಕ್ಷ ಗೌರವ್ ಶರ್ಮ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕ ಕಿಶೋರ್ ಬಾಲಾಜಿ ಇದ್ದರು.



ನಿಯೋಗದ ಪರವಾಗಿ ಮಾತನಾಡಿದ ಸಂದೀಪ್ ಪಟೇಲ್, ಸೈಬರ್ ಭದ್ರತೆಗೆ ಸಂಬಂಧಿಸಿದಂತೆ ಐಬಿಎಂ ಇತ್ತೀಚೆಗೆ ಬೆಂಗಳೂರಿನಲ್ಲಿ ತನ್ನ ಸೆಕ್ಯುರಿಟಿ ಕಮಾಂಡ್ ಸೆಂಟರ್ ಅನ್ನು ತೆರೆದಿದೆ. ಸರಕಾರವು ತನ್ನ ದತ್ತಾಂಶಗಳ ಸುರಕ್ಷಿತ ಸಂಗ್ರಹಣೆಗೆ ಇದನ್ನು ಬಳಸಿಕೊಳ್ಳಬಹುದು. ಸರಕಾರವು ಈ ನಿಟ್ಟಿನಲ್ಲಿ ಆಸಕ್ತಿ ತೋರಿಸಿದರೆ, ಸರಕಾರದ ಸಿಬ್ಬಂದಿಗೆ ಕಂಪನಿಯ ವತಿಯಿಂದ ಸೂಕ್ತ ಮತ್ತು ದಕ್ಷತರಬೇತಿ ನೀಡಲಾಗುವುದು ಎಂದರು.

ಸೈಬರ್ ಭದ್ರತೆಯು ಮುಂದಿನ ದಿನಗಳಲ್ಲಿ ವ್ಯವಸ್ಥೆಗೆ ದೊಡ್ಡ ಸವಾಲಾಗಿ ಪರಿಣಮಿಸಲಿದೆ. ಅದನ್ನು ಎದುರಿಸಲು ಈಗಿನಿಂದಲೇ ಸಜ್ಜಾಗುವುದು ಮುಖ್ಯವಾಗಿದೆ. ತಂತ್ರಜ್ಞಾನವನ್ನು ಆಧರಿಸಿರುವ ಜಗತ್ತಿನಲ್ಲಿ ಇಂತಹ ಕ್ರಮಗಳು ಅನಿವಾರ್ಯವಾಗಿವೆ. ಸೈಬರ್ ಭದ್ರತಾ ನೀತಿಯನ್ನು ಪಾಲಿಸಲು ಮುಂದಾಗಿರುವ ರಾಜ್ಯ ಸರಕಾರಕ್ಕೆ ಎಲ್ಲ ಬಗೆಯ ನೆರವು ನೀಡಲು ಸಿದ್ಧ. ಇದರ ಜತೆಗೆ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಮುಂತಾದ ಸಹಕಾರಿ ಸಂಸ್ಥೆಗಳಲ್ಲೂ ಐಬಿಎಂ ನೆರವಿನ ಕೈ ಜೋಡಿಸಲು ಉತ್ಸುಕವಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಐಟಿ ಬಿಟಿ ನಿರ್ದೇಶಕಿ ಮೀನಾ ನಾಗರಾಜ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ ಇದ್ದರು.

ರಾಜ್ಯದಲ್ಲಿ 14 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿದ್ದು, ಇವುಗಳ ಸಬಲೀಕರಣಕ್ಕೆ ರಾಜ್ಯ ಸರಕಾರ ಮುಂದಾಗಿರುವುದು ರಚನಾತ್ಮಕ ಕ್ರಮವಾಗಿದೆ. ಈ ವಲಯದಲ್ಲಿ ಅತ್ಯುತ್ತಮ ಪಠ್ಯಕ್ರಮ ಮತ್ತು ಸಂಶೋಧನಾ ವಿನ್ಯಾಸಗಳನ್ನು ರೂಪಿಸಲು ಕಂಪನಿಯ ನೆರವು ಬಯಸಿದರೆ ಸಹಾಯಹಸ್ತ ಚಾಚಲು ಐಬಿಎಂ ಸಿದ್ಧವಿದೆ. ಈ ಪರಿಣತಿಯನ್ನು ಬಳಸಿಕೊಂಡರೆ, ಮುಖ್ಯವಾಗಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಜಾಗತಿಕ ಗುಣಮಟ್ಟದ ಶಿಕ್ಷಣ ಲಭ್ಯವಾಗಲಿದೆ ಎಂದು ಪಟೇಲ್ ವಿವರಿಸಿದರು.

ಸರಕಾರವು ರಾಜ್ಯಾದ್ಯಂತ ಹೊಂದಿರುವ ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ಉನ್ನತೀಕರಿಸುವುದಕ್ಕೆ ಕಂಪನಿಯು ಆಸಕ್ತಿ ಹೊಂದಿದೆ. ಇದಕ್ಕೆ ಸರಕಾರದಿಂದ ಸಹಕಾರವನ್ನು ಅಪೇಕ್ಷಿಸುತ್ತಿರುವುದಾಗಿ ಅವರು ಸಚಿವರ ಗಮನಕ್ಕೆ ತಂದರು.

ಇದಲ್ಲದೆ ಐಬಿಐಎಂ ತನ್ನ ಸಿಎಸ್‌ಆರ್ ಹೊಣೆಗಾರಿಕೆಯ ಭಾಗವಾಗಿ ರಾಜ್ಯದಲ್ಲಿ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಮತ್ತು ಶೈಕ್ಷಣಿಕ ಪರಿಸರಕ್ಕೆ ನೀಡುತ್ತಿರುವ ಕೊಡುಗೆಗಳನ್ನು ಕುರಿತೂ ನಿಯೋಗವು ವಿಚಾರ ವಿನಿಮಯ ನಡೆಸಿತು.

ಬೆಂಗಳೂರಿನ ಕೃಷ್ಣರಾಜೇಂದ್ರ ಎಂಜಿನಿಯರಿಂಗ್ ಕಾಲೇಜನ್ನು ಅಭಿವೃದ್ಧಿಪಡಿಸುವ ಸಂಬಂಧ ಶೈಕ್ಷಣಿಕ ಪಾಲುದಾರಿಕೆ ವಹಿಸಿಕೊಳ್ಳುವಂತೆ ಸಚಿವರು ಕೋರಿದ್ದಕ್ಕೆ ಐಬಿಎಂ ನಿಯೋಗ ಸಕಾರಾತ್ಮಕವಾಗಿ ಸ್ಪಂದಿಸಿತು. ಕಾಲೇಜನ್ನು ಅಭಿವೃದ್ಧಿಪಡಿಸುವ ಸಂಬಂಧ ಚರ್ಚಿಸಲಾಗುವುದು ಎಂದರು.


ಸಂತೋಷ್ ಆತ್ಮಹತ್ಯೆಯಲ್ಲಿ ಕಾಂಗ್ರೆಸ್ ರಾಜಕೀಯ ಮಾಡಿದರೆ ಅದಕ್ಕೆ ತಕ್ಕ ಪ್ರತ್ಯುತ್ತರ

ಮೈಸೂರು, ಏ.12(ಎಸ್‌ಬಿಡಿ)– ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣವನ್ನು ಕಾಂಗ್ರೆಸ್ ನಾಯಕರು ರಾಜಕೀಯಕ್ಕೆ ಬಳಸಿಕೊಂಡರೆ ಪ್ರತ್ಯುತ್ತರ ನೀಡಲು ನಮಗೂ ಗೊತ್ತಿದೆ ಎಂದು ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಸುದ್ದಿಗೋಷ್ಠಿ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಈಶ್ವರಪ್ಪ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದನ್ನು ಕಾನೂನು ಬದ್ಧವಾಗಿ ಮಾಡಿದ್ದಾರೆ?. ಶಾಲಾ–ಕಾಲೇಜಿನ ಸಮವಸ್ತ್ರ ವಿಚಾರವಾಗಿ ನ್ಯಾಯಾಲಯ ಸ್ಪಷ್ಟವಾಗಿ ಹೇಳಿತ್ತು. ಆದರೆ ನ್ಯಾಯಾಲ ಯದ ಆದೇಶ ಧಿಕ್ಕರಿಸಿ ಹಿಜಾಬ್ ಪರವಾಗಿ ಎಸ್‌ಡಿಪಿಐ, ಪಿಎಫ್‌ಐ ಪ್ರತಿಭಟಿಸಿದಾಗ 'ಅದು ಶಾಂತಿಯುತ ಪ್ರತಿಭಟನೆ' ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಂಡರು. ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿದ ಮೊದಲ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಎಂದು ಕಿಡಿಕಾರಿದರು.

ಶಿವಮೊಗ್ಗದ ಹರ್ಷ, ಬೆಂಗಳೂರಿನ ಚಂದ್ರು ಹತ್ಯೆಯಾದಾಗ ಕೊಲೆಗಾರರ ವಿರುದ್ಧ ಕ್ರಮಕ್ಕೆ ಆಗ್ರಹಿಸದ ಸಿದ್ದರಾಮಯ್ಯ, ಪರಿಹಾರದ ಹಣ ನೀಡಿದ ವಿಚಾರದ ಬಗ್ಗೆ ಮಾತನಾಡಿದರು. ದುಃಖದ ಸನ್ನಿವೇಶದಲ್ಲೂ ರಾಜಕೀಯ ಮಾಡಿದರು. ದಕ್ಷಿಣ ಕನ್ನಡದಲ್ಲಿ 23 ಮಂದಿ ಗೋರಕ್ಷಕರ ಹತ್ಯೆಯಾದಾಗ ಸಿದ್ದರಾಮಯ್ಯ ಎಷ್ಟು ಪರಿಹಾರ ನೀಡಿದ್ದರು?. ಸಿದ್ದರಾಮಯ್ಯರಿಗೆ ಕಾನೂನಿನ ಮೇಲೆ ಗೌರವವೂ ಇಲ್ಲ, ನೈತಿಕತೆಯೂ ಇಲ್ಲ. ಸುಮ್ಮನೆ ರಾಜೀನಾಮೆ ಕೊಡಿ ಎಂದು ಬೊಬ್ಬೆ ಹಾಕುತ್ತಿದ್ದಾರೆ ಎಂದರು.

ಈಶ್ವರಪ್ಪ ಜವಾಬ್



ನನ್ನ ವಿರುದ್ಧ ಸಂತೋಷ್ ಆಪಾದನೆ ಮಾಡಿದ ದಿನವೇ ನಾನು ನ್ಯಾಯಾಲಯದಲ್ಲಿ ದೂರು ದಾಖಲಿಸಿದೆ. ಅಂದೇ ನ್ಯಾಯಾಲಯ ಪ್ರಕರಣ ದಾಖಲಿಸಿಕೊಂಡಿತು. ಇದೀಗ ಸಂತೋಷ್ ಹಾಗೂ ಸುದ್ದಿ ವಾಹಿನಿಗೆ ನೋಟಿಸ್ ನೀಡಲಾಗಿದೆ. ಸಂತೋಷ್ ಆತ್ಮಹತ್ಯೆ ವಿಚಾರ ಮಾಧ್ಯಮಗಳಿಂದಲೇ ತಿಳಿದಿದ್ದು. ಡೆತ್‌ನೋಟ್ ಎಂದು ಕೇವಲ ವಾಟ್ಸಾಪ್ ಸಂದೇಶ ಹರಿದಾಡುತ್ತಿದೆ. ಆದರೂ ನಾನೇ ತನಿಖೆಗೆ ಆಗ್ರಹಿಸಿದ್ದೇನೆ. ಒಂದು ವೇಳೆ ಯಾರ ಜೇಬಿನಲ್ಲಾದರೂ 'ನನ್ನ ಸಾವಿಗೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಕಾರಣ' ಎಂದು ಬರೆದಿರುವ ಸಹಿ ಇಲ್ಲದ ಪತ್ರ ಸಿಕ್ಕರೆ ಇಬ್ಬರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರಾ? ಎಂದು ಪ್ರಶ್ನಿಸಿದರು.

ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಒಂದೇ ಒಂದು ಪ್ರಯತ್ನವನ್ನೂ ಕಾಂಗ್ರೆಸ್ ಮಾಡಿಲ್ಲ. ಬರೀ ಬೊಬ್ಬೆ ಹೊಡೆಯುತ್ತಿದ್ದಾರೆ. ಅವರ ಹೇಳಿಕೆಯಂತಾದರೆ ನಾವೆಲ್ಲಾ ನೂರು ಸಾರಿ ರಾಜೀನಾಮೆ ನೀಡಬೇಕಿತ್ತು. ಅವರನ್ನು ನಾವು ಲೆಕ್ಕಕ್ಕೇ ಇಟ್ಟುಕೊಂಡಿಲ್ಲ. ಈ ಘಟನೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳಲು ಯತ್ನಿಸಿದರೆ ನಾವು ಹೆದರುವುದಿಲ್ಲ. ಸರಿಯಾದ ಪ್ರತ್ಯುತ್ತರ ನೀಡುತ್ತೇವೆ ಎಂದರು.

ಸಂತೋಷ್ ದೆಹಲಿಗೆ ಹೋಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪ್ರಧಾನಿ ಮೋದಿಯವರಿಗೆ ಪತ್ರ ನೀಡಿದ್ದರಿಂದ ಅಲ್ಲಿಂದ ನಮ್ಮ ಕಚೇರಿಗೆ ಪತ್ರ ತಲುಪಿತ್ತು. ಈ ವಿಚಾರವೂ ನನಗೆ ಗೊತ್ತಿರಲಿಲ್ಲ. ನಂತರ ಸಂತೋಷ್ ಅವರಿಗೆ ಯಾವುದೇ ಕಾಮಗಾರಿಯ ಕಾರ್ಯಾದೇಶ ನೀಡಿಲ್ಲ, ಇದು ಸುಳ್ಳು ಆರೋಪ ಎಂದು ಇಲಾಖೆ ಪ್ರಧಾನ ಕಾರ್ಯದರ್ಶಿ ಅತೀಫ್ ಅವರು ಕೇಂದ್ರ ಸರ್ಕಾರಕ್ಕೆ ಉತ್ತರ ಬರೆದಿದ್ದರು. ಆದಾಗ್ಯೂ ನಾನು ಈ ಘಟನೆ ಬಗ್ಗೆ ತನಿಖೆ ನಡೆಸುವಂತೆ ಮುಖ್ಯಮಂತ್ರಿಗಳು ಹಾಗೂ ಪಕ್ಷದ ರಾಜ್ಯಾಧ್ಯಕ್ಷರನ್ನು ಆಗ್ರಹಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಬೆಂಗಳೂರು ವಿವಿ ಸಿಂಡಿಕೇಟ್ ಸದಸ್ಯರ ರಾಜೀನಾಮೆ: ಸಮಸ್ಯೆಯಲ್ಲಿ ವಿಸಿ

ಬೆಂಗಳೂರು: ಇಬ್ಬರು ಸಿಂಡಿಕೇಟ್ ಸದಸ್ಯರನ್ನು ತೆಗೆದುಹಾಕಿರುವ ಸರ್ಕಾರದ ನಿರ್ಧಾರದ ವಿರುದ್ಧ ಬೆಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರು ರಾಜೀನಾಮೆ ಸಲ್ಲಿಸಿದ್ದಾರೆ. ಬೆಂಗಳೂರು ವಿವಿಯ ಉಪಕುಲಪತಿ ವಿರುದ್ಧ ರಾಜೀನಾಮೆ ನೀಡಿರುವ ಸದಸ್ಯರು ಗಂಭೀರ ಆರೋಪ ಹೊರಿಸಿದ್ದಾರೆ. ಸರ್ಕಾರದಿಂದ ನೇಮಕವಾಗಿರುವ ಸದಸ್ಯರು ಬಿಯುವಿಸಿ ಕೆಆರ್ ವೇಣುಗೋಪಾಲ್ ಅವರು ನಾಮನಿರ್ದೇಶನಗೊಂಡಿರುವ ಇಬ್ಬರು ಸದಸ್ಯರನ್ನು ತೆಗೆದುಹಾಕಿದ್ದಾರೆ. ವಿವಿಯ ಆರ್ಥಿಕ ಹಾಗೂ ಕೆಲಸಗಳ ಸಮಿತಿಯಿಂದ ಇಬ್ಬರು ಸದಸ್ಯರನ್ನು ಯಾವುದೇ ಕಾರಣವಿಲ್ಲದೇ ತೆಗೆದುಹಾಕಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಸದಸ್ಯರ ಆರೋಪಕ್ಕೆ ಇತರರು ಬೆಂಬಲ ಸೂಚಿಸಿದ್ದು, ಉಪಕುಲಪತಿಗಳು ನಡೆಸಿರುವ ಅಕ್ರಮಗಳ ಬಗ್ಗೆ ಸಿಂಡಿಕೇಟ್ ಸದಸ್ಯರು ಸಾರ್ವಜನಿಕಗೊಳಿಸಿದ್ದಾರೆ. ವಿವಿಯಲ್ಲಿ ಪ್ರಗತಿ ಕೆಲಸಗಳಿಗೆ ವಿ.ಸಿ ತಡೆಯುತ್ತಿದ್ದಾರೆ. ನಿಯಮದ ಪ್ರಕಾರ ಪ್ರೊ.ವೇಣುಗೋಪಾಲ್ ನಡೆದುಕೊಳ್ಳುತ್ತಿಲ್ಲ ಎಂದು ಸದಸ್ಯರು ಆರೋಪಿಸಿದ್ದಾರೆ.

ಒಂದನೇ ಪುಟದಿಂದ

ಗುತ್ತಿಗೆದಾರ ಆತ್ಮಹತ್ಯೆ

ಮಹಾನಿರ್ದೇಶಕರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅನುಮತಿ ಕೋರಿದ್ದಾರೆ. ಪ್ರವಾಸದಲ್ಲಿರುವ ಮುಖ್ಯಮಂತ್ರಿಯವರು ಇದುವರೆಗೂ ಯಾವುದೇ ನಿರ್ದೇಶನ ನೀಡಿಲ್ಲ. ಸಂತೋಷ್ ಪಾಟೀಲ್, ವಿಧಾನ ಮಂಡಲ ಅಧಿವೇಶನ ನಡೆಯುವ ಸಂದರ್ಭದಲ್ಲೇ ಈಶ್ವರಪ್ಪ ವಿರುದ್ಧ ಕಮಿಷನ್ ಕೇಳಿದ ಆರೋಪ ಹೊರಿಸಿದ್ದರು.

ತನಗೂ ಇದಕ್ಕೂ ಸಂಬಂಧವಿಲ್ಲ ಎಂದು ಈಶ್ವರಪ್ಪ ಸ್ಪಷ್ಟಪಡಿಸಿ ದ್ದಲ್ಲದೆ, ಆರೋಪಿತನ ವಿರುದ್ಧ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಸಂತೋಷ್ ಪಾಟೀಲ್ ಬೆಳಗಾವಿ ಯಲ್ಲಿ ಲಕ್ಷ್ಮೀಹೆಬ್ಬಾಳ್ಕರ್ ಪ್ರತಿನಿಧಿಸುವ ಬೆಳಗಾವಿ ಗ್ರಾಮಾಂತರ ಕ್ಷೇತ್ರದಲ್ಲಿ ಪಂಚಾಯತ್‌ರಾಜ್ ಇಲಾಖೆಗೆ ಸಂಬಂಧಿಸಿದಂತೆ ಕಾಮಗಾರಿಯನ್ನು ಕೈಗೊಂಡಿದ್ದರು. ಸಂತೋಷ್ ಪಾಟೀಲ್ ಯಾವುದೇ ಕಾಮಗಾರಿಯು ಮಾಡಿಲ್ಲ. ಆತನಿಗೆ ಕಾಮಗಾರಿ ನಡೆಸುವಂತೆ ಸರ್ಕಾರ ಮಂಜೂರಾತಿಯು ನೀಡಿಲ್ಲ. ಕಾಮಗಾರಿಗೆ ಕಾರ್ಯಾದೇಶ ಅಥವಾ ಯಾವುದೇ ಪ್ರಕ್ರಿಯೆಯು ನಡೆದಿರುವುದಿಲ್ಲ. ಹೀಗಿರುವಾಗ ಕಮಿಷನ್ ಕೇಳಿದ್ದಾರೆ ಎಂಬುದು ಎಷ್ಟು ಸರಿ ಎಂದು ಈಶ್ವರಪ್ಪ ಪ್ರಶ್ನಿಸಿದ್ದಾರೆ.

ರಾಜಕೀಯವಾಗಿ ತಮ್ಮನ್ನು ಮುಗಿಸಲು ಸಂಚು ನಡೆದಿದೆ. ಇಲಾಖೆಯಲ್ಲಿ ಅನುಮತಿಯೇ ನೀಡದೇ, ನಾನು ಹೇಗೆ ಗುತ್ತಿಗೆದಾರನಿಂದ ಪರ್ಸೆಂಟೇಜ್ ಕೇಳಲಿ ಎಂದು ಪ್ರಶ್ನಿಸಿದ್ದಾರೆ. ಆದರೆ ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ ಸಚಿವರ ವಿರುದ್ಧ ಗಂಭೀರವಾಗಿ ಆರೋಪ ಮಾಡಿರುವ ಹಿನ್ನೆಲೆಯಲ್ಲಿ ಪೊಲೀಸರು ಮೊದಲು ಎಫ್‌ಐಆರ್ ದಾಖಲಿಸಿ, ಆನಂತರ ತನಿಖೆ ನಡೆಸಬೇಕು. ಸಿದ್ದರಾಮಯ್ಯ ಸರ್ಕಾರದಲ್ಲಿ ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಅಂದಿನ ಗೃಹ ಸಚಿವ ಕೆ.ಜೆ. ಜಾರ್ಜ್ ಮತ್ತು ಇಬ್ಬರು ಹಿರಿಯ ಪೊಲೀಸ್ ಅಧಿಕಾರಿಗಳ ವಿರುದ್ಧ ಗಂಭೀರ ಆರೋಪ ಮಾಡಿ, ಸಾವನ್ನಪ್ಪಿದ್ದರು.

ಅಂದು ಬಿಜೆಪಿ ಸದಸ್ಯರು ಸದನದ ಒಳಗೆ ಮತ್ತು ಹೊರಗೆ ಹಗಲು ರಾತ್ರಿ ಹೋರಾಟ ನಡೆಸಿ, ಜಾರ್ಜ್ ರಾಜೀನಾಮೆ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಬೊಮ್ಮಾಯಿ ಸರ್ಕಾರ ಇಂತಹದ್ದೇ ಇಕ್ಕಟ್ಟಿಗೆ ಸಿಲುಕಿಕೊಂಡಿದೆ. ಇದೀಗ ಪ್ರತಿಪಕ್ಷ ಕಾಂಗ್ರೆಸ್ ಬಾಯಿ ಮುಚ್ಚಿಸಲು ಈಶ್ವರಪ್ಪ ರಾಜೀನಾಮೆ ಪಡೆಯುತ್ತಾರಾ ಎಂಬುದನ್ನು ಕಾದುನೋಡಬೇಕು.

ಸಾವಿಗೂ ಮುನ್ನ ಪಾಟೀಲ್ ಮಾಧ್ಯಮಗಳಿಗೆ ರವಾನಿಸಿರುವ ಸಂದೇಶ ಹೀಗಿದೆ: "ನನ್ನ ಸಾವಿಗೆ ನೇರ ಕಾರಣ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಚಿವ ಕೆ.ಎಸ್. ಈಶ್ವರಪ್ಪನವರು. ಇವರಿಗೆ ತಕ್ಕ ಶಿಕ್ಷೆ ಆಗಬೇಕು. ನನ್ನೆಲ್ಲ ಆಸೆಗಳನ್ನು ಬದಿಗೊತ್ತಿ ಈ ನಿರ್ಧಾರ ಮಾಡಿರುತ್ತೇನೆ." ಹೀಗೆಂದು ಸಂತೋಷ್ ಪಾಟೀಲ್ ತನ್ನ ಸಾವಿಗೂ ಮುನ್ನ ಮರಣ ಸಂದೇಶವನ್ನು ಮೊಬೈಲ್ ಮೂಲಕ ಕಳಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಈಶ್ವರಪ್ಪ ವಿರುದ್ಧ ಶೇ. 40 ಕಮಿಷನ್ ಆರೋಪ ಮಾಡಿದ್ದ ಸಂತೋಷ್ ಪಾಟೀಲ್, ಆತ್ಮಹತ್ಯೆಗೆ ಶರಣಾಗಿದ್ದಾರೆ. ಸಂತೋಷ್ ಪಾಟೀಲ್ ಆತ್ಮಹತ್ಯೆ ಸಾಕಷ್ಟು ಚರ್ಚೆಯನ್ನು ಹುಟ್ಟು ಹಾಕಿದ್ದು, ತನ್ನ ಸಾವಿಗೂ ಮುನ್ನ ಮರಣ ಸಂದೇಶವನ್ನು ಮೊಬೈಲ್ ಮೂಲಕ ಕಳಿಸಿ ಆತ್ಮಹತ್ಯೆಗೆ ಶರಣಾಗಿರೋದು ಅಚ್ಚರಿ ಮೂಡಿಸಿದೆ.

ಮುಖ್ಯಮಂತ್ರಿಯವರು ಉಡುಪಿ ಜಿಲ್ಲೆಯ ಪ್ರವಾಸದಲ್ಲಿರುವಾಗಲೇ ಅಲ್ಲಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸಮೀಪದ ಶಾಂಭವಿ ಹೋಟೆಲ್‌ನ ರೂಮ್‌ವೊಂದರಲ್ಲಿ ಅವರ ಮೃತದೇಹ ಪತ್ತೆಯಾಗಿದೆ. ತನ್ನ ಸಾವಿಗೂ ಮುನ್ನ ಕೆಲವು ಮಾಧ್ಯಮ ಮಿತ್ರರಿಗೆ ವಾಟ್ಸಾಪ್ ಮೂಲಕ ಮರಣ ಸಂದೇಶವನ್ನು ಕಳಿಸಿ ತನ್ನ ಪ್ರಾಣಕ್ಕೆ ಸಂಚಕಾರ ತರಲು ನಿರ್ಧರಿಸಿದ್ದಾರೆ.

ಈಶ್ವರಪ್ಪನವರೇ ನನ್ನ ಪತಿ ಸಾವಿಗೆ ಕಾರಣ

ಕಳೆದುಕೊಂಡಿದ್ದಾರೆ ಎಂದರು. ಈಶ್ವರಪ್ಪನವರು ಶೇ.40 ಕಮಿಷನ್ ಕೇಳ್ತಾ ಇದ್ದಾರೆ ಎಂದು ನನ್ನ ಬಳಿ ನನ್ನ ಪತಿ ಹೇಳ್ತಾ ಇದ್ದರು. ನಾನು ಸುಮ್ಮನಿದ್ದೆ. ಈಗ ಕೊಂದೇ ಬಿಟ್ಟರು ಎಂದು ಕಣ್ಣೀರು ಹಾಕಿದರು. ಇದಕ್ಕೆಲ್ಲ ಸಚಿವ ಈಶ್ವರಪ್ಪನವರೇ ಕಾರಣ ಎಂದರು.

ಈಗ ನೋಡಿದರೆ ಈಶ್ವರಪ್ಪನವರು ನನ್ನ ಪತಿ ಸಂತೋಷ್ ಪಾಟೀಲ್ ಯಾರು ಅಂತಾನೇ ಗೊತ್ತೇ ಇಲ್ಲ ಅಂತಿದ್ದಾರೆ. ಅವರು ಗೊತ್ತಿಲ್ಲ ಅಂದಿದ್ದರೆ ಅವರ ಜೊತೆ ಇರುವ ಫೋಟೋಗಳು ಹೇಗೆ ಬಂದವು. ಇವರುಗಳು (ಈಶ್ವರಪ್ಪನವರು) ಲಂಚ ಲಂಚ ಎಲ್ಲದಕ್ಕೂ ಲಂಚ... ಅಂದುಕೊಂಡು ನನ್ನ ಗಂಡನನ್ನು ಕೊಂದುಬಿಟ್ಟರು. ಯಾವಾಗಲೂ ಲಂಚ... ಲಂಚ... ಅನ್ನುವ ಇವರು (ಈಶ್ವರಪ್ಪ) ಜನಸಾಮಾನ್ಯರ ಬಗ್ಗೆಯೂ ಯೋಚಿಸಬೇಕು ಸಾರ್ ಎಂದು ಜಯಶ್ರೀ ಗೋಳಾಡಿದರು.

ನಿನ್ನೆ ರಾತ್ರಿ ಫೋನ್ ಮಾಡಿ ಚೆನ್ನಾಗಿ ಮಾತಾಡಿದ್ದಾರೆ. ನೀನು ಚೆನ್ನಾಗಿದ್ದೀಯಾ, ಮಗು ಚೆನ್ನಾಗಿದೀಯಾ ಅಂತ ಕೇಳಿದರು. ಆಮೇಲೆ ನೆಟ್ವರ್ಕ್ ಸರಿ ಇಲ್ಲ ಎಂದು ಫೋನ್ ಇಟ್ಟುಬಿಟ್ಟರು ಎಂದ ಅವರು ನಿನ್ನೆ ರಾತ್ರಿ ಅಷ್ಟು ಚೆನ್ನಾಗಿ ಮಾತಾಡಿದವರು ಇವತ್ತು ಇಲ್ಲ ಅಂದರೆ ಹೇಗೆ ನಂಬೋದು ಸಾರ್... ಇದು ಕೊಲೆಯೇ ಎಂದರು.

ನನ್ನ ಯಜಮಾನರು ತುಂಬಾ ಧೈರ್ಯವಂತರು. ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದರೆ ಹೇಗೆ ನಂಬೋದು ಸಾರ್" ಎಂದು ಮಾಧ್ಯಮದವರನ್ನೇ ಪ್ರಶ್ನಿಸಿದ ಅವರು, ನನಗೆ ಎರಡು ವರ್ಷದ ಮಗು ಇದೆ. ಮಗು ಕಟ್ಟಿಕೊಂಡು ಏನು ಮಾಡಲಿ..., ಹೇಗೆ ಜೀವನ ಮಾಡಲಿ, ನನಗೆ ನ್ಯಾಯ ಬೇಕು ಎಂದು ಆಗ್ರಹಿಸಿದರು. ಸಂತೋಷ್ ಪಾಟೀಲ್ ಅವರ ಸಾವು ಇಡೀ ರಾಜ್ಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಬಿಜೆಪಿ ಮತ್ತು ಈಶ್ವರಪ್ಪನವರ ಮೇಲೆ ಮುಗಿಬಿದ್ದಿದ್ದಾರೆ.

ಡಿ.ಕೆ.ಶಿವಕುಮಾರ್ ಆಗ್ರಹ

ಕಾರಣ ಎಂದು ಡೆತ್ ನೋಟ್ ಬರೆದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಹಿಂದೆ ನಮ್ಮ ಸರ್ಕಾರವಿದ್ದಾಗ ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಮಾಡಿಕೊಂಡಾಗ ಜಾರ್ಜ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈಗ ಈಶ್ವರಪ್ಪ ಅವರೇ ನನ್ನ ಸಾವಿಗೆ ಕಾರಣ ಎಂದು ನೇರ ಆರೋಪ ಮಾಡಿ ಸಂತೋಷ್ ಪಾಟೀಲ್ ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ಸರ್ಕಾರ ಅವರ ವಿರುದ್ಧ ಸೆಕ್ಷನ್ 302ರಡಿ ಕೇಸ್ ದಾಖಲಿಸಬೇಕು ಮತ್ತು ತಕ್ಷಣ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದ್ದಾರೆ. ಕೂಡಲೇ ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು. ಕೊಲೆ ಆರೋಪ ಎದುರಿಸುತ್ತಿರುವ ಈಶ್ವರಪ್ಪ ಅವರು ಸಚಿವ ಸಂಪುಟದಲ್ಲಿ ಮುಂದುವರೆಯಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವಕಾಶ ನೀಡಬಾರದು. ಈ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಮತ್ತು ದಂಡ ವಿಧಿಸಬಹುದು, ಆದ್ದರಿಂದ ಇದೊಂದು ಗಂಭೀರ ಪ್ರಕರಣವಾಗಿದೆ. ಸಂತೋಷ್ ಪಾಟೀಲ್ ಸಾವಿಗೆ ಈಶ್ವರಪ್ಪ ಅವರೇ ಕಾರಣ.

ಇದೊಂದು ಭ್ರಷ್ಟಾಚಾರ ಪ್ರಕರಣವೂ ಆಗಿದೆ. ಸಂತೋಷ್ ಪಾಟೀಲ್ ಅವರು ಈಗಾಗಲೇ ಈಶ್ವರಪ್ಪ ಅವರಿಗೆ ಕಮಿಷನ್ ನೀಡಿದ್ದರು. ಗುತ್ತಿಗೆ ಕಾಮಗಾರಿಯ ಬಾಕಿ ಅನುದಾನ ಬಿಡುಗಡೆ ಮಾಡಲು ಸಚಿವರು ಹೆಚ್ಚಿನ ಕಮಿಷನ್‌ಗೆ ಬೇಡಿಕೆ ಇಟ್ಟಿದ್ದಾರೆ, ಆತನಿಗೆ ಈ ಹಣ ಹೊಂದಿಸಲು ಸಾಧ್ಯವಾಗದ ಕಾರಣಕ್ಕೆ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾನೆ.

ಈಶ್ವರಪ್ಪ ಅವರು ಸಂತೋಷ್ ಪಾಟೀಲ್ ಮೇಲೆ ಮಾನನಷ್ಟ ಮೊಕದ್ದಮೆ ದಾಖಲಿಸಿರುವುದಕ್ಕೂ, ಇದಕ್ಕೂ ಸಂಬಂಧವಿಲ್ಲ. ಆತ್ಮಹತ್ಯೆಗೆ ಶರಣಾಗುವ ಮುನ್ನ ಆತ ಈಶ್ವರಪ್ಪ ಅವರೇ ನನ್ನ ಸಾವಿಗೆ ನೇರ ಕಾರಣ ಎಂದು ಆರೋಪ ಮಾಡಿರುವುದರಿಂದ ಇದಕ್ಕಿಂತ ಬೇರೆ ಸಾಕ್ಷಿ ಬೇಕಾ? ಈಗ ಈಶ್ವರಪ್ಪ ಅವರು ಏನು ಪ್ರತಿಕ್ರಿಯೆ ಕೊಡುತ್ತಾರೆ ಎಂಬುದು ಮುಖ್ಯವಲ್ಲ, ಆತ್ಮಹತ್ಯೆಗೆ ಶರಣಾದ ವ್ಯಕ್ತಿ ಮಾಡಿರುವ ಆರೋಪ ಮುಖ್ಯ. ಹಾಗಾಗಿ ಈಶ್ವರಪ್ಪ ಅವರ ಮೇಲೆ ಸೆಕ್ಷನ್ 302 ರಡಿ ಕೊಲೆ ಪ್ರಕರಣ ದಾಖಲಿಸಿ, ತಕ್ಷಣ ಬಂಧಿಸಬೇಕು.

ಆರೋಪಿ ಸಚಿವನ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸಬೇಕು. ಈ 40% ಕಮಿಷನ್ ಆರೋಪ ಮಾಡಿರುವುದು ನಾವ್ಯಾರೂ ಅಲ್ಲ. ಗುತ್ತಿಗೆದಾರರ ಸಂಘ, ಗುತ್ತಿಗೆದಾರರು ಹಾಗೂ ಬಿಜೆಪಿ ಕಾರ್ಯಕರ್ತರೇ ಸರ್ಕಾರದ ಭ್ರಷ್ಟಾಚಾರ ಬಗ್ಗೆ ಈ ಆರೋಪ ಮಾಡಿದ್ದಾರೆ. ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದಲ್ಲಿ ಮುಖ್ಯಮಂತ್ರಿಗಳು ಯಾರ ರಕ್ಷಣೆಯನ್ನೂ ಮಾಡಬಾರದು. ಕೇವಲ ಮೌಖಿಕವಾಗಿ ತನಿಖೆ ಮಾಡುತ್ತೇವೆ, ಸತ್ಯಾಂಶ ತಿಳಿಯುತ್ತೇವೆ ಎಂದು ಕಾಲಹರಣ ಮಾಡಬಾರದು. ಕೂಡಲೇ ಎಫ್‌ಐಆರ್ ದಾಖಲಿಸಿ, ಈಶ್ವರಪ್ಪನನ್ನು ಬಂಧಿಸಬೇಕು. ಈ ಹಿಂದೆ ಸಚಿವರುಗಳ ವಿರುದ್ಧದ ಪ್ರಕರಣದಲ್ಲಿ ಸರ್ಕಾರ ತನಿಖೆಯಲ್ಲಿ ಹಸ್ತಕ್ಷೇಪ ಮಾಡಿ ಬಿ ರಿಪೋರ್ಟ್ ಹಾಕಿ ರಕ್ಷಣೆ ಮಾಡಿದ್ದು, ಈ ಪ್ರಕರಣದಲ್ಲಿ ಆ ರೀತಿ ಮಾಡಬಾರದು ಎಂದರು.

ಇದು ಕೇವಲ ಆತ್ಮಹತ್ಯೆ ಪ್ರಕರಣವಲ್ಲ. ಇದೊಂದು ಕೊಲೆ ಪ್ರಕರಣ. ಈ ಸಾವಿಗೆ ಕಾರಣ ಯಾರು ಎಂದು ಬರೆದಿಟ್ಟು ಸಂತೋಷ್ ಸಾವಿಗೆ ಶರಣಾಗಿದ್ದಾರೆ. ಈ ಸಾವಿಗೆ ಕಾರಣ ಏನು ಎಂಬುದು ಇಡೀ ರಾಜ್ಯಕ್ಕೆ ತಿಳಿದಿದೆ. ಹೀಗಾಗಿ ರಾಜ್ಯದಲ್ಲಿ ಕಾನೂನನ್ನು ಯಾವ ರೀತಿ ಜಾರಿಗೆ ತರಲಾಗುತ್ತದೆ ಎಂಬುದಷ್ಟೇ ಈಗ ಉಳಿದಿರುವ ವಿಚಾರ.

ಮೈಸೂರು ಅರಸರ ಶ್ವಾನ ಪ್ರೀತಿಗೆ ಸಾಕ್ಷಿಯಾಗಿರುವ ಸ್ಮಾರಕ ಕಲ್ಲುಗಳು

ಮೈಸೂರು, ಏ.12(ಎಂಕೆ)– ಮೈಸೂರು ಅರಸರು ಸಾಕು ಪ್ರಾಣಿಗಳನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದರು ಎಂಬುದಕ್ಕೆ ಮೈಸೂರು ವಿವಿ ಮಾನಸಗಂಗೋತ್ರಿಯಲ್ಲಿನ ಜಯಲಕ್ಷ್ಮಿ ವಿಲಾಸ ಅರಮನೆ ಅಂಗಳದಲ್ಲಿರುವ ಶ್ವಾನ ಸ್ಮಾರಕ ಕಲ್ಲುಗಳು ಸಾಕ್ಷಿಯಾಗಿವೆ.



ಕೆಎಸ್‌ಓಯು ಆವರಣದಲ್ಲಿದ್ದ ಶ್ವಾನ ಸ್ಮಾರಕ ಕಲ್ಲುಗಳನ್ನು ಒಂದೆಡೆ ಸೇರಿಸಿ, ಅವುಗಳನ್ನು ಮರುಸ್ಥಾಪಿಸಿ ಮೈಸೂರು ಅರಸರು ಪ್ರಾಣಿಗಳ ಮೇಲಿಟ್ಟಿದ್ದ ಪ್ರೀತಿಯನ್ನು ಪರಿಚಯ ಮಾಡಿಕೊಡಲಾಗುತ್ತಿದೆ. ರಾಜಕುಮಾರಿ ಜಯಲಕ್ಷ್ಮಿ ಅಮ್ಮಣ್ಣಿ ಅವರು ಪ್ರೀತಿಯಿಂದ ಸಾಕಿದ್ದ ಟಾಮ್, ಬಾಬಿ, ಮಿಕ್ಕಿ, ಮಿನ್ನಿ, ವಿಟ್ಸೇಜ್ ಗೈರ್ಸ್ ಎಂಬ 7 ಶ್ವಾನಗಳು ಮರಣ ಹೊಂದಿದ ದಿನಾಂಕವನ್ನು ಸ್ಮಾರಕದ ಮೇಲೆ ಬರೆಯಲಾಗಿದೆ. ಇದನ್ನು ನೋಡಿದರೆ ಅಂದಿನ ರಾಜ ಮನೆತನದವರಿಗೆ ಶ್ವಾನಗಳ ಮೇಲೆ ಎಷ್ಟು ಪ್ರೀತಿ ಇತ್ತು ಎಂದು ತಿಳಿಯುತ್ತದೆ.


ಒಂದೆಡೆ ಸೇರಿಸಿದ್ದೇವೆ: ಕೆಎಸ್‌ಓಯು ಕ್ಯಾಂಪಸ್‌ನಲ್ಲಿದ್ದ ಶ್ವಾನ ಸ್ಮಾರಕ ಕಲ್ಲುಗಳನ್ನು ತಂದು ಜಯಲಕ್ಷ್ಮಿ ವಿಲಾಸ ಅರಮನೆ ಅಂಗಳದಲ್ಲಿ ಮರು ಸ್ಥಾಪಿಸಲಾಗಿದೆ. ಹಿಂದೆ ರಾಜರು ಶ್ವಾನಗಳನ್ನು ಸಾಕಿದ್ದರು. ಪ್ರೀತಿಯಿಂದ ಸಾಕಿದ ಶ್ವಾನಗಳು ಮೃತಪಟ್ಟಾಗ ಅವುಗಳನ್ನು ಬೇರೆ ಕಡೆಗಳಲ್ಲಿ ಅಂತ್ಯಕ್ರಿಯೆ ಮಾಡಿ ಕಲ್ಲಿನ ಸ್ಮಾರಕ ಸ್ಥಾಪಿಸಲಾಗಿತ್ತು ಎಂದು ಜಯಲಕ್ಷ್ಮಿ ವಿಲಾಸ ಅರಮನೆಯ ವಸ್ತು ಸಂಗ್ರಹಾಲಯದ ಕ್ಯೂರೇಟರ್ ಡಾ.ನಾಗರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮೈಸೂರು ಜಿಲ್ಲಾ ಹಾಗೂ ನಗರ ಸವಿತಾ ಸಮಾಜದ ವತಿಯಿಂದ ಸವಿತಾ ಸಮಾಜದ ರಾಜ್ಯಾಧ್ಯಕ್ಷ ಎನ್.ಸಂಪತ್ ಕುಮಾರ್ ಅವರನ್ನು ಜಲದರ್ಶಿನಿ ಅತಿಥಿಗೃಹದಲ್ಲಿ ಜಿಲ್ಲಾ ಅಧ್ಯಕ್ಷ ಎನ್.ಆರ್.ನಾಗೇಶ್ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಆರ್ಯ ನಯನಜ ಕ್ಷತ್ರಿಯ ತೆಲುಗು ರೆಡ್ಡಿ ಸಂಘದ ಅಧ್ಯಕ್ಷ ಗುರುಪ್ರಸಾದ್, ಕಾರ್ಯದರ್ಶಿ ಹರೀಶ್ ರೆಡ್ಡಿ, ಆರ್ಯ ನಯನ ಕ್ಷತ್ರಿಯ ಕನ್ನಡಿಗರ ಸಂಘದ ಲೋಕೇಶ್ ನಾಗಪ್ಪ, ಸಮಾಜದ ಮುಖಂಡರಾದ ನಾಗೇಂದ್ರ, ರಾಜು, ನರಸಿಂಹ, ರೇವಣ್ಣ, ಗೌರೀಶ್, ಕೃಷ್ಣರಾಜ, ಮಹದೇವ್, ರಾಜೇಶ್, ಸುರೇಶ್, ಮುರುಳೀಧರ್, ಸೌಮ್ಯ ರಾಣಿ ಗಣೇಶ್, ರಮೇಶ್, ಮಾದಪ್ಪ ಜಲೇಂದ್ರ, ಪ್ರೇಮ್‌ಕುಮಾರ್, ವೆಂಕಟರಾಜ್, ಸೋಮಶೇಖರ್, ಶ್ರೀನಿವಾಸ್, ಮಹೇಶ್, ಶಂಕರ್, ರಾಮಣ್ಣ, ಮಹೇಶ್, ಕುಮಾರ್, ರಾಘು, ಬಾಬು, ಮಹೇಶ್, ನಾರಾಯಣ್, ಭರತ್, ಮಂಜು, ಸಿದ್ದಾರ್ಥ, ಮಂಜುನಾಥ್, ವಿ.ಸುರೇಶ್, ಗೋವಿಂದರಾಜ್, ಶ್ರೀಧರ್, ಶಿವು, ಮಹದೇವ್, ಭಾಸ್ಕರ್, ಕುಮಾರ್, ಪ್ರಸನ್ನ, ಚಂದ್ರಶೇಖರ್, ಕುಮ್ಮಿ, ನಾಗರಾಜ್, ಸಿದ್ದರಾಜು, ಮಾದೇವ ಶೆಟ್ಟಿ, ನಾಗರಾಜ್, ಬಾಬು, ಯೋಗೇಶ್ ನಾಗರಾಜ್ ಉಪಸ್ಥಿತರಿದ್ದರು.

ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿ ಸಾವು

ಮೈಸೂರು, ಏ. 12– ಆಸ್ಪತ್ರೆಗೆ ದಾಖಲು ಮಾಡಿದ್ದ ವ್ಯಕ್ತಿಯೊಬ್ಬರು ಸಾವನ್ನಪ್ಪಿರುವ ಬಗ್ಗೆ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿಕ್ರಮ್ ಎಸ್.ಜೆ. ಆಳ್ವಾ(36) ಸಾವನ್ನಪ್ಪಿದವರಾಗಿದ್ದು, ವಿಳಾಸ ಮತ್ತು ವಿವರಗಳು ಲಭ್ಯವಾಗಿಲ್ಲ. ವಿವಿ ಪುರಂ ಪೊಲೀಸ್ ಠಾಣೆ ವ್ಯಾಪ್ತಿಯ ಗೋಕುಲಂನಲ್ಲಿರುವ ದುರ್ಗಾ ಭವನ್ ಲಾಡ್ಜ್‌ಗೆ ಹೋಗಲು ವಿಕ್ರಮ್ ಎಸ್.ಜೆ. ಆಳ್ವಾ ಅವರು ಮೆಟ್ಟಿಲು ಹತ್ತುತ್ತಿದ್ದಾಗ ಅವರಿಗೆ ಪಾರ್ಶ್ವವಾಯುಗೀಡಾಗಿ ಪ್ರಜ್ಞೆತಪ್ಪಿ ಬಿದ್ದಿದ್ದು, ಲಾಡ್ಜ್ ಮಾಲೀಕ ಅವರನ್ನು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ನಂತರ ಕೆಆರ್. ಆಸ್ಪತ್ರೆ ಸೇರಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ನಿಧನರಾಗಿದ್ದಾರೆ. ವಾರಸುದಾರರು ದೂ.: 0821–2418314, 2418514, 9480802238 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಸಂತೋಷ್ ಆತ್ಮಹತ್ಯೆ ತನಿಖೆ ವರದಿ ಬಂದ ನಂತರ ಸೂಕ್ತ ಕ್ರಮ

ಮೈಸೂರು, ಏ.12(ಎಸ್‌ಬಿಡಿ)– ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣ ಸಂಬಂಧ ತನಿಖೆ ವರದಿ ಬಂದ ಮೇಲೆ ಕಾರಣಕರ್ತರಾದವರು ಎಷ್ಟೇ ದೊಡ್ಡವರಾದರೂ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸ್ಪಷ್ಟಪಡಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಭರವಸೆ



ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆಗೆ ಸಚಿವ ಈಶ್ವರಪ್ಪ ಕಾರಣರೆಂದು ವಿಪಕ್ಷಗಳು ಆರೋಪಿಸಿ, ರಾಜೀನಾಮೆಗೆ ಆಗ್ರಹಿಸುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ಮೈಸೂರು ವಿಭಾಗ ಸಭೆಗಳನ್ನು ನಡೆಸುತ್ತಿರುವ ಲಲಿತಮಹಲ್ ಪ್ಯಾಲೇಸ್ ಹೋಟೆಲ್ ಬಳಿ ಮುಂಜಾಗ್ರತಾ ಕ್ರಮವಾಗಿ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು.

ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಂತೋಷ್ ಸಾವು ದುಃಖ ತಂದಿದೆ. ಈ ವಿಚಾರವಾಗಿ ಸಚಿವ ಕೆ.ಎಸ್.ಈಶ್ವರಪ್ಪನವರು ಸ್ಪಷ್ಟಪಡಿಸುವುದರ ಜೊತೆಗೆ ತನಿಖೆಗೂ ಆಗ್ರಹಿಸಿದ್ದಾರೆ. ಮುಖ್ಯಮಂತ್ರಿಗಳೊಂದಿಗೂ ಮಾತನಾಡಿ, ಸಮಿತಿ ರಚನೆ ಮಾಡಿ, ತನಿಖೆಗೆ ಆಗ್ರಹಿಸಿದ್ದೇನೆ. ಈ ಸಂಬಂಧ ತನಿಖಾ ವರದಿ ಬಂದ ನಂತರ ಇದರಲ್ಲಿ ಎಷ್ಟೇ ದೊಡ್ಡವರಿದ್ದರೂ ಸರ್ಕಾರ ಕ್ರಮ ಕೈಗೊಳ್ಳಲಿದೆ. ಪ್ರಕರಣದ ಗಂಭೀರತೆ ಪರಿಗಣಿಸಿ ಸಿಬಿಐ ತನಿಖೆ ಸಂಬಂಧ ಕ್ರಮ ವಹಿಸಲಿದೆ ಎಂದು ತಿಳಿಸಿದರು.


ಆಡಳಿತ ಪಕ್ಷದ ವಿರುದ್ಧ ವಿರೋಧ ಪಕ್ಷ ಅಪಪ್ರಚಾರ ಮಾಡುವುದು, ಬೇಡಿಕೆಗಳನ್ನು ಮುಂದಿಟ್ಟುಕೊಂಡು ಆಗ್ರಹಿಸುವುದು ಸಹಜ. ಹಾಗೆಯೇ ಗುತ್ತಿಗೆ ನೀಡುವಲ್ಲಿ ಪರ್ಸಂಟೇಜ್ ಆರೋಪವನ್ನೂ ಮಾಡಿದ್ದಾರೆ. ಮೋದಿ ಅವರು ಪ್ರಧಾನಿ ಆದಾಗಲೂ ಆರೋಪ ಮಾಡಿದ್ದರು. ಆದರೆ ಯಾವುದರಲ್ಲೂ ಸ್ಪಷ್ಟತೆ ಇರಲಿಲ್ಲ. ಅಪಪ್ರಚಾರ ಮಾಡುವುದು ಕಾಂಗ್ರೆಸ್ ಚಾಳಿಯಾಗಿದೆ. ಕಾಂಗ್ರೆಸ್ ನಾಯಕರು ನಿತ್ಯವೂ ಬೇರೆ ಬೇರೆಯವರ ಮೇಲೆ ಆರೋಪ ಮಾಡುತ್ತಿರುತ್ತಾರೆ. ಹಾಗಾದರೆ ಎಲ್ಲರೂ ರಾಜೀನಾಮೆ ಕೊಡಬೇಕಾಗುತ್ತದೆ ಎನ್ನುವ ಮೂಲಕ ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸುತ್ತಿರುವ ಕಾಂಗ್ರೆಸ್‌ಗೆ ತಿರುಗೇಟು ನೀಡಿದರು.

ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಮರುದಿನ ದಿಂದಲೇ ಸರ್ಕಾರ ಬಿದ್ದು ಹೋಗುತ್ತದೆ ಎಂದು ಹೇಳಲು ಶುರು ಮಾಡಿದರು. ಆದರೆ ಬಿಎಸ್‌ವೈ 3 ವರ್ಷ ಆಡಳಿತ ಪೂರೈಸಿದರು. ನಾನು ರಾಜ್ಯಾಧ್ಯಕ್ಷನಾದಾಗಲೂ ಹೀಗೆಯೇ ಹೇಳಿದ್ದರು. ನಾನೂ ಕೂಡ 3 ವರ್ಷ ಈ ಸ್ಥಾನ ನಿಬಾಯಿಸಿದ್ದೇನೆ. ಕಾಂಗ್ರೆಸ್ ಈ ರೀತಿಯ ಗೊಂದಲ, ವಿವಾದ ಸೃಷ್ಟಿಸಿ, ಲಾಭದ ನಿರೀಕ್ಷೆ ಮಾಡುತ್ತಿದೆ. ಐತಿಹಾಸಿಕ ಪಕ್ಷವಾದ ಕಾಂಗ್ರೆಸ್ ಪರಿಸ್ಥಿತಿ ಕಣ್ಣೀರು ತರಿಸುವಂತಿದೆ. ನಾಯಕತ್ವ ಯೋಜನೆ, ಯೋಚನೆ ಕೊರತೆಯಿದೆ. ವಿರೋಧ ಪಕ್ಷವಾಗಿ ಜನರ ಸಮಸ್ಯೆಗಳನ್ನು ಎತ್ತಿ ಹಿಡಿಯುವ ಶಕ್ತಿ ಕಾಂಗ್ರೆಸ್‌ಗಿಲ್ಲ. ಹಾಗಾಗಿ ವಿಧಾನಸೌಧದಲ್ಲೂ ಚರ್ಚೆ ಮಾಡಲಿಲ್ಲ. ವಿರೋಧ ಪಕ್ಷಕ್ಕೆ ಯಾವುದೇ ಅಸ್ತ್ರಗಳಿಲ್ಲದ ಕಾರಣ ಈ ರೀತಿ ಗೊಂದಲ ಸೃಷ್ಟಿಸುತ್ತಿದೆ ಎಂದರು.

ಸವಿತಾ ಸಮಾಜದ ಅಭಿವೃದ್ಧಿಗೆ ಎಲ್ಲರೂ ಒಗ್ಗೂಡಬೇಕು

ಮೈಸೂರು, ಏ.12(ಜಿಎ)– ಸವಿತಾ ಸಮಾಜ ಅಭಿವೃದ್ಧಿಗೆ ಸಮಾಜದ ಪ್ರತಿಯೊಬ್ಬರು ಒಗ್ಗೂಡಬೇಕು ಎಂದು ಕರ್ನಾಟಕ ರಾಜ್ಯ ಸವಿತಾ ಸಮಾಜದ ರಾಜ್ಯಾಧ್ಯಕ್ಷ ಸಂಪತ್ ಕುಮಾರ್ ಮನವಿ ಮಾಡಿದ್ದಾರೆ.

ಸವಿತಾ ಸಮಾಜದ ರಾಜಾಧ್ಯಕ್ಷ ಸಂಪತ್‌ಕುಮಾರ್ ಮನವಿ



ನಾಗೇಶ್ ವಿರುದ್ಧ ಆಕ್ರೋಶ

ನಾಗೇಶ್ ತಾವು ಮೈಸೂರು ಜಿಲ್ಲಾಧ್ಯಕ್ಷರು ಎಂದು ಹೇಳಿಕೊಂಡು ಮತ್ತು ಕಾರಿಗೂ ಬೋರ್ಡ್ ಹಾಕಿಕೊಂಡು ಓಡಾಡುತ್ತಿದ್ದಾರೆ. ಅವರನ್ನು ಯಾರು ನೇಮಕ ಮಾಡಿದ್ದು ಅವರು ಜಿಲ್ಲಾಧ್ಯಕ್ಷರಲ್ಲ ಅವರಿಂದ ಸಮಾಜಕ್ಕೆ ಏನು ಉಪಯೋಗವಾಗಿಲ್ಲ ಎಂದು ಇಂದು ನಡೆದ ಸಭೆಯಲ್ಲಿ ನಾಗೇಶ್ ವಿರುದ್ಧ ಆಕ್ರೋಶ ವ್ಯಕ್ತವಾಯಿತು. ಆದರೆ ಮೈಸೂರಿಗೆ ಆಗಮಿಸಿದ ರಾಜ್ಯಾಧ್ಯಕ್ಷರನ್ನು ನಾಗೇಶ್ ಬರಮಾಡಿಕೊಂಡು ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಅಭಿನಂದಿಸಿದರು.

ಕರ್ನಾಟಕ ರಾಜ್ಯ ಸವಿತಾ ಸಮಾಜ, ಮೈಸೂರು ನಗರ ಮತ್ತು ಜಿಲ್ಲಾ ಘಟಕದ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸಂಘಟನೆ ಮತ್ತು ವಿಚಾರ ಸಂಕೀರ್ಣವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ರಾಜ್ಯದಲ್ಲಿ ನಮ್ಮ ಸಮಾಜದವರು ಬೆರಳೆಣಿಕೆಯಷ್ಟು ಜನರಿದ್ದೇವೆ. ನಾವೆಲ್ಲರೂ ಒಗ್ಗೂಡಿದರೆ, ಮಾತ್ರ ಸವಿತ ಸಮಾಜದ ಅಭಿವೃದ್ದಿ ಸಾಧ್ಯ ಏಕೆಂದರೆ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ನಮ್ಮ ಸಮಾಜದ ಅಭಿವೃದ್ಧಿ ಯಾಗುತ್ತಿವೆ. ಆದರೆ ಮೈಸೂರು ಜಿಲ್ಲೆಯಲ್ಲಿ ಮಾತ್ರ ಕೆಲ ಸಮಸ್ಯೆಗಳಿದ್ದು ಅವುಗಳನ್ನು ಸರಿಪಡಿಸಿಕೊಂಡು ಸವಿತಾ ಸಮಾಜದ ಅಭಿವೃದ್ಧಿಗೆ ದುಡಿಯೋಣ ಎಂದರು.

ಅಧ್ಯಕ್ಷರ ಚುನಾವಣೆಗೆ ನಡೆಸಲು ಈ ಹಿಂದೆ ಕಾನೂನು ತೊಡಕು ಇತ್ತು ಆದರೆ ಕೋರ್ಟ್‌ನಿಂದ ಚುನಾವಣೆ ನಡೆಸಬಹುದು ಎಂದು ತೀರ್ಪು ಬಂದಿದೆ ಅದರಂತೆ 3 ತಿಂಗಳ ನಂತರ ರಾಜ್ಯ ಮತ್ತು ಜಿಲ್ಲಾ ಮಟ್ಟದ ಚುನಾವಣೆಗಳು ನಡೆಯಲಿದೆ. ಅದಕ್ಕಾಗಿ ನಾನು ರಾಜ್ಯ ಪ್ರವಾಸ ಆರಂಭಿಸಿ ಜಿಲ್ಲಾ ಮಟ್ಟದಲ್ಲಿ ಸವಿತಾ ಸಮಾಜದ ಅಭಿವೃದ್ಧಿ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದೇನೆ ಎಂದರು

ವೀರಪ್ಪ ಮೊಯ್ಲಿ ಅವರ ಅವಧಿಯಲ್ಲಿ ಬೆಂಗಳೂರಿನಲ್ಲಿ ನಮ್ಮ ಸಮಾಜದವರಿಗೆ ಕಾಲೇಜು ನಿರ್ಮಾಣ ಮಾಡಲಾಗಿತ್ತು. ಅದು ಇಂದು ಉತ್ತಮ ರೀತಿಯಲ್ಲಿ ನಡೆಯುತ್ತಿದ್ದು, ಸವಿತಾ ಸಮಾಜದ 5 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ ಆದರಿಂದ ನಮ್ಮ ಮುಂದಿನ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಪ್ರತಿ ಜಿಲ್ಲೆಯಲ್ಲಿ 5 ಎಕರೆ ಜಾಗವನ್ನು ನೀಡಬೇಕು ಎಂದು ಒತ್ತಾಯಿಸಿದರು.

ನಿವೃತ್ತ ಪೊಲೀಸ್ ಅಧಿಕಾರಿ ಆರ್.ಆನಂದ್, ಮಾಜಿ ಪಾಲಿಕೆ ಸದಸ್ಯ ವಿ. ಮಂಜುನಾಥ್, ಸವಿತಾ ಸಮಾಜದ ಮುಖಂಡರಾದ ರಾಜ್‌ಕುಮಾರ್, ರಾಜೇಶ್, ಎಸ್. ಬಾಲು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಸ್ಥಾಪನೆಗೆ ನೀರಸ ಪ್ರತಿಕ್ರಿಯೆ

ಮೈಸೂರು ಜಿಲ್ಲೆಯಲ್ಲಿ 40 ಅರ್ಜಿದಾರರಲ್ಲಿ ಉದ್ಯಮ ಸ್ಥಾಪಿಸಿದವರು ಬರೀ ಇಬ್ಬರು ಮಾತ್ರ

ಮೈಸೂರು, ಏ.12(ಎಂಕೆ)– ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (ಪಿಎಂಎಫ್‌ಎಂಇ)ಯ ಫಲಾನುಭವಿಗಳು ಕೇವಲ ಇಬ್ಬರು ಮಾತ್ರ..!

ಆಹಾರ ಕೈಗಾರಿಕೆಯಲ್ಲಿ ಕಿರು ಉದ್ದಿಮೆಗಳ ಬೆಳವಣಿಗೆಗೆ ಸಾಕಷ್ಟು ಅವಕಾಶಗಳಿದ್ದರೂ ಸದ್ಬಳಕೆ ಮಾಡಿಕೊಳ್ಳುವವರ ಸಂಖ್ಯೆ ಬಹಳ ಕಡಿಮೆ ಎಂಬುದಕ್ಕೆ ಕಳೆದೊಂದು ವರ್ಷದಲ್ಲಿ ಮೈಸೂರು ಜಿಲ್ಲೆಯಲ್ಲಿ ಪಿಎಂಎಫ್‌ಎಂಇ ಯೋಜನೆಯ ಸದುಪಯೋಗ ಪಡೆದವರ ಸಂಖ್ಯೆಯೇ ಸಾಕ್ಷಿಯಾಗಿದೆ.

ಆಹಾರ ಪದಾರ್ಥಗಳಿಗೆ ಮಾರುಕಟ್ಟೆಯಲ್ಲಿ ಸದಾ ಒಂದೇ ರೀತಿಯ ಬೇಡಿಕೆಯನ್ನು ಸೃಷ್ಟಿಸುವ ಹಾಗೂ ಸಣ್ಣ ಸಣ್ಣ ಉದ್ದಿಮೆಗಳಿಗೆ ಉತ್ತೇಜನ ನೀಡುವ ಮೂಲಕ 'ಆತ್ಮನಿರ್ಭರ ಭಾರತ' ನಿರ್ಮಾಣ ಯೋಜನೆಗೆ ಜಿಲ್ಲೆಯಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಕಳೆದೊಂದು ವರ್ಷದಲ್ಲಿ ಸಲ್ಲಿಕೆಯಾದ ಸುಮಾರು 40 ಅರ್ಜಿಗಳಲ್ಲಿ ಸಾಲ ಪಡೆದವರು ಇಬ್ಬರು ಮಾತ್ರ.

ಒಂದು ಜಿಲ್ಲೆಗೆ ಒಂದು ಉತ್ಪನ್ನದಂತೆ ಮೈಸೂರು ಜಿಲ್ಲೆಗೆ 'ಬಾಳೆ ಹಣ್ಣು' ಆಯ್ಕೆಯಾಗಿದ್ದು, ಬಾಳೆ ಹಣ್ಣಿನ ಜ್ಯೂಸ್, ಚಿಪ್ಸ್, ಬಾಳನಾ ಪೌಂಡರ್ ಸೇರಿದಂತೆ ಹಲವು ಬಗೆಯ ತಿನಿಸುಗಳನ್ನು ತಯಾರಿಸಿ, ಮಾರಾಟ ಮಾಡಬಹುದಾಗಿದೆ. ಸಣ್ಣ ಉದ್ದಿಮೆಯನ್ನು ದೊಡ್ಡ ಮಟ್ಟದಲ್ಲಿ ಬೆಳೆಸಲು ಸಾಮಾನ್ಯ ಮೂಲಭೂತ ಸೌಕರ್ಯ, ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ ಬೆಂಬಲವನ್ನು ನೀಡಲಾಗುವುದು.

ಯೋಜನೆ ಉದ್ದೇಶ: ಅಸಂಘಟಿತ ಕಿರು ಆಹಾರ ಸಂಸ್ಕರಣಾ ಘಟಕಗಳಲ್ಲಿ ಕೌಶಲ್ಯ ತರಬೇತಿ, ಉದ್ಯಮದ ಮೌಲ್ಯ ಹೆಚ್ಚಿಸಲು ಬೆಂಬಲ, ಉನ್ನತೀಕರಣಕ್ಕಾಗಿ ಬಂಡವಾಳ ಹೂಡಿಕೆ, ಆಹಾರ ಸುಕರ್ಷತೆ ತಾಂತ್ರಿಕ ಜ್ಞಾನ ಮತ್ತು ಗುಣಮಟ್ಟ ಸುಧಾರಣೆಗಳ ಮೂಲಕ ಸಾಮರ್ಥ್ಯಾಭಿವೃದ್ಧಿ ಹಾಗೂ ಬ್ರ್ಯಾಂಡಿಂಗ್ ಹಾಗೂ ಮಾರ್ಕೆಟಿಂಗ್ ಬಲಪಡಿಸುವುದಾಗಿದೆ.

ಸಹಾಯಧನ: ವೈಯಕ್ತಿಕ ಕಿರು ಆಹರ ಸಂಸ್ಕರಣಾ ಘಟಕಗಳ ಉನ್ನತೀಕರಣಕ್ಕೆ ಪ್ರತಿ ಘಟಕಕ್ಕೆ ಅರ್ಹ ಯೋಜನೆಗೆ, ಗರಿಷ್ಠ 10 ಲಕ್ಷ ರೂ ಮಿತಿಯೊಂದಿಗೆ ಅರ್ಹ ಯೋಜನಾ ವೆಚ್ಚದ ಶೇ.35 ರಷ್ಟು ಕೇಂದ್ರ ಸರ್ಕಾರ ನೀಡುವ ಸಬ್ಸಿಡಿಯಾಗಿದೆ. ಉತ್ಪಾದಕ ಸಹಕಾರ ಸಂಘಗಳಿಗೂ ಶೇ.35 ರಷ್ಟು ಸಂಪರ್ಕಿತ ಅನುದಾನ ನೀಡಲಾಗುವುದು. ಜೊತೆಗೆ ರಾಜ್ಯ ಸರ್ಕಾರದ ಶೇ.15 ರಷ್ಟು ಸಬ್ಸಿಡಿ ಸೇರಿ ಒಟ್ಟು ಶೇ.50 ರಷ್ಟು ಸಬ್ಸಿಡಿ ಪಡೆದುಕೊಳ್ಳಬಹುದಾಗಿದೆ.

ಕಳೆದೊಂದು ವರ್ಷದಲ್ಲಿ ಜಿಲ್ಲೆಯಲ್ಲಿ ಸುಮಾರು 40–42 ಮಂದಿ ಸಣ್ಣ ಸಣ್ಣ ಉದ್ದಿಮೆದಾರರು ಅರ್ಜಿಸಲ್ಲಿಸಿದ್ದು, ಅವರಲ್ಲಿ ಸಾಲ ಪಡೆದವರು ಇಬ್ಬರು ಮಾತ್ರ. ಬಹುತೇಕ ಮಂದಿ ಅರ್ಜಿ ಸಲ್ಲಿಕೆ ನಂತರ ಮುಂದುವರೆಯುವುದಿಲ್ಲ. ಅವರಲ್ಲಿ ಕೆಲವರು ಬ್ಯಾಂಕ್ ಸಮಸ್ಯೆ ಎಂಬ ಕಾರಣ ಹೇಳುತ್ತಾರೆ. ಮನೆಯಲ್ಲಿಯೇ ಹಪ್ಪಳ, ಸಂಡಿಗೆ ಇನ್ನಿತರೆ ಆಹಾರ ಪದಾರ್ಥಗಳನ್ನು ತಯಾರಿಸುವವರಿಗೆ ಈ ಯೋಜನೆ ಅನುಕೂಲಕರವಾಗಿದೆ ಎಂದು ತೋಟಗಾರಿಕೆ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ನಿರಂತರ ಪ್ರಚಾರ: ಕೃಷಿ ಹಾಗೂ ತೋಟಗಾರಿಕೆ ಇಲಾಖೆ ವತಿಯಿಂದ ನಿರಂತರ ಪ್ರಚಾರ ಮಾಡಲಾಗುತ್ತಿದೆ. ಜಿಲ್ಲೆ, ತಾಲೂಕು ಮಟ್ಟದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ, ಮಾಧ್ಯಮಗಳಲ್ಲಿ ಜಾಹೀರಾತು ನೀಡಲಾಗುತ್ತಿದೆ. ಮೇಳಗಳನ್ನು ಆಯೋಜಿಸಲಾಗುತ್ತಿದೆ. ರೈತರು ಅರ್ಜಿ ಸಲ್ಲಿಸಿ, ಬ್ಯಾಂಕ್‌ನವರೆಗೆ ಹೋಗಿ ಸುಮ್ಮನಾಗುತ್ತಿದ್ದಾರೆ. ಬ್ಯಾಂಕ್‌ನವರು ಸಾಲ ಕೊಡಲು ಸಾಧ್ಯವಿಲ್ಲ ಎಂದು ನಮ್ಮಲ್ಲಿ ಬಂದು ಹೇಳಿಕೊಳ್ಳುತ್ತಾರೆ. ಈ ರೀತಿಯಾದರೆ ರೈತಾಪಿ ವರ್ಗದವರು ಉದ್ಯಮಿಗಳಾಗುವುದು ಕಷ್ಟಕರ ಎಂದು ತೋಟಗಾರಿಗೆ ಇಲಾಖೆ ಉಪ ನಿರ್ದೇಶಕ ಕೆ.ರುದ್ರೇಶ್ ತಿಳಿಸಿದರು.

ಮೈಸೂರು ಮಿತ್ರ



ಆರ್‌ಸಿಬಿ ವಿರುದ್ಧ ಚೆನ್ನೈ ಸೂಪರ್ 'ಕಿಂಗ್ಸ್'

• ಕೊನೆಗೂ ಜಯದ ಖಾತೆ ತೆರೆದ ಸಿಎಸ್‌ಕೆ: ಬೆಂಗಳೂರು ಹೋರಾಟ ವ್ಯರ್ಥ • ಸಿಕ್ಸರ್ ಸುರಿಮಳೆಗೈದ ರಾಬಿನ್ ಉತ್ತಪ್ಪ, ಶಿವಂ ದುಬೆ


ರಾಬಿನ್ ಉತ್ತಪ್ಪ (88 ರನ್)


ಪಂದ್ಯ ಶ್ರೇಷ್ಠ ಶಿವಂ ದುಬೆ (95 ರನ್)

ಮುಂಬೈ, ಏ.12– ಕನ್ನಡಿಗ ರಾಬಿನ್ ಉತ್ತಪ್ಪ, ಶಿವಂ ದುಬೆ ಅವರ ಅಬ್ಬರದ ಬ್ಯಾಟಿಂಗ್ ಹಾಗೂ ರವೀಂದ್ರ ಜಡೇಜಾ, ಮಹೇಶ್ ತೀಕ್ಷ್ಣ ಅವರ ಕರಾರುವಾಕ್ ಬೌಲಿಂಗ್ ದಾಳಿ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 23 ರನ್‌ಗಳ ಜಯ ಸಾಧಿಸಿದೆ. ಈ ಮೂಲಕ ಟೂರ್ನಿಯಲ್ಲಿ ಸತತ 4 ಪಂದ್ಯಗಳಲ್ಲಿ ಸೋಲು ಕಂಡಿದ್ದ ಚೆನ್ನೈ ಸೂಪರ್ ಕಿಂಗ್ಸ್, ಕೊನೆಗೂ ಜಯದ ಖಾತೆ ತೆರೆಯುವಲ್ಲಿ ಯಶಸ್ವಿಯಾಯಿತು.

ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ವಾಡಿದ ಚೆನ್ನೈ ಸೂಪರ್ ಕಿಂಗ್ಸ್, ತಂಡದ ಮೊತ್ತ 36 ರನ್ ಆಗುವಷ್ಟರಲ್ಲೇ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ಒಂದಾದ ಕನ್ನಡಿಗ ರಾಬಿನ್ ಉತ್ತಪ್ಪ ಹಾಗೂ ಶಿವಂ ದುಬೆ ಆರ್‌ಸಿಬಿ ಬೌಲಿಂಗ್ ದಾಳಿಯನ್ನು ಚಿಂದಿ ಉಡಾಯಿಸಿದರು. ಮೈದಾನದ ಮೂಲೆ ಮೂಲೆಗೆ ಚೆಂಡನ್ನು ಅಟ್ಟಿದ ಈ ಜೋಡಿ ಸಿಕ್ಸರ್‌ಗಳ ಸುರಿಮಳೆಗೈದರು. ಅಲ್ಲದೇ 3ನೇ ವಿಕೆಟ್‌ಗೆ ದಾಖಲೆಯ 165 ರನ್ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು 200ರ ಗಡಿ ದಾಟಿಸಿ ಬೇರ್ಪಟ್ಟಿತು. ಕೇವಲ 50 ಎಸೆತಗಳಲ್ಲಿ 9 ಸಿಕ್ಸರ್, 4 ಬೌಂಡರಿ ಒಳಗೊಂಡ 88 ರನ್ ಗಳಿಸಿ ಉತ್ತಪ್ಪ ನಿರ್ಗಮಿಸಿದರೇ, ದುಬೆ 46 ಎಸೆತಗಳಲ್ಲಿ 8 ಸಿಕ್ಸರ್, 5 ಬೌಂಡರಿ ಒಳಗೊಂಡ 95 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಚೆನ್ನೈ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 216 ರನ್ ಗಳಿಸಿತು. ಆರ್‌ಸಿಬಿ ಪರ ವಾನಿಂದು ಹಸರಂಗ 2, ಹ್ಯಾಸೆಲ್‌ವುಡ್ 1 ವಿಕೆಟ್ ಕಬಳಿಸಿದರು.

217 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 193 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ಬೃಹತ್ ಮೊತ್ತದ ಚೇಸಿಂಗ್ ಆರಂಭಿಸಿದ ಆರ್‌ಸಿಬಿ ಯಾವ ಹಂತದಲ್ಲೂ ಮೊತ್ತ ಬೆನ್ನಟ್ಟ ಬಹುದಾದ ಛಾತಿ ತೋರಿಸಲಿಲ್ಲ. ತಂಡದ ಮೊತ್ತ 42 ರನ್ ಆಗುವಷ್ಟರಲ್ಲಿ ಅಗ್ರ ಕ್ರಮಾಂಕ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ಆರ್‌ಸಿಬಿ ಪರ ಗ್ಲೇನ್ ಮ್ಯಾಕ್ಸ್‌ವೆಲ್ 26, ಶಹಬ್ಬಾಸ್ ಅಹಮ್ಮದ್ 41, ಪ್ರಭು ದೇಸಾಯಿ, ದಿನೇಶ್ ಕಾರ್ತಿಕ್ ತಲಾ 34ರನ್ ಗಳಿಸಿದ್ದು ಬಿಟ್ಟರೇ ಉಳಿದ ವರಿಂದ ಬೃಹತ್ ಮೊತ್ತ ದಾಖಲಾಗಲಿಲ್ಲ. ಉಳಿದಂತೆ ಮೊಹಮ್ಮದ್ ಸಿರಾಜ್ 14, ಅನುಜ್ ರಾವತ್ 12 ರನ್ ಗಳಿಸಿದರು. ಚೆನ್ನೈ ಸೂಪರ್ ಕಿಂಗ್ಸ್ ಪರ ಮಹೇಶ್ ತೀಕ್ಷ್ಣ 4, ರವೀಂದ್ರ ಜಡೇಜಾ 3 ವಿಕೆಟ್ ಗಳಿಸಿ ಯಶಸ್ವಿ ಬೌಲರ್ ಎನಿಸಿದರು. ಉಳಿದಂತೆ ಮುಖೇಶ್ ಚೌಧರಿ, ಡ್ವೇನ್ ಬ್ರಾವೊ ತಲಾ ಒಂದೊಂದು ವಿಕೆಟ್ ಪಡೆದರು. ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸಿ ತಂಡದ ಗೆಲುವಿಗೆ ಕಾರಣರಾದ ಶಿವಂ ದುಬೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	4	3	1	0	6
ಕೆಕೆಆರ್	5	3	2	0	6
ಲಕ್ನೋ	5	3	2	0	6
ಗುಜರಾತ್	4	3	1	0	6
ಆರ್‌ಸಿಬಿ	5	3	2	0	6
ಡೆಲ್ಲಿ	4	2	2	0	4
ಪಂಜಾಬ್	4	2	2	0	4
ಎಸ್‌ಆರ್‌ಹೆಚ್	4	2	2	0	4
ಸಿಎಸ್‌ಕೆ	5	1	4	0	2
ಮುಂಬೈ	4	0	4	0	0

ಇಂದಿನ ಪಂದ್ಯಗಳು

[ಏಪ್ರಿಲ್ 13]
ಮುಂಬೈ V/S ಪಂಜಾಬ್
ಸ್ಥಳ: ಎಂಸಿಎ ಕ್ರೀಡಾಂಗಣ ಪುಣೆ.
ಸಮಯ: ರಾತ್ರಿ 7.30

ದಕ್ಷಿಣ ಪದವೀಧರರ ಚುನಾವಣೆಯಲ್ಲಿ ನನ್ನ ಗೆಲುವು ನಿಶ್ಚಿತ: ಮಧು ಜಿ. ಮಾದೇಗೌಡ



ಹುಣಸೂರು, ಏ.12(ಕೆಕೆ)– ನನ್ನ ತಂದೆ ಮಾಜಿ ಸಚಿವ ಜಿ.ಮಾದೇಗೌಡರ ಜನಪರ ಕಾರ್ಯಗಳು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರ ಬೆಂಬಲದ ಹಿನ್ನೆಲೆಯಲ್ಲಿ ದಕ್ಷಿಣ ಪದವೀಧರರ ಚುನಾವಣೆಯಲ್ಲಿ ನನ್ನ ಗೆಲುವು ನಿಶ್ಚಿತ ಎಂದು ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ. ಮಾದೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಚುನಾವಣಾ ಪ್ರಚಾರ ಸಂಬಂಧ ಹುಣಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ತಂದೆ ಶಾಸಕ, ಸಂಸದ, ಮಂತ್ರಿಯಾಗಿ ಅನೇಕ ರೈತಪರ, ಕಾವೇರಿ ಹೋರಾಟ ನಡೆಸಿದ್ದು ಜನಮಾನಸದಲ್ಲಿ ಇನ್ನೂ ಅಚ್ಚ ಹಸಿರಾಗಿದೆ. ಭಾರತಿ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಸಾವಿರಕ್ಕೂ ಹೆಚ್ಚು ಮಂದಿಗೆ ಉದ್ಯೋಗ ನೀಡಲಾಗಿದೆ. ತಮ್ಮ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ಸಾವಿರಾರು ಹಿರಿಯ ವಿದ್ಯಾರ್ಥಿಗಳು ಅನೇಕ ಹುದ್ದೆಗಳಲ್ಲಿದ್ದಾರೆ. ಇವರೆಲ್ಲರನ್ನು ಭೇಟಿಯಾಗಿ ಮತಯಾಚಿಸಿದ್ದೇನೆ ಮತ್ತು ಪಕ್ಷದಿಂದ 45 ಸಾವಿರಕ್ಕೂ ಹೆಚ್ಚು ಪದವೀಧರರನ್ನು ನೋಂದಾಯಿಸಿದ್ದು, ಕಾರ್ಯಕರ್ತರ ಪಡೆ ಮನೆ–ಮನೆ ಭೇಟಿ ನೀಡಿ ಮತ ಯಾಚಿಸುತ್ತಿದ್ದಾರೆ. ಕಳೆದ 35 ವರ್ಷಗಳಿಂದ ಕಾಂಗ್ರೆಸ್ ಈ ಕ್ಷೇತ್ರವನ್ನು ಗೆದ್ದಿಲ್ಲ. ಈ ಬಾರಿ ಪಕ್ಷದ ವರಿಷ್ಠರು ಗಂಭೀರವಾಗಿ ಪರಿಗಣಿಸಿದ್ದು, ಈಗಾಗಲೇ 3 ಬಾರಿ ಸಭೆ ಮಾಡಿರುವುದು ಗೆಲುವಿಗೆ ರಹದಾರಿಯಾಗಿದೆ. ತಾವು ಚುನಾಯಿತರಾದಲ್ಲಿ ಪದವೀಧರರ ಧ್ವನಿಯಾಗುತ್ತೇನೆ ಎಂದ ಅವರು ಕ್ಷೇತ್ರದ ಪದವೀಧರರು ಬೆಂಬಲಿಸುವಂತೆ ಮನವಿ ಮಾಡಿದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ತಾಲೂಕಿನಲ್ಲಿ 1800 ಮಂದಿಯನ್ನು ನೋಂದಾಯಿಸಲಾಗಿದೆ. ಇವರ ತಂದೆ ಜಿ.ಮಾದೇಗೌಡರು ಸ್ವಚಾರಿತ್ರ್ಯರಾಗಿದ್ದು, ಆರೋಗ್ಯ, ಶೈಕ್ಷಣಿಕ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಇನ್ನು ಎರಡೂ ಸರ್ಕಾರಗಳ ವೈಫಲ್ಯದಿಂದ ಮಧು ಜಿ.ಮಾದೇಗೌಡರು ಗೆಲುವು ಸಾಧಿಸುತ್ತಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ರಮೇಶ್, ದೇವರಾಜು, ನಾರಾಯಣ್, ಮಾಜಿ ಅಧ್ಯಕ್ಷ ಕೆಂಪೇಗೌಡ, ಮುಖಂಡರಾದ ಸೋಮಶೇಖರ್, ಶಿವರಾಜೇಗೌಡ, ಆನಂದಸ್ವಾಮಿ, ಯುವ ಮುಖಂಡ ಪೂರ್ವಜ್, ಶಿವಯ್ಯ ಇನ್ನಿತರರಿದ್ದರು.


ವಿಜೃಂಭಣೆಯ ಶ್ರೀಚಿಕ್ಕದೇವಮ್ಮನವರ ಪೂಜಾ ಮಹೋತ್ಸವ



ಸರಗೂರು, ಏ.12(ನಾಗೇಶ್)– ತಾಲೂಕಿನ ಚಾಮೇಗೌನಹುಂಡಿಯಲ್ಲಿ ಶ್ರೀಚಿಕ್ಕದೇವಮ್ಮನವರ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಪೂಜಾ ಮಹೋತ್ಸವದ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ತಳಿರು ತೋರಣ ಕಟ್ಟಲಾಯಿತು. ಅಲ್ಲದೇ ಬಣ್ಣ ಬಣ್ಣದ ರಂಗೋಲೆ ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ದೇವಾಲಯದಲ್ಲಿ ಮುಂಜಾನೆಯಿಂದಲೇ ಗಣಪತಿ ಹೋಮ, ಪುಣ್ಯಾಹ, ಕಳಶ ಪ್ರತಿಷ್ಠಾಪನೆ, ನವಗ್ರಹ ಹೋಮ, ಪೂಜಾ ಕೈಂಕರ್ಯಗಳು ಜರುಗಿದವು. ಬಳಿಕ ಕಪಿಲಾ ನದಿಗೆ ತೆರಳಿ ಗಂಗಾ ಪೂಜೆ ಸಲ್ಲಿಸಿ ಶ್ರೀಚಿಕ್ಕದೇವಮ್ಮ ಉತ್ಸವಮೂರ್ತಿಯನ್ನು ಪೂರ್ಣ ಕುಂಭದೊಂದಿಗೆ ಪ್ರಮುಖ ಬೀದಿಗಳಲ್ಲಿ ಸತ್ತಿಗೆಯೊಂದಿಗೆ ಮೆರವಣಿಗೆ ಮಾಡಲಾಯಿತು. ಬಳಿಕ ಉತ್ಸವ ಮೂರ್ತಿ ದೇವಾಲಯ ತಲುಪಿದ ಬಳಿಕ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅಪ್ಪಣ್ಣ ದೇವರ ದರ್ಶನ ಪಡೆದು ಮಾತನಾಡಿ, ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಯಾವುದೇ ಹಬ್ಬಗಳನ್ನು ಆಚರಿಸಲು ಸಾಧ್ಯವಾಗಿರಲಿಲ್ಲ. ಇದೀಗ ಸೋಂಕು ಕಡಿಮೆಯಾಗಿರುವುದರಿಂದ ಜನರು ತಮ್ಮ ಗ್ರಾಮಗಳಲ್ಲಿ ಶ್ರದ್ಧಾಭಕ್ತಿಯಿಂದ ಹಬ್ಬಗಳನ್ನು ಆಚರಿಸುತ್ತಿದ್ದಾರೆ ಎಂದರು. ಈ ವೇಳೆ ಮುಳ್ಳೂರು ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಎಂ.ಪಿ.ಮಂಜುನಾಥ್, ತಾಪಂ, ಗ್ರಾಪಂ ಸದಸ್ಯರು, ಗ್ರಾಮದ ಮುಖಂಡರು ಇದ್ದರು.


ಬನ್ನೂರು ಸಮೀಪದ ಮಾದಿಗಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಆರ್.ರವಿ ಹಾಗೂ ಉಪಾಧ್ಯಕ್ಷರಾಗಿ ಎಂ.ಆರ್.ಸುಹಾಸ್ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಪ್ರಭಾಮಣಿ ಕಾರ್ಯ ನಿರ್ವಹಿಸಿದರು. ಈ ವೇಳೆ ಎಂ.ಎಸ್.ವಿಶ್ವನಾಥ್, ಎಂ.ಸಿದ್ದು, ರವಿ, ಕುಮಾರ್, ಶಂಕರಯ್ಯ, ಗಾಯತ್ರಿ, ಪಾರ್ವತಮ್ಮ, ನಾಗಶೆಟ್ಟಿ, ಪರಂಜ್ಯೋತಿ, ಕಾರ್ಯದರ್ಶಿ ರಮೇಶ್, ಸೋಮೇಗೌಡ, ಶ್ರೀನಿವಾಸ್, ಶೃತಿ, ಸತೀಶ್ ಸೇರಿದಂತೆ ಗ್ರಾಮಸ್ಥರಿದ್ದರು.


ಶಾಸಕ ಹೆಚ್.ಪಿ.ಮಂಜುನಾಥ್ ಕುಟುಂಬ ಸಮೇತರಾಗಿ ಮೇಲುಕೋಟೆ ಶ್ರೀಚೆಲುವನಾರಾಯಣಸ್ವಾಮಿ ಹಾಗೂ ಶ್ರೀಯೋಗಾನರಸಿಂಹಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಈ ವೇಳೆ ಪತ್ನಿ ಸುಪ್ರಿಯಾ ಮಂಜುನಾಥ್, ತಾಯಿ ರತ್ನಮ್ಮ ಪ್ರೇಮಕುಮಾರ್, ಸಹೋದರ ಡಾ.ಶ್ರೀನಾಥ್ ಇತರರಿದ್ದರು.

24 ಗಂಟೆಯೊಳಗೆ ರಕ್ತಜಾಲ ಸಿನಿಮಾ ಚಿತ್ರೀಕರಣ

ನಾಯಕ ಕಂ ನಿರ್ದೇಶಕ ಮೈಸೂರು ವೈಷ್ಣವ್



ತಿ.ನರಸೀಪುರ, ಏ.12(ಎಸ್‌ಕೆ)– ಜ್ಞಾನ–ವಿಜ್ಞಾನದ ನಡುವೆ ನಡೆಯುವ ವಿಭಿನ್ನ ಕಥಾ ಹಂದರ ಒಳಗೊಂಡ 'ರಕ್ತಜಾಲ' ಎಂಬ ಕನ್ನಡ ಸಿನಿಮಾವನ್ನು 24 ಗಂಟೆಯೊಳಗೆ ಚಿತ್ರೀಕರಿಸಲು ನಿರ್ಧರಿಸಲಾಗಿದೆ ಎಂದು ಸಿನಿಮಾ ನಾಯಕ ಕಂ ನಿರ್ದೇಶಕ ಮೈಸೂರು ವೈಷ್ಣವ್ ತಿಳಿಸಿದರು.

ತಾಲೂಕಿನ ತುಂಬಲ ಗ್ರಾಮದ ಫೊರ್ವೋನಿ ರೆಸಾರ್ಟ್‌ನಲ್ಲಿ ಚಿತ್ರಕ್ಕೆ ಸಂಬಂಧಿಸಿದಂತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ಬೆಳಗ್ಗೆ 6 ಘಂಟೆಗೆ ಸಿನಿಮಾದ ಚಿತ್ರೀಕರಣ ಆರಂಭಿಸಿ ಅವಧಿಗೂ ಮೊದಲೇ ಮುಗಿಸಲು ಯೋಜನೆ ಮಾಡಿಕೊಳ್ಳಲಾಗಿದೆ. ಹೊಸ ತಂಡ ವಿಭಿನ್ನ ರೀತಿಯ ಚಿತ್ರಕ್ಕೆ ಕೈ ಹಾಕಿದ್ದು ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವಂತೆ ಅವರು ಮನವಿ ಮಾಡಿದರು.

40 ವರ್ಷಗಳ ಹಿಂದೆ ನಡೆದಿದ್ದ ಕಾಲ್ಪನಿಕ ಹಾಗೂ ಈಗಿನ ವಿದ್ಯಾಮಾನದಲ್ಲಿ ನಂಬಲಸಾಧ್ಯವಾದ ದೈವಶಕ್ತಿ ಹಾಗೂ ಜ್ಞಾನ ವಿಜ್ಞಾನದ ನಡುವಿನ ವಿಭಿನ್ನ ಕಥಾ ಹಂದರ ಚಿತ್ರದಲ್ಲಿರುತ್ತದೆ. ಚಿತ್ರವನ್ನು ಅಂದು ಕೊಂಡ ಅವಧಿಗೆ ಮೊದಲೇ ಅಂದರೆ 18 ಗಂಟೆಯೊಳಗೆ ಮುಗಿಸಲು ಪಕ್ಕಾ ರಿಹರ್ಸಲ್ ಮಾಡಿಕೊಳ್ಳಲಾಗಿದೆ ವರ್ಷಕ್ಕೆ ಬರುವ ನೂರಾರು ಚಿತ್ರಗಳಂತೆ ನಮ್ಮ ಚಿತ್ರ ಇರುವುದಿಲ್ಲ 24 ಗಂಟೆಯಲ್ಲಿ ಸಿದ್ಧಗೊಂಡ ಅನೇಕ ಚಿತ್ರಗಳು ಬಂದಿವೆ. ಅದನ್ನೇ ಸ್ಫೂರ್ತಿಯಾಗಿಸಿಕೊಂಡು ಯುವ ತಂಡ ಹೊಸ ಸಾಹಸಕ್ಕೆ ಕೈ ಹಾಕಿದೆ ಎಂದರು.

ಸಹ ನಿರ್ದೇಶಕ ಹರ್ಷಿತ್ ಸೋಮೇಶ್ವರ್ ಮಾತನಾಡಿ, ಪ್ರತಿ ವಾರ ಸಿನಿಮಾಗಳು ತೆರೆ ಕಾಣುತ್ತವೆ. ಆದರೆ ಆ ಚಿತ್ರಗಳಿಗಿಂತ ನಮ್ಮ ಚಿತ್ರ ವಿಭಿನ್ನ ಶೈಲಿಯಲ್ಲಿ ಮೂಡಿ ಬರಲಿದ್ದು, ನಾಳೆ ಬೆಳಗ್ಗೆ 6 ಘಂಟೆಗೆ ಆರಂಭಗೊಳ್ಳುವ ಚಿತ್ರದ ಚಿತ್ರೀಕರಣದ ಪ್ರತಿ ಷಾಟ್‌ನ ರಿಪೋರ್ಟ್ ಬರೆದಿಡುತ್ತೇವೆ. ಸಾಕ್ಷಿ ಸಮೇತ ಓಟಿಟಿ ಬೌನ್ಸ್ ಮಾಡಲು ಪ್ಲಾನ್ ಮಾಡಿಕೊಳ್ಳಲಾಗಿದೆ. 3 ರಿಂದ 4 ಲೊಕೇಷನ್‌ನಲ್ಲಿ 2 ಯೂನಿಟ್‌ನಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದ್ದು, ಚಿತ್ರದ ಬಹುಭಾಗ ಚಿತ್ರೀಕರಣ ಕಾಡಿಗೆ ಸಂಬಂಧಿಸಿದ್ದರಿಂದ ವಿಭಿನ್ನ ಸೆಟ್ ಹಾಕಿಕೊಳ್ಳಲಾಗಿದೆ ಎಂದರು.

ಚಿತ್ರ ಹೀರೋ ಮೇಲೆ ಅವಲಂಬಿತವಾಗಿಲ್ಲ. ಕಥೆ ಇಲ್ಲಿ ಪ್ರಮುಖ ಪಾತ್ರವಹಿಸಲಿದೆ. ಚಿತ್ರದಲ್ಲಿ ಬರುವ 8ರಿಂದ 10 ಪಾತ್ರಗಳು ಚಿತ್ರಕ್ಕೆ ಬಹು ಮುಖ್ಯವಾಗಲಿವೆ. "ರಕ್ತಜಾಲ' ಚಿತ್ರದಲ್ಲಿ ಗರುಡ ಗಮನ ವೃಷಭ ವಾಹನ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ದೀಪಕ್ ರೈ ಪಣಾಜೆ ನಟಿಸುತ್ತಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಗೀತ ನಿರ್ದೇಶಕ ರೋಹಿತ್ ಪೂಜಾರಿ, ಅಭಿಲಾಷ್ ಬಜ್ಪೆ, ಅಡ್ಕ ಬಾಲಚಂದ್ರಶೆಟ್ಟಿ ಇದ್ದರು.

27.32 ಕೋಟಿ ವೆಚ್ಚದಲ್ಲಿ ಒಳಚರಂಡಿ ನವೀಕರಣಕ್ಕೆ ಚಾಲನೆ

ನಂಜನಗೂಡು, ಏ.12– ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ನಗರದ ಒಳಚರಂಡಿ ಸಮಸ್ಯೆ ನಿವಾರಿಸುವ ಸಲುವಾಗಿ ಒಳಚರಂಡಿ ವ್ಯವಸ್ಥೆ ನವೀಕರಿಸುವ ಯೋಜನೆಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ನಗರದ ವಿದ್ಯಾನಗರ ಬಡಾವಣೆಯಲ್ಲಿ 27 ಕೋಟಿ 32 ಲಕ್ಷ ರೂ. ವೆಚ್ಚದಲ್ಲಿ ಒಳಚರಂಡಿ ವ್ಯವಸ್ಥೆ ನವೀಕರಿಸುವ ಯೋಜನೆಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಗರದಲ್ಲಿ ಒಳಚರಂಡಿ ವ್ಯವಸ್ಥೆ 18 ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ಚುನಾವಣೆ ಸಂದರ್ಭ ನಾಗರಿಕರು ಒಳಚರಂಡಿ ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿದ್ದರು. ಇದನ್ನು ನಾನು ಪ್ರತಿಷ್ಠೆಯಾಗಿ ತೆಗೆದುಕೊಂಡು ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸಿ ಕಾಮಗಾರಿಗೆ ಚಾಲನೆ ನೀಡಿದ್ದೇನೆ. ನಗರೋತ್ಥಾನ ಯೋಜನೆಯಡಿ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲು ಕ್ರಮ ವಹಿಸುತ್ತೇನೆ. ಆ ಮೂಲಕ ನಗರದ ಒಳಚರಂಡಿ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾಗಲಿದೆ. ಸಂಸದ ವಿ.ಶ್ರೀನಿವಾಸ ಪ್ರಸಾದ್ ನಂಜನಗೂಡನ್ನು ಸ್ಯಾಟಲೈಟ್ ಟೌನ್ ಆಗಿ ನಿರ್ಮಿಸಬೇಕೆಂಬ ಸಂಕಲ್ಪ ಹೊಂದಿದ್ದರು. ಅದರಂತೆ ಸ್ಯಾಟಲೈಟ್ ಟೌನ್‌ಗೆ ಬೇಕಿರುವ ರೈಲ್ವೆ ಮೇಲ್ಸೇತುವೆ, ಸೇರಿದಂತೆ ಅಗತ್ಯ ಸೌಕರ್ಯ ಒದಗಿಸಲು ಮುಂದಾಗಿದ್ದೇನೆ ಎಂದರು.



ಯುಜಿಡಿ ಎಇಇ ಉಮೇಶ್‌ಚಂದ್ರ ಮಾತನಾಡಿ, 2007ರಲ್ಲಿ ಈ ಯೋಜನೆ ಪ್ರಾರಂಭಿಸಲಾಯಿತು. ಈಗಾಗಲೇ ಶೇ.70ರಷ್ಟು ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ನವೀಕರಣಗೊಂಡ ಕಾಮಗಾರಿಯಲ್ಲಿ ಶೇ.30 ರಷ್ಟು ಭಾಗಕ್ಕೆ, ಅದರಲ್ಲೂ ಹೊಸ ಬಡಾವಣೆಗಳಿಗೆ ವ್ಯವಸ್ಥೆ ಕಲ್ಪಿಸಬೇಕಿದೆ. ಸುಮಾರು 10,300 ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸಲಾಗುವುದು. ಗೋಳೂರು ಬಳಿಯ 7 ದಶ ಲಕ್ಷ ಲೀ. ಸಾಮರ್ಥ್ಯದ ತ್ಯಾಜ್ಯ ಸಂಸ್ಕರಣ ಘಟಕವನ್ನು 8 ದಶ ಲಕ್ಷ ಲೀಗೆ ಉನ್ನತೀಕರಿಸಲು ಉದ್ದೇಶಿಸಲಾಗಿದ್ದು, ಮುಂದಿನ 1 ವರ್ಷದ ಅವಧಿಯಲ್ಲಿ ಯೋಜನೆ ಪೂರ್ಣಗೊಳಿಸುವ ಮೂಲಕ ಜನರಿಗೆ ಒಳಚರಂಡಿ ಸೌಕರ್ಯ ಕಲ್ಪಿಸಲಾಗುವುದು ಎಂದರು.

ಈ ವೇಳೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸದಸ್ಯರಾದ ಕಪಿಲೇಶ್, ಮಹದೇವ ಪ್ರಸಾದ್, ಬಸವಣ್ಣ, ರಂಗಸ್ವಾಮಿ, ಯಾಸಿನಾ ಬಾನು, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಸುಬ್ಬಣ್ಣ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ತಾಪಂ ಮಾಜಿ ಸದಸ್ಯ ಶಿವಣ್ಣ, ನಗರಸಭಾ ಆಯುಕ್ತ ರಾಜಣ್ಣ, ಒಳಚರಂಡಿ ಮಂಡಳಿ ಎಇಇ ತಿಮ್ಮಪ್ಪ, ಎಇಇ ಉಮೇಶ್‌ಚಂದ್ರ, ಎಇ ವಿದ್ಯಾ, ಮುಖಂಡರಾದ ಬಾಲಚಂದ್ರು, ಕೋಮಲಾ, ನಂದಿನಿ, ಮಹದೇವಸ್ವಾಮಿ ಸೇರಿದಂತೆ ಹಲವರಿದ್ದರು.

"ನಂಜನಗೂಡು ಮೂಡಾ ವ್ಯಾಪ್ತಿಗೆ ಸೇರಿದ್ದರೂ ಸಹ ಗ್ರೇಟರ್ ಮೈಸೂರು ಯೋಜನೆಯಿಂದ ಕೈ ಬಿಡಲಾಗಿದೆ. ಚಾಮುಂಡೇಶ್ವರಿ ಕ್ಷೇತ್ರವನ್ನು ಯೋಜನೆಗೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಬರೀ ಕಾಟಾಚಾರಕ್ಕೆ ಮೂಡಾ ಸದಸ್ಯರನ್ನಾಗಿ ಮಾಡಿಕೊಂಡು ಅಭಿವೃದ್ಧಿಯಿಂದ ನಿರ್ಲಕ್ಷಿಸಲಾಗಿದೆ.
– ಬಿ.ಹರ್ಷವರ್ಧನ್, ಶಾಸಕ.

ಕೌಲನಹಳ್ಳಿ ಡೈರಿ ನಿರ್ದೇಶಕರ ಆಯ್ಕೆ



ಬೆಟ್ಟದಪುರ ಸಮೀಪದ ಕೌಲನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಅಶೋಕ, ಚನ್ನಬಸಪ್ಪ, ರಾಜೇಗೌಡ, ಕೆ.ಎ.ರಾಮಕೃಷ್ಣೇಗೌಡ, ಕೆ.ಟಿ.ರಾಜೇಗೌಡ, ಕುಮಾರ, ಅಣ್ಣೇಗೌಡ ಚುನಾಯಿತರಾದರೆ, ಹಿಂದುಳಿದ ವರ್ಗಗಳ ಮೀಸಲಾತಿ ಮೇಲೆ ನಾಮಪತ್ರ ಸಲ್ಲಿಸಿದ್ದ ಮಹೇಂದ್ರಾಚಾರಿ, ಕೆ.ಆರ್.ಧನಪಾಲ್, ಭಾಗ್ಯಮ್ಮ, ಗಿರಿಜಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಎ.ಎನ್.ಗಿರೀಶ್ ಘೋಷಿಸಿದರು. ಈ ವೇಳೆ ಡೈರಿ ಕಾರ್ಯದರ್ಶಿ ಕೆ.ಪಿ.ಪುನೀತ್, ಸಿಬ್ಬಂದಿ ಮಧು ಸೇರಿದಂತೆ ಇತರರಿದ್ದರು.


ಸರಗೂರು ತಾಲೂಕಿನ ಲಂಕೆ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ನಿವೇಶನ ದಾನ ಮಾಡಿದ ವೀರಶೈವ ಲಿಂಗಾಯತ ಸಮಾಜದ ಶಿವರಾಜಪ್ಪ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿವೇಶನ ದಾನಿಗಳಾದ ವೀರಶೈವ ಲಿಂಗಾಯತ ಸಮಾಜದ ಬಸವಣ್ಣ ಮತ್ತು ಪುತ್ಥಳಿ ನಿರ್ಮಾಣ ಮಾಡಿದ ಗೋಪಾಲ್ ಅವರನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಅನಿಲ್, ಎನ್.ಮಹೇಶ್, ಸಿ.ಎನ್.ಮಂಜೇಗೌಡ ಸೇರಿದಂತೆ ಇತರರು ಸನ್ಮಾನಿಸಿದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಏ. 12– ಮೈಸೂರಿನ ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಇಎಸ್‌ಐ ಕಾರ್ಡುದಾರರಿಗೆ ಮತ್ತು ಕುಟುಂಬ ವರ್ಗದವರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಏ. 30 ರವರೆಗೆ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರ ಮತ್ತು ಸಯ್ಯಾಜಿರಾವ್ ರಸ್ತೆಯ ಆಸ್ಪತ್ರೆಯ ಶಾಖೆಗಳಿಗೆ ಭೇಟಿ ನೀಡಿ ಇದರ ಉಪಯೋಗ ಪಡೆದುಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8884477956 ಸಂಪರ್ಕಿಸಬಹುದು.